# ಜನಶಕ್ತಿ

ದುಡಿವ ಜನರ ಪ್ರಾಣಮಿತ್ರ

ಸಂಪುಟ 2 ಸಂಚಿಕೆ 10

ಮಾರ್ಚ್ 16, 2008

ಕನ್ನಡ ವಾರಪತ್ರಿಕೆ

ರೂ. 5/-





## ಬದಲಾಗಬೇಕಿರುವುದು ನೀತಿಗಳು ಬರೀ ನೇತಾಗಳಲ್ಲ





## ಹಾಸನ : ಅಕ್ರಮ ದಂಧೆಗಳ ತಾಣ



## ತ್ರಿಪುರ ಚುನಾವಣೆ ಎಡರಂಗದ ಅಮೋಘ ವಿಜಯ

## ಬೆಂಗಳೂರು ವಿಮಾನ ನಿಲ್ದಾಣದ ಕತ್ತು ಹಿಸುಕುತ್ತಿದ್ದಾರೆ !



## ಭಾರತ- ಅಮೆರಿಕಾ ಅಣು ಒಪ್ಪಂದ : ಇದು ನಿರ್ಣಾಯಕ ಘಳಿಗೆ



## ಮಹಿಳೆಗೊಂದು ದಿನ ಯಾಕೆ?

## ಚುಚ್ಚುಮದ್ದು

■ ಭಾರತ ಬೇಗನೆ ಐಎಇಎ ಹಾಗೂ ಎನ್‌ಎಸ್‌ಜಿ ಜೊತೆಗಿನ ನಿಬಂಧನೆ ಪೂರ್ಣಗೊಳಿಸಿಕೊಳ್ಳಬೇಕು.ಅಣುಒಪ್ಪಂದಕ್ಕೆ ಅಮೆರಿಕ ಕಾಂಗ್ರೆಸ್ ಒಪ್ಪಿಗೆ ಪಡೆಯಲು ಜೂನ್ ಒಳಗೆ ಮಂಡಿಸಬೇಕು. ಭಾರತದೊಂದಿಗೆ ಅಣು ಒಪ್ಪಂದ ಜಾರಿಗೊಳಿಸುವಾಗ ಅಮೆರಿಕ ಆಡಳಿತ ಹೈಡ್ ಕಾಯ್ದೆಗೆ ಬದ್ಧವಾಗಿರುತ್ತದೆ.

– ರಿಚರ್ಡ್ ಬೌಷರ್, ಅಮೆರಿಕ ವಿದೇಶಾಂಗ ಇಲಾಖೆಯ ಸಹಾಯಕ ಕಾರ್ಯದರ್ಶಿ

⇒ ಮನಮೋಹನ್, ಪ್ರಣಬ್ ಸಾಹೇಬರು ಹೈಡ್ ಕಾಯ್ದೆಗೆ ಬದ್ಧತೆ ಇಲ್ಲ ಅಂತಾರಲ್ಲ!

★

■ "ಬಿಜೆಪಿಯು ಸಂಯುಕ್ತ ಜನತಾದಳದ ಅಂತರಿಕ ವಿಚಾರಗಳಲ್ಲಿ ಹಸ್ತಕ್ಷೇಪ ಮಾಡುತ್ತಿದೆ. ವಿಧಾನ ಪರಿಷತ್ ಸದಸ್ಯ ಬಸವರಾಜ ಬೊಮ್ಮಾಯಿ ಅವರನ್ನು ಕೂಡಲೇ ಪಕ್ಷದಿಂದ ಹೊರಹಾಕಬೇಕು. ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿಯು ರಾಜ್ಯದಲ್ಲಿ ಸಂಯುಕ್ತ ಜನತಾದಳದೊಂದಿಗೆ ಹೊಂದಾಣಿಕೆಗೆ ಮುಂದಾಗಬೇಕು. ಇಲ್ಲದಿದ್ದರೆ ಕೇಂದ್ರದಲ್ಲಿ ನಮ್ಮ ಪಕ್ಷ ಎನ್.ಡಿ.ಎ.ದಿಂದ ಹೊರಬರಲಿದೆ."

– ಶಂಭು ಶ್ರೀ ವಾಸ್ತವ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ, ಸಂಯುಕ್ತಜನತಾದಳ

⇒ ನಿಮ್ಮ ಎರಡೂ ಆಗ್ರಹಗಳೂ ಚೆನ್ನಾಗಿವೆ. ಬೇರೆ ಯಾರೂ ಹೊಂದಾಣಿಕೆಗೆ ಸಿಗದಿದ್ದರೆ ನಿಮ್ಮೊಂದಿಗೆ ಬಿಜೆಪಿ ಹೊಂದಾಣಿಕೆ ಮಾಡಿಕೊಳ್ಳಬಹುದು. ಸ್ವಲ್ಪ ಕಾದು ನೋಡಿ.

★

### ವಿವರ ನೀಡಬಾರದು

■ "ಅಣು ಒಪ್ಪಂದವು ಇಷ್ಟೆಲ್ಲಾ ಚರ್ಚೆ ವಿವಾದಕ್ಕೀಡಾಗಿದ್ದರೂ ರಾಜ್ಯದಲ್ಲಿ ಯಾವೊಬ್ಬ ರಾಜಕಾರಣಿಯೂ ಇದರ ಬಗ್ಗೆ ತಲೆ ಕೆಡಿಸಿಕೊಳ್ಳುತ್ತಿಲ್ಲ. ಕೇವಲ ಒಳಜಗಳ, ಕಿತ್ತಾಟಗಳಲ್ಲೇ ದಿನದೂಡುತ್ತಿದ್ದಾರೆ. ಈ ಬಗ್ಗೆ ರಾಜಕಾರಣಿಗಳು ಚಿಂತಿಸುವ, ಚರ್ಚಿಸುವ ಅಗತ್ಯವಿದೆ.... ಪರಮಾಣು ಒಪ್ಪಂದಕ್ಕೆ ಸಂಬಂಧಿಸಿದಂತೆ ದೇಶದಲ್ಲಿ ಪ್ಲುಟೇನಿಯಂ ಉತ್ಪಾದನೆಯ ವಿವರ ಕೇಳುತ್ತಿರುವ ಅಮೇರಿಕಕ್ಕೆ ಭಾರತ ವಿವರ ನೀಡಬಾರದು. ಈ ಸಂಬಂಧ ಯಾವುದೇ ಪರಿಶೀಲನೆಗೆ ಅಮೇರಿಕಕ್ಕೆ ಅವಕಾಶ ನೀಡದೇ ಭಾರತ ಷರತ್ತು ವಿಧಿಸಬೇಕು".

ಪ್ರೊ.ಬಿ.ಕೆ.ಚಂದ್ರಶೇಖರ್ ಸಭಾಪತಿಗಳು, ವಿಧಾನಪರಿಷತ್

⇒ ವಿಧಾನಸಭಾ ಚುನಾವಣೆಯನ್ನು ಹಿಂದಕ್ಕೆ ಹಾಕೊದಕ್ಕೆ ಅಥವಾ ಮುಂದಕ್ಕೆ ಹಾಕೊದಕ್ಕೆ ಪ್ರಯತ್ನ ಮಾಡೋದು ಬಿಟ್ಟು ನಮಗೆ ಸಂಬಂಧವಿಲ್ಲದ ವಿಷಯದ ಬಗ್ಗೆ ಅಸಂಬದ್ಧ ಮಾತಾಡ್ತಾ ಇದ್ದೀರಲ್ಲ....ಅಂತಿದಾರೆ ಕೆಲವರು.

★

### ತಡೆಯಲಿ

■ "ನಾನು ಮುಂಬೈಗೆ ಹೋಗಿಯೇ ಛಾತ್ ಪೂಜಾ ಆಚರಿಸುತ್ತೇನೆ. ಧೈರ್ಯವಿದ್ದರೆ ರಾಜ್ ಠಾಕ್ರೆ ನನ್ನನ್ನು ತಡೆಯಲಿ."

ಉಮಾಭಾರತಿ ಮಧ್ಯಪ್ರದೇಶದ ಮಾಜಿ ಮುಖ್ಯ ಮಂತ್ರಿ

⇒ ನೀವು ಧರ್ಮದ ಹೆಸರಿನಲ್ಲಿ ಮಾಡುವುದನ್ನು ಅವರು ಭಾಷೆ ಹೆಸರಿನಲ್ಲಿ ಮಾಡುತ್ತಿದ್ದಾರಷ್ಟೆ.

## 'ಶಾಂತಿದೂತ' ಸಂಗಾತಿ ಎಂ.ಜಿನ್ನಾ ಇನ್ನಿಲ್ಲ



ತಮ್ಮ ಯೌವನದಲ್ಲಿ ಎಂ.ಜಿನ್ನಾ

ಹಾವೇರಿ ಜಿಲ್ಲೆ, ಹಾನಗಲ್ ತಾಲ್ಲೂಕಿನ ಅಕ್ಕಿ ಆಲೂರ್ ಗ್ರಾಮ ಪಂಚಾಯತಿಯ ಮಾಜಿ ಸದಸ್ಯರೂ ಸಿಪಿಐ(ಎಂ) ಪಕ್ಷದ ದುರೀಣರೂ ಆಗಿದ್ದ ಕಾಮ್ರೇಡ್ ಮಹ್ಮದ್ ಅಲಿ ಜಿನ್ನಾ ಮಕಾನದಾರ ಅವರು ಫೆಬ್ರವರಿ 17ರಂದು ಭಾನುವಾರ ಹೃದಯಾಘಾತದಿಂದ ನಿಧನರಾಗಿದ್ದಾರೆ. ಅವರಿಗೆ 62 ವರ್ಷ ವಯಸ್ಸಾಗಿತ್ತು. ಪತ್ನಿ ಹಾಗೂ ಒಬ್ಬ ಮಗಳೂ ಸೇರಿದಂತೆ ಐದು ಜನ ಮಕ್ಕಳನ್ನು ಅವರು ಅಗಲಿದ್ದಾರೆ.

**ಭೂಮಿ ಹೋರಾಟದ ಸಂಗಾತಿ**

ಕಾಮ್ರೇಡ್ ಎಂ.ಜಿನ್ನಾರವರು ಕಳೆದ ಸುಮಾರು 3 ವರ್ಷಗಳಿಂದ ಸಿಪಿಐ(ಎಂ) ನೇತೃತ್ವದ ಜನಪರ ಚಳುವಳಿ, ಚಟುವಟಿಕೆಗಳಲ್ಲಿ ಭಾಗವಹಿಸುತ್ತಾ ಬಂದಿದ್ದರು. ಹಾನಗಲ್ ತಾಲ್ಲೂಕಿನಲ್ಲಿ 70ರ ದಶಕದಿಂದ ನಡೆಯುತ್ತಿದ್ದ ಕೃಷಿ ಕೂಲಿಕಾರರ ಭೂ ಹೋರಾಟದಲ್ಲಿ ಅವರು ಭಾಗವಹಿಸಿದ್ದಾರೆ. ಪಕ್ಷದ ದುರೀಣರಾದ ಸಿರ್ಸಿಯ ಕಾಮ್ರೇಡ್ ಧಾರೇಶ್ವರ ಮತ್ತು ಅಕ್ಕಿ ಆಲೂರಿನ ಕಾಮ್ರೇಡ್ ಫಕೀರಪ್ಪ ಹೋತನಹಳ್ಳಿಯವರ ಗರಡಿಯಲ್ಲಿ ಅವರು ಬೆಳೆದಿದ್ದರು. ರೇಡಿಯೋ ಮೂಲಕ ಅಂತರಾಷ್ಟ್ರೀಯ ಬೆಳವಣಿಗೆಗಳನ್ನು ಗಮನಿಸಿ ಅವುಗಳ ಕುರಿತು ಪ್ರಬುದ್ಧವಾದ ವಿಶ್ಲೇಷಣೆ ನಡೆಸುವ ಸಾಮರ್ಥ್ಯವನ್ನು ಅವರು ಪಡೆದಿದ್ದರು.

**ಶಾಂತಿಧೂತ**

ನಾಲ್ಕಾರು ವರ್ಷಗಳ ಹಿಂದೆ ಅಕ್ಕಿ ಆಲೂರಿನಲ್ಲಿ ಹಿಂದು ಕೋಮುವಾದಿ ಶಕ್ತಿಗಳು ಗ್ರಾಮದಲ್ಲಿ ಗಲಭೆಯನ್ನು ಉಂಟು ಮಾಡಲು ಯತ್ನಿಸಿದರು. ಮಸೀದಿಯೊಂದರಿಂದ ಪವಿತ್ರ ಕುರಾನ್ ಮತ್ತಿತರ ಧಾರ್ಮಿಕ ವಸ್ತುಗಳನ್ನು ಕದ್ದು ಅವುಗಳನ್ನು ಸಾರ್ವಜನಿಕ ಶೌಚಾಲಯದಲ್ಲಿ ಮತ್ತು ನೀರು ನಿಲ್ಲುವ ಹೊಂಡದಲ್ಲಿ ಹಾಕಿದ್ದರು. ಈ ಪ್ರಚೋದನಕಾರಿ ಘಟನೆಯಿಂದ ಗ್ರಾಮದ ಮುಸಲ್ಮಾನರು ತೀವ್ರ ಆವೇಶಕ್ಕೊಳಗಾಗಿದ್ದರು. ಅಂತಹ ಸಂದರ್ಭದಲ್ಲಿ ಕಾಂ.ಜಿನ್ನಾ ಅವರು ಶ್ರಮವಹಿಸಿ ಯಾವುದೇ ಅಹಿತಕರ ಘಟನೆ ನಡೆಯದಂತೆ ಮಾಡುವಲ್ಲಿ ಯಶಸ್ವಿಯಾದರು. ಇಂತಹ ಪ್ರಚೋದನಾಕಾರಿ ಘಟನೆಗಳು ಮತ್ತೆ ಪುನರಾವರ್ತನೆಯಾದವು. ಹೋಳಿ ಮೆರವಣಿಗೆಯ ಹೆಸರಿನಲ್ಲಿ ಮಸೀದಿಯ ಮೇಲೆ ದಾಳಿ ಮಾಡುವ ಪ್ರಯತ್ನ ನಡೆಯಿತು. ಗ್ರಾಮದ ದಲಿತರನ್ನು ಎತ್ತಿಕಟ್ಟಿ ಮುಸಲ್ಮಾನರ ಸ್ಮಶಾನ ಜಾಗವನ್ನು ಕಬಳಿಸುವ ಪ್ರಯತ್ನ ನಡೆಯಿತು. ಘರ್ಷಣೆಯಲ್ಲಿ ಗಲಭೆಯನ್ನು ಪ್ರಚೋದಿಸುತ್ತಿದ್ದ ಆರ್.ಎಸ್.ಎಸ್. ಕಾರ್ಯಕರ್ತನ ಹತ್ಯೆಯೂ ಆಯಿತು. ಈ ಎಲ್ಲ ಪ್ರಕ್ಷುಬ್ಧ ಪರಿಸ್ಥಿತಿಯಲ್ಲಿ ಕಾಮ್ರೇಡ್ ಜಿನ್ನಾ ಎರಡೂ ಸಮುದಾಯಗಳ ನಡುವೆ ಶಾಂತಿದೂತನಾಗಿ ಕೆಲಸ ಮಾಡಿದರು. ಕೋಮು ಸೌಹಾರ್ದತೆಗಾಗಿ ಅವರು ಸಲ್ಲಿಸಿದ ಸೇವೆಯನ್ನು ಪರಿಗಣಿಸಿ ಚಿತ್ರದುರ್ಗದ ಮುರುಘರಾಜೇಂದ್ರ ಶರಣರು ಕಾಂ.ಜಿನ್ನಾ ದಂಪತಿಗಳನ್ನು ಮಠಕ್ಕೆ ಬರಮಾಡಿಕೊಂಡು ಅವರಿಗೆ 'ಕೋಮು ಸೌಹಾರ್ದ ಪ್ರಶಸ್ತಿ' ನೀಡಿ ಸನ್ಮಾನಿಸಿದ್ದರು.

**ಅಂತ್ಯಕ್ರಿಯೆ**

ಕಾಂ.ಜಿನ್ನಾ ಅವರ ಅಂತ್ಯಕ್ರಿಯೆ ಫೆಬ್ರವರಿ 18ರಂದು ನಡೆಯಿತು. ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಕಾಂ.ನಿತ್ಯಾನಂದಸ್ವಾಮಿ, ಪಕ್ಷದ ಮುಖಂಡರುಗಳಾದ ಫಕೀರಪ್ಪ ಹೋತನಹಳ್ಳಿ, ಹಕ್ಕಲಗೌಡ ಪಾಟೀಲ್, ಸಹದೇವಪ್ಪ ಕರಬಣ್ಣನವರ, ಅಣ್ಣಪ್ಪ ಚಿಕ್ಕಣ್ಣನವರ, ಬಸವರಾಜ ಪೂಜಾರ್, ರಾಮು ವರ್ದಿ ಮೊದಲಾದವರು ಮತ್ತು ಅವರ ಅಭಿಮಾನಿಗಳು ದೊಡ್ಡ ಸಂಖ್ಯೆಯಲ್ಲಿ ಅವರ ಅಂತಿಮ ಯಾತ್ರೆಯಲ್ಲಿ ಭಾಗವಹಿಸಿದ್ದರು. ಸ್ಮಶಾನದಲ್ಲಿ ಏರ್ಪಡಿಸಲಾಗಿದ್ದ ಶ್ರದ್ಧಾಂಜಲಿ ಸಭೆಯಲ್ಲಿ ಕಾಂ.ನಿತ್ಯಾನಂದಸ್ವಾಮಿ ಮಾತನಾಡಿ ಕಾಂ.ಜಿನ್ನಾ ಅವರು ತಮ್ಮ ಬದುಕಿನಲ್ಲಿ ಅಳವಡಿಸಿಕೊಂಡಿದ್ದ ಆದರ್ಶಗಳನ್ನು ಮುಸ್ಲಿಂ ಸಮಾಜ ಬಾಂಧವರು ಮುನ್ನಡೆಸಿಕೊಂಡು ಹೋಗುವುದು ಅಗತ್ಯವಿದೆ ಎಂದು ಹೇಳಿದರು.

'ಜನಶಕ್ತಿ' ಬಳಗವು ಕಾಂ.ಜಿನ್ನಾ ಅವರ ನಿಧನಕ್ಕೆ ತೀವ್ರ ಸಂತಾಪ ವ್ಯಕ್ತಪಡಿಸುತ್ತದೆಯಲ್ಲದೆ ಅವರ ಕುಟುಂಬದ ಸದಸ್ಯರ ದು:ಖದಲ್ಲಿ ಪಾಲ್ಗೊಳ್ಳುತ್ತದೆ.

## ಹೋರಾಟದಿಂದ ಸಿಕ್ಕ 'ಚೂರು ಸಕ್ಕರೆ' ಫಲಶ್ರುತಿ

ಕಬ್ಬು ಬೆಳೆದು ಕಂಗಾಲಾಗಿರುವ ರೈತರ ಸಮಸ್ಯೆಗಳನ್ನು ತುರ್ತಾಗಿ ಪರಿಹರಿಸಿ ಎಂದೂ ಕಬ್ಬಿಗೆ ಕಾರ್ಖಾನೆಗಳು ನೀಡುವ ಬೆಲೆಯನ್ನು ಟನ್ನಿಗೆ ಕನಿಷ್ಟ 200 ರೂಪಾಯಿಗಳಷ್ಟು ಹೆಚ್ಚಿಸಬೇಕು. ಕಾರ್ಖಾನೆಗಳಲ್ಲಿ ರೈತರು ಬೆಳೆದ ಕಬ್ಬನ್ನು ಅರೆಯಲು ವ್ಯವಸ್ಥೆಯಾಗಬೇಕು ಎಂಬ ಹಲವು ಬೇಡಿಕೆಗಳನ್ನಿಟ್ಟು ಕರ್ನಾಟಕ ಪ್ರಾಂತ ರೈತ ಸಂಘ (ಕೆ.ಪಿ.ಆರ್.ಎಸ್) ಮತ್ತು ಕರ್ನಾಟಕ ರಾಜ್ಯ ರೈತ ಸಂಘ (ಕೆ.ಆರ್.ಆರ್.ಎಸ್) ಸಂಘಟನೆಗಳು ಪ್ರತಿಭಟನೆಗಳನ್ನು ನಡೆಸಿದ್ದವು.

ಪ್ರಾಂತ ರೈತ ಸಂಘವು ಫೆಬ್ರವರಿಯಲ್ಲಿ ರಂದು ಬೆಂಗಳೂರಿನಲ್ಲಿ ರಾಜಭವನ ಚಲೋ ನಡೆಸಿತ್ತು. ಸಂಘದ ನಿಯೋಗವು ರಾಜ್ಯಪಾಲರನ್ನು ಕಂಡು ಈ ಮೇಲ್ಕಂಡ ಬೇಡಿಕೆಗಳಿಗಾಗಿ ಒತ್ತಾಯಿಸಿತ್ತು. ರಾಜ್ಯ ರೈತ ಸಂಘವು ಮಾರ್ಚ್ 2 ರಂದು ಪ್ರತಿಭಟಿಸಿತ್ತು. ಈ ಹೋರಾಟಗಳ ಫಲವಾಗಿ ಕೆಲವು ಪ್ರಮುಖ ಬೇಡಿಕೆಗಳು ಈಡೇರುವಂತಾಗಿದ್ದು, ಕಂಗಾಲಾಗಿ ಆತ್ಮಹತ್ಯೆಯ ಹಾದಿ ಹಿಡಿದಿದ್ದ ರೈತರು ಕೊಂಚ ನಿಟ್ಟುಸಿರು ಬಿಡುವಂತಾಗಿದೆ.

ಶೇಕಡಾ 11 ಇಳುವರಿ (ಅಂದರೆ ಸಕ್ಕರೆ) ನೀಡುವ ಗುಣಮಟ್ಟದ ಕಬ್ಬಿಗೆ ಈಗ ಕಾರ್ಖಾನೆಗಳಲ್ಲಿ ಕೊಡುತ್ತಿರುವ ದರದ ಮೇಲೆ ಮತ್ತೆ 160 ರೂ.ಗಳನ್ನು ನೀಡಲು ಸರ್ಕಾರ ತೀರ್ಮಾನಿಸಿದೆ. ಅದೇ ರೀತಿಯಾಗಿ ಗದ್ದೆಯಿಂದ ಕಾರ್ಖಾನೆಗೆ ಕಬ್ಬನ್ನು ಸಾಗಿಸಲು ಸಾರಿಗೆ ವೆಚ್ಚವಾಗಿ ಟನ್‌ಗೆ ಕಿಲೋ ಮೀಟರ್‌ಗೆ 2 ರೂ ಕೊಡಲು ಸರ್ಕಾರ ಒಪ್ಪಿದೆ.

ರಾಜ್ಯದಲ್ಲಿ ಈಗ ಒಟ್ಟು 54 ಸಕ್ಕರೆ ಕಾರ್ಖಾನೆಗಳಿವೆ. ಆದರೆ ಅದರಲ್ಲಿ 13 ಕಾರ್ಖಾನೆಗಳು ರೋಗಗ್ರಸ್ತವಾಗಿವೆ. ಈ 13 ಕಾರ್ಖಾನೆಗಳನ್ನು ನಡೆಸಲು ಸಹಾಯ ಮಾಡಲು, ಸಕ್ಕರೆ ಕಾರ್ಖಾನೆಗಳಿಗೆ ಸಹಾಯಧನ ನೀಡಲು ಸರ್ಕಾರ ತೀರ್ಮಾನಿಸಿದೆ. ಇದರಿಂದ ರಾಜ್ಯಾದ್ಯಂತ ಕಾರ್ಖಾನೆಗಳು ಕಬ್ಬು ಅರೆಯಲು ಸಹಾಯವಾಗಲಿದೆ. ಇದಲ್ಲದೆ ರಾಜ್ಯದಲ್ಲಿ 17 ಹೊಸ ಖಾಸಗಿ ಸಕ್ಕರೆ ಕಾರ್ಖಾನೆ ಆರಂಭಿಸಲು ಅವಕಾಶ ನೀಡಲಾಗಿದ್ದು ಮುಂದಿನ 2 ವರ್ಷಗಳಲ್ಲಿ ಈ ಕಾರ್ಖಾನೆಗಳು ಅಸ್ತಿತ್ವಕ್ಕೆ ಬರಲಿವೆ.



ಪ್ರಾಂತರೈತ ಸಂಘದ ರಾಜ್‌ಭವನ್ ಚಲೋ ಫೋಟೋ : ಜಿ.ವೆಂಕಟೇಶ್, ಕೆ.ಆರ್.ಪುರಂ

**ಬಾಕಿ ಉಳಿದು ಹೋದ ಬೇಡಿಕೆಗಳು**

ಸಕ್ಕರೆ ವಿಚಾರದಲ್ಲಿ ಹಲವು ಕ್ರಮ ವಹಿಸಿದಂತೆ ಕಬ್ಬಿನ ಮತ್ತೊಂದು ಉತ್ಪನ್ನವಾದ ಬೆಲ್ಲದ ವಿಚಾರದಲ್ಲೂ ಸರ್ಕಾರ ಕೆಲವು ಕ್ರಮ ವಹಿಸಲು ಸಾಧ್ಯವಾಗದಿದ್ದಲ್ಲಿ ಕಬ್ಬು ಬೆಳೆಗಾರರ ಸಮಸ್ಯೆ ನಿವಾರಣೆಗೆ ಮತ್ತಷ್ಟು ಸಹಕಾರಿ ಆಗುತ್ತಿತ್ತು. ಆದರೆ ಅದು ಸಾಧ್ಯವಾಗಿಲ್ಲ. ಬೆಲ್ಲಕ್ಕೆ ಟನ್‌ಗೆ 1500 ರೂ ಬೆಂಬಲ ಬೆಲೆ ನೀಡಬೇಕೆಂದು ಒತ್ತಾಯಿಸಲಾಗಿತ್ತು. ಈಗಿನ ಬೆಂಬಲ ಬೆಲೆ ಕೇವಲ 600 ರೂ. ಮಾತ್ರ ಇದೆ. ಬೆಲ್ಲ ಉತ್ಪಾದಕರಿಗೆ ಆಲೆ ಮನೆಗೆ ಉಚಿತ ವಿದ್ಯುತ್, ಬ್ಯಾಂಕ್ ಸಾಲದ ಸಹಾಯ ಇತ್ಯಾದಿ ಬೇಡಿಕೆ ಇದ್ದವು. ಅವು ಈಡೇರಿಲ್ಲ.

ಉಳಿದಂತೆ ಅರೆಯದೆ ಗದ್ದೆಯಲ್ಲೇ ಉಳಿದು ಹೋದ ಕಬ್ಬಿಗೆ ಹೆಕ್ಟೇರ್‌ಗೆ (2.5 ಎಕರೆಗೆ) 25 ಸಾವಿರ ಪರಿಹಾರ ಘೋಷಣೆ ಮಾಡಲಾಗಿತ್ತು. ಅದರ ಸಲುವಾಗಿ ಈಗ 100 ಕೋಟಿ ರೂ ಹಣ ಬಿಡುಗಡೆಯಾಗಿದೆ. ವಿಜಾಪುರದಲ್ಲಿ ಕಳೆದ 39 ತಿಂಗಳಿಂದ, ಹಲವೆಡೆ ಕಳೆದ 20 ತಿಂಗಳುಗಳಿಂದಲೂ ಕಬ್ಬು ಕಟಾವಾಗದೇ ಉಳಿದಿದೆ.

ಬಗೆಹರಿಯದ ಸಮಸ್ಯೆಗಳ ಕುರಿತು ಚರ್ಚಿಸಲು ಮಾರ್ಚ್ 10ಕ್ಕೆ ಮತ್ತು ರಾಜ್ಯಪಾಲರೊಂದಿಗೆ ಮಾತುಕತೆ ನಿಗದಿಯಾಗಿದೆ. ಮತ್ತೇನಾಗುತ್ತದೆಯೋ ನೋಡಬೇಕು.

## ಸಂಪಾದಕೀಯ

### ತ್ರಿಪುರ ಚುನಾವಣೆ : 'ಆಡಳಿತ ವಿರೋಧಿ' ಅಲ್ಲ ಆಡಳಿತ ಪರವಾದ ಅಲೆ

ತ್ರಿಪುರಾದ ಜನತೆ ಇತಿಹಾಸ ಸೃಷ್ಟಿಸಿದ್ದಾರೆ. ವಿಧಾನಸಭೆಗೆ ನಡೆದ ಚುನಾವಣೆಯಲ್ಲಿ ಎಡರಂಗವನ್ನು ಸತತವಾಗಿ ನಾಲ್ಕನೆಯ ಬಾರಿಗೆ ಪ್ರಚಂಡ ಬಹುಮತ ನೀಡಿ ಗೆಲ್ಲಿಸಿದ್ದಾರೆ. ಇದು ತ್ರಿಪುರಾದಲ್ಲಿ ಎಡರಂಗದ ಆರನೇಯ ಸರ್ಕಾರದ ರಚನೆಗೆ ಜನತೆ ನೀಡಿದ ತೀರ್ಪು. ಅಲ್ಲದೇ ಶೇ.92ರಷ್ಟು ಮತದಾನವಾದದ್ದು ನಿಜಕ್ಕೂ ಇಡೀ ದೇಶದಲ್ಲೇ ದಾಖಲೆಯಾಗಿದೆ. ಮುಕ್ತ ಮತ್ತು ನ್ಯಾಯಸಮ್ಮತ ಚುನಾವಣೆ ನಡೆದಿರುವುದಕ್ಕೆ ಇದು ಸಾಕ್ಷಿಯಾಗಿದೆ. ಅವರು ತಮ್ಮ ಪ್ರಜಾಸತ್ತಾತ್ಮಕ ಹಕ್ಕನ್ನು ಚಲಾಯಿಸುವ, ಭಾಗವಹಿಸುವ ಪ್ರೇರಣೆ ಬಲಗೊಳಿಸಿದ್ದು ಎಡರಂಗ ಸರ್ಕಾರದ ಯಶಸ್ಸು ಕೂಡ. ಎಡರಂಗ ಇಂತಹ ಅಭೂತಪೂರ್ವ ವಿಜಯವನ್ನು ಸಾಧಿಸಿರುವುದಕ್ಕೆ ಈ ತೀರ್ಪು ನೀಡಿರುವ ಜನತೆಯನ್ನು ಮನದುಂಬಿ ಅಭಿನಂದಿಸಬೇಕಾಗಿದೆ. ಹಾಗೆಯೇ ಇದಕ್ಕಾಗಿ ಶ್ರಮಿಸಿದ ಕಾರ್ಯಕರ್ತರನ್ನೂ.

60 ಸ್ಥಾನಗಳ ವಿಧಾನಸಭೆಯಲ್ಲಿ ಎಡರಂಗಕ್ಕೆ 49 ಸ್ಥಾನ ಲಭಿಸಿದೆ. ಕಳೆದ ಬಾರಿಗಿಂತ 8 ಸ್ಥಾನಗಳು ಅಧಿಕ. ಶೇಕಡವಾರು ಮತಗಳಲ್ಲಿಯೂ ಮುನ್ನಡೆಯೇ. ಇದು ಸಾಧ್ಯವಾದದ್ದು ಎಡರಂಗದ ಜನಪರ ನೀತಿ, ಆಡಳಿತದಿಂದ. ಇಂದು ಹಲವು ರಾಜ್ಯಗಳಲ್ಲಿ ಅಧಿಕಾರದಲ್ಲಿದ್ದ ಪಕ್ಷಗಳನ್ನು ಮತ್ತೆ ಅಧಿಕಾರಕ್ಕೆ ತಂದ ಉದಾಹರಣೆಗಳು ಕಡಿಮೆ. ಜನ ಇಂತಹ ಸರ್ಕಾರಗಳನ್ನು, ಆಳುವ ಪಕ್ಷವನ್ನು ತಿರಸ್ಕರಿಸುವುದರ ಮೂಲ ಕಾರಣಗಳನ್ನು ನಿಖರವಾಗಿ ಗುರುತಿಸಿ ಜನರೆದುರು ತೆರೆದಿಡಲು ನಿರಾಕರಿಸುವವರು 'ಆಡಳಿತ ವಿರೋಧಿ ಮನೋಭಾವ'ವೇ ಕಾರಣ ಎಂದೆಲ್ಲಾ ನೆಪ ಹೇಳಿ ಕೈತೊಳೆದುಕೊಳ್ಳುತ್ತಾರೆ. ಆದರೆ ತ್ರಿಪುರಾದಲ್ಲಿ ಈ ಮನೋಭಾವ ಯಾಕಿಲ್ಲ? ಈ ಬಗ್ಗೆ ವಸ್ತುನಿಷ್ಠ ವಿಶ್ಲೇಷಣೆಯೂ ಅತ್ಯಗತ್ಯ.


ಎಡರಂಗ ಸರ್ಕಾರ ದುಡಿಯುವ ಜನತೆಯ, ವಿಶಾಲವಾಗಿ ಪ್ರಗತಿಪರ, ಪ್ರಜಾಸತ್ತಾತ್ಮಕ ಶಕ್ತಿಗಳನ್ನು ಒಳಗೊಂಡು ಮುನ್ನಡೆಯದಿರುವವದರ ದ್ಯೋತಕವಿದು. ಒಂದೆಡೆ ಕೇಂದ್ರ ಸರ್ಕಾರ ಜಾರಿಗೊಳಿಸುತ್ತಿರುವ ದಿವಾಳಿಖೋರ ಆರ್ಥಿಕ ನೀತಿಗಳ ಧಾಳಿ, ಅತ್ಯಂತ ಸೀಮಿತ ಸಂಪನ್ಮೂಲಗಳು, ಕೇಂದ್ರ ಸರ್ಕಾರ ರಾಜ್ಯಕ್ಕೆ ಸಯಾಯ ನೀಡದೇ ಸತತವಾಗಿ ಅನುಸರಿಸಿದ ತಾರತಮ್ಯ, ಅಭಿವೃದ್ಧಿಗೆ ಕೇಂದ್ರದ ಕೊಡುಗೆ ತೀರಾ ನಗಣ್ಯ.ಯಾಕೆಂದರೆ ಜನತೆ ತಮಗೆ ನೆಚ್ಚಿಗೆಯಾದ ಎಡರಂಗ ಸರ್ಕಾರವನ್ನು ಒಪ್ಪಿಕೊಂಡಿದ್ದಕ್ಕೆ ರಾಜಕೀಯ ಸೇಡು ತೀರಿಸಿಕೊಳ್ಳುವಂತಹ ಕ್ರಮಗಳು. ಮೇಲಾಗಿ ತ್ರಿಪುರಾದ ಒಳಗೆ ಹೊರಗೆ ಉಗ್ರಗಾಮಿಗಳ ಸತತ ಧಾಳಿ. ಇದಕ್ಕೆ ಕಾಂಗ್ರೆಸ್, ಕುಮ್ಮಕ್ಕು-ಮಾತ್ರವಲ್ಲ ಅಂತಹ ಶಕ್ತಿಗಳೊಂದಿಗೆ ನೇರ ಹಸ್ತಲಾಘವದ ಕಾರ್ಯಾಚರಣೆ. ಇದಕ್ಕೆ ಅಂತರಾಷ್ಟ್ರೀಯವಾಗಿಯೂ ಎಡಶಕ್ತಿಗಳ ವಿರುದ್ಧ ಹಲ್ಲು ಮಸೆಯುತ್ತಿರುವ ಸಾಮ್ರಾಜ್ಯಶಾಹಿಗಳ ನೆರವು. ಎಷ್ಟೊಂದು ಸವಾಲುಗಳು. ಇಂತಹುವುಗಳನ್ನು ಅಲ್ಲಿನ ದುಡಿಯುವ ಜನ ತಮ್ಮ ಕುಡುಗೋಲು, ಸುತ್ತಿಗೆಗಳಿಂದ ಎದುರಿಸಿ ಹಿಮ್ಮೆಟ್ಟಿಸಿದ್ದಾರೆ. ವಿಯೆಟ್ನಾಂನ ಜಾನಪದ ವೀರರಂತೆ ಬಿದಿರು ಮೆಳೆಗಳನ್ನೇ ಕಿತ್ತು ಶತ್ರುನೊಂದಿಗೆ ಸೆಣಸಿ, ಜಯ ಸಾಧಿಸಿದ್ದಾರಂತೆ.

ಆದ್ದರಿಂದಲೇ ಈ ಹೋರಾಟದಲ್ಲಿ ದುಡಿಯುವ ವರ್ಗ, ಬುಡಕಟ್ಟು ಬುಡಕಟ್ಟೇತರರು, ಬುದ್ಧಿ ಜೀವಿ ಮತ್ತಿತರೆ ವಿಭಾಗಗಳು ಒಂದಾಗಿ ನಿಂತಿದ್ದಾರೆ. ಒಬ್ಬರನ್ನು ಇನ್ನೊಬ್ಬರ ವಿರುದ್ಧ ಎತ್ತಿಕಟ್ಟುವ ಕುತಂತ್ರಗಳನ್ನು ಸೋಲಿಸಿ ಐಕ್ಯತೆ ಸಾಧಿಸಿದ್ದು, ಗಮನಾರ್ಹವೇ. ಈ ಬಾರಿ ಕಾಂಗ್ರೆಸ್ ಪಕ್ಷದ ಬೆಂಬಲಿಗರೂ ಎಡರಂಗವನ್ನು ಬೆಂಬಲಿಸಿದ್ದು ಇದನ್ನೇ ತೋರಿಸುತ್ತದೆ. ಅದಕ್ಕಾಗಿಯೇ ಜನತೆ ಕಾಂಗ್ರೆಸ್ ಮತ್ತು ಐಎನ್‌ಪಿಟಿಯ ಸಂದರ್ಭಸಾಧಕ ಮೈತ್ರಿ ತಿರಸ್ಕರಿಸಿರುವುದು.

ಈ ವಿಜಯಕ್ಕೆ ಇನ್ನೊಂದು ಗರಿಮೆ-ಹಿರಿಮೆ ಇದೆ. ಕೇಂದ್ರದ ಯುಪಿಎ ಸರ್ಕಾರಕ್ಕೆ ಬಾಹ್ಯ ಬೆಂಬಲ ನೀಡಿರುವ ಎಡಪಕ್ಷಗಳ ವಿಮರ್ಶಾತ್ಮಕ ಬೆಂಬಲ, ವಿಶೇಷವಾಗಿ ಅಮೇರಿಕಾದೊಂದಿಗಿನ ಅಣು ಒಪ್ಪಂದದ ದೃಢ ವಿರೋಧಕ್ಕೆ ಜನತೆಯ ಬೆಂಬಲ ವ್ಯಕ್ತವಾಗಿರುವುದು. ಇದರಿಂದಲಾದರೂ ಕಾಂಗ್ರೆಸ್ ಪಾಠ ಕಲಿತೀತೇ ಎಂದು ಜನತೆ ನಿರೀಕ್ಷಿಸುವುದು ಸಹಜವೇ.

ಅಭೂತಪೂರ್ವ ವಿಜಯ ಸಾಧಿಸಿರುವ ಎಡರಂಗ ಸರ್ಕಾರ ಇನ್ನೂ ಹೆಚ್ಚಿಗೆ ಅಧಿಕಾರವನ್ನು ಜನತೆಗಾಗಿ ಬಳಸಲಿ. ಜನರ ಜೀವನಮಟ್ಟ, ಪ್ರಗತಿ ಸಾಧನೆಗೆ ಶಕ್ತಿಮೀರಿ ಶ್ರಮಿಸಲಿ ಎಂಬುದು ಎಲ್ಲಾ ಪ್ರಗತಿಪರರ ಹಾರೈಕೆ.

# ಬದಲಾಗಬೇಕಿರುವುದು ನೀತಿಗಳೇ ಹೊರತು ಬರೀ ನೇತಾಗಳಲ್ಲ




"ಬಂದಾನೋ, ಬರನೋ" ಎಂಬಂತಹ ಸುದ್ದಿ ಸೃಷ್ಟಿಯ ಕೌತುಕಕ್ಕೆ ಒಂದು ಪೂರ್ಣ ವಿರಾಮ ಸಿಕ್ಕಿದೆ. ಕರ್ನಾಟಕದ ಇಂದಿನ ರಾಜಕೀಯ ಸನ್ನಿವೇಶದಲ್ಲಿ ತಮ್ಮನ್ನು ಮುನ್ನಡೆಸುವ ಬೆಳಕೆಂದು ಹಲವು ಕಾಂಗ್ರೆಸ್ ನಾಯಕರು ಭಾವಿಸಿದ್ದರೆ, ಎಸ್.ಎಂ.ಕೃಷ್ಣರ ಆಗಮನವೇ ರಾಜ್ಯದ ರಾಜಕೀಯ ಚಿತ್ರ ಬದಲಿಸಿ ಬಿಡಲಿದೆ ಎಂದು ಪತ್ರಿಕೆ, ಟಿ.ವಿ. ಮಾಧ್ಯಮಗಳು, ಭ್ರಮೆ ಬಿತ್ತಿದ್ದವು. ಕಾಂಗ್ರೆಸ್ ಪಕ್ಷದೊಳಗೆ ಇದಕ್ಕೆ ವಿರೋಧವು ಇದ್ದದ್ದು, ಯಥಾರೀತಿ ಕೃಷ್ಣಾಹ್ವಾನದ ವಿಷಯವನ್ನು ಹೈಕಮಾಂಡ್ ತೀರ್ಮಾನಕ್ಕೆ ಹೊತ್ತು ಹಾಕಿದ್ದು ಆಗಿತ್ತು. ಮಹಾರಾಷ್ಟ್ರದ ರಾಜ್ಯಪಾಲರಾಗಿ ಕಳೆದ ಚುನಾವಣಾ ಫಲಿತಾಂಶದಿಂದ ಬಳಿಕ ವರ್ಗಾಯಿಸಲ್ಪಟ್ಟಿದ್ದ ಎಸ್.ಎಂ.ಕೃಷ್ಣ ಆ ಸ್ಥಾನಕ್ಕೆ ರಾಜಿನಾಮೆ ಕೊಡುವುದರೊಂದಿಗೆ ರಾಜ್ಯದ ರಾಜಕಾರಣದಲ್ಲಿ ಸಕ್ರಿಯ ಪಾತ್ರ ವಹಿಸುವುದು ಖಾತ್ರಿಯಾಗಿದೆ. ಕೃಷ್ಣರ ಬಲ, ವರ್ಚಸ್ಸು ಅದೆಂತಹ ಸ್ಥಾನವನ್ನು ಹೈಕಮಾಂಡ್ ನೀಡುವುದೋ ಅದು ಕಾಂಗ್ರೆಸ್ ಪಕ್ಷದೊಳಗಿನ ಆಂತರಿಕ ವಿದ್ಯಮಾನ.

ಕರ್ನಾಟಕದ ವಿಧಾನಸಭೆಗೆ ಚುನಾವಣೆಗಳು ನಿಶ್ಚಿತವಾಗಿರುವುದರಿಂದ, ಕೇಂದ್ರದಲ್ಲಿಯೂ ಚುನಾವಣೆಗೆ ಹೋಗಬೇಕೆಂಬ ಲೆಕ್ಕಾಚಾರದಲ್ಲಿ ಕಾಂಗ್ರೆಸ್ ಇರುವುದರಿಂದಾಗಿ ರಾಜ್ಯದಲ್ಲಿ ಅಧಿಕ ಸ್ಥಾನ ಗಳಿಸಿ ಕೇಂದ್ರ ಸರ್ಕಾರ, ರಾಜ್ಯ ಸರ್ಕಾರದ ರಚನೆಗೆ ಹೆಚ್ಚಿನ ಕೊಡುಗೆ ಇಲ್ಲಿಂದ ಬರಬೇಕೆಂದು ಕಾಂಗ್ರೆಸ್ ಹೈಕಮಾಂಡ್ ಬಯಸಿದೆ. ಅದಕ್ಕಾಗಿಯೇ ಇಂತಹ ಕಸರತ್ತು. ಕೃಷ್ಣರ ಮೂಲಕ ಒಕ್ಕಲಿಗರನ್ನು, ಖರ್ಗೆಯನ್ನು ತೋರಿಸಿ ದಲಿತರನ್ನು, ಸಿದ್ಧರಾಮಯ್ಯನವರಿಂದ ಕುರುಬ, ಹಿಂದುಳಿದ ವರ್ಗಗಳನ್ನು ಎಂ.ಪಿ.ಪ್ರಕಾಶ್ ಸೇರ್ಪಡೆಗೊಂಡರೆ ಲಿಂಗಾಯಿತರನ್ನು ಮತಗಳಾಗಿ ಸೆಳೆಯಬಹುದು ಎಂಬ ಸರಳ ಲೆಕ್ಕಾಚಾರ ಕಾಂಗ್ರೆಸ್‌ಗೆ ಇದೆ. ರಾಜಕೀಯ ಎಂಬುದು ಇಷ್ಟು ಸರಳ ಲೆಕ್ಕಾಚಾರವೇ ಅಲ್ಲ ಎಂಬುದನ್ನು ಕಾಂಗ್ರೆಸ್‌ಗೆ ತಿಳಿಯದ ವಿಷಯವೇನಲ್ಲ. ಆದರೆ ಕಾಂಗ್ರೆಸ್ ಅಂತಿಮವಾಗಿ ಕೇಂದ್ರ ಬಜೆಟ್‌ನ ಮೂಲಕ ಅರೆ ಮನಸ್ಸಿನಿಂದಲೇ ಏನೋ ಒಂದಿಷ್ಟು ಜನರಿಗೆ ಸಹಾಯ ಮಾಡಿದೆ ಎಂಬುದನ್ನೇ ಬಳಸಲು ಪ್ರಯತ್ನಿಸಿದರೂ, ಅದು ಈ ಕೂಡಲೇ ರಾಜಕೀಯ ಲಾಭ ಸಿಕ್ಕಿಬಿಡಲಿದೆ ಎಂದು ಖಾತ್ರಿಪಡಿಸಿಕೊಳ್ಳಲು ಸಾಧ್ಯವಾಗಲಿಕ್ಕಿಲ್ಲ. ಆದ್ದರಿಂದಲೇ ಕೊನೆಗೆ ಅದು ಜಾತಿಗಳ "ಮತ" ಕ್ರೋಢೀಕರಣವನ್ನೇ ಆಧರಿಸಿದಂತಿದೆ. ಆದ್ದರಿಂದಲೇ ಇಂತಹ ಮುಖ್ಯ ಬದಲಾವಣೆ.

ಇಂತಹ ನೀತಿಯೊಂದಿಗೆ ನೇತಾರರು ಯಾರಿದ್ದರೇನು?




ಇಂತಹ ಮುಖಗಳು ಬರಬಹುದೂ, ಹೋಗಬಹುದು. ಆದರೆ ಜನರ ಪ್ರಶ್ನೆ ಎಂತಹ ಮುಖಗಳು ಪ್ರದರ್ಶನಗೊಳ್ಳಲಿವೆ ಎಂಬುದಲ್ಲ. ಸಂಕಷ್ಟದ ತಮ್ಮ ಬದುಕಿಗೆ ಬವಣೆಗಳಿಗೆ ಏನಾದರೂ ಒಂದಿಷ್ಟು ಪರಿಹಾರ ಸಿಗಲಿದೆಯೇ? ಸಾಂತ್ವನ ದೊರೆತೀತೇ? ಜರ್ಝರಿತ ತಮ್ಮ ಬದುಕು ಉಳಿದಿತೇ? ಇತ್ಯಾದಿ ಪ್ರಶ್ನೆಗಳು. ಜನರ ಹೆಗಲ ಮೇಲೆ ಬೆಂಕಿಹಚ್ಚಿ ಅವರು ಇಂತಹ ಬವಣೆಗಳ ಹೊರೆ ಹೊರಿಸಿ ಮೈಕಾಯಿಸಿಕೊಳ್ಳುವುದನ್ನು ಜನತೆ ಬಯಸುವುದಿಲ್ಲ. ಆದ್ದರಿಂದಲೇ ಮೂಲಭೂತವಾಗಿ ಬೇಕಿರುವುದು ನೀತಿಗಳ ಬದಲಾವಣೆ. ತನ್ನ ಜನವಿರೋಧಿ ನೀತಿಗಳನ್ನು ಕಾಂಗ್ರೆಸ್ ಕೈಬಿಡಲಿದೆಯೇ ಎಂಬುದೇ ಪ್ರಮುಖ ಪ್ರಶ್ನೆ.

ಇಂದು 'ಕಾಂಗ್ರೆಸ್‌ನ್ನು 'ಕಾಪಾಡಲೆಂದೇ' ಆಗಮಿಸಿರುವ ಕೃಷ್ಣರ ಮುಖ ಅವರ ಆಡಳಿತ ಅಪರಿಚಿತವೇನಲ್ಲ. ಹಲವು ವರುಷಗಳು ರಾಜ್ಯಸಭಾ ಸದಸ್ಯರಾಗಿ ರಾಜ್ಯದಲ್ಲಿ ಸಚಿವರಾಗಿ, ಮುಖ್ಯಮಂತ್ರಿಯಾಗಿ, ವಿರಾಜಿಸಿದವರು. ಈ ಹಿಂದಿನ ಅವಧಿಯಲ್ಲೇ ಅವರು ಅನುಸರಿಸಿದ ಉದಾರೀಕರಣ, ಜಾಗತೀಕರಣ ಆರ್ಥಿಕ ನೀತಿಗಳಿಂದ ಬಹುರಾಷ್ಟ್ರೀಯ ಕಂಪನಿಗಳು, ವಿದೇಶಿ ಬಂಡವಾಳಗಾರರು ಕೊಬ್ಬಿ, ಕೃಷ್ಣರನ್ನು ಹೈಟೆಕ್ ಮುಖ್ಯಮಂತ್ರಿ 'ನಂಬರ್ ಒನ್ ಸಿ.ಎಂ' ಎಂದೆಲ್ಲಾ ಹಾಡಿ ಹೊಗಳುತ್ತಿರುವಾಗಲೇ ಸಾಲದ ಬಾಧೆ, ಕಾರ್ಷಿಕ ಬಿಕ್ಕಟ್ಟಿನ ಪರಿಣಾಮವಾಗಿ ರೈತರ ಆತ್ಮಹತ್ಯೆ ಸರಣಿಯಾಗಿ ನಡೆದವು. ಇದಕ್ಕೆ ವೀರೇಶ್ ಸಮಿತಿ ರಚಿಸಿ, ಅಧ್ಯಯನದ ಹೆಸರಿನಲ್ಲಿ ಪರಿಹಾರಕ್ಕಾಗಿ ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ ಎಂದು ಹೇಳಿಸಿಯೂ ಆಯಿತು. ಬೆಂಗಳೂರು ಸಿಂಗಾಪುರವಾಗುವ ಕನಸಿನ ಸುವಾಸನೆ ಹಚ್ಚಿದ ಜೊತೆಗೆಯೇ ಗ್ರಾಮೀಣ ಪ್ರದೇಶಗಳಲ್ಲಿ ದಿವಾಳಿಯೆದ್ದವರು ಉದ್ಯೋಗ ಹುಡುಕಿ ಊರೂರು ಅಲೆದಾಡಿದರು. ಅಭಿವೃದ್ಧಿಯ ಹೆಸರಿನಲ್ಲಿ ಖಾಸಗಿ ವ್ಯಕ್ತಿಗಳು, ಕಂಪನಿಗಳೂ ಮಿತಿಮೀರಿ ಕೊಳ್ಳೆಹೊಡೆದರು. ರೇಷನ್ ವ್ಯವಸ್ಥೆ ಸರಿಪಡಿಸುವ ಬದಲು ತನ್ನದೂ ಒಂದು ಏಟು ಎಂದು ಬಡಜನರ ಅನ್ನಕ್ಕೆ ಕಲ್ಲು ಹಾಕಲಾಯಿತು. ಜನ ಬರಕ್ಕೆ ಸಿಕ್ಕು ತತ್ತರಿಸುತ್ತಿರುವಾಗ ಕೇಳುವವರೇ ಇಲ್ಲವಾಯಿತು. ಕೂಲಿಗಾಗಿ ಕಾಳು ಎಂಬ ಯೋಜನೆಯಲ್ಲಿ ಕಾಳು ಕಾಳಸಂತೆಖೋರರ ಗೋದಾಮು ಸೇರಿದವು.

ಇನ್ನೊಂದು ಗಂಭೀರ ಪ್ರಶ್ನೆ ಎಂದರೆ (ದೇಶದಲ್ಲಿ) ಕೋಮುದ್ವೇಷ, ಮತೀಯ ವಿಭಜನೆಯಿಂದ ರಾಜ್ಯಕ್ಕೆ ಕಿಚ್ಚನಿಕ್ಕಿ, ಸೌಹಾರ್ದತೆ ಹಾಳುಗೆಡಹಿದಾಗ ಕೋಮುವಾದಿಗಳನ್ನು ಅವರ ಘಾತುಕ ಧಾಳಿಗಳನ್ನು ಅತ್ಯಂತ ದೃಡತೆಯಿಂದ ಎದುರಿಸದೇ ಅಂತಹ ಕೋಮುವಾದಿಗಳೊಂದಿಗೆ ಕೈಜೋಡಿಸಿ, ರಾಜಕೀಯ ದುರ್ಲಾಭ ಹೊಡೆಯಲು ಕೃಷ್ಣರ ಸರ್ಕಾರ ಪ್ರಯತ್ನಿಸಿದ್ದು ಇನ್ನೂ ಮರೆತಿಲ್ಲ. ಸೌಹಾರ್ದತೆಯ ಸಂಕೇತವಾಗಿರುವ ಬಾಬಾಬುಡನ್‌ಗಿರಿಯಲ್ಲಿ ಸಂಘಪರಿವಾರದ ಕೋಮುವಾದಿಗಳ ವಿಕೃತತೆ ತಡೆಯದೇ, ಸಾಮರಸ್ಯ ಬಯಸಿದವರನ್ನೇ ಕಾರಾಗ್ರಹಕ್ಕೆ ತಳ್ಳಿದ್ದು ಯಾರೂ ಮರೆತಿಲ್ಲ. ಅಂದರೆ ಒಂದೆಡೆ ದಿವಾಳಿಖೋರ, ಜನವಿರೋಧಿ ಆರ್ಥಿಕ ನೀತಿಗಳು, ಇನ್ನೊಂದೆಡೆ ಜನರ ಹಾದಿ ತಪ್ಪಿಸಿ, ಸುಲಿಗೆಯ ಪ್ರಪಾತದಲ್ಲೇ ಉಳಿಸುವ ಒಗ್ಗಟ್ಟು ಮುರಿಯುವ ಪ್ರತಿಗಾಮಿ ಆರ್ಥಿಕ, ಸಾಮಾಜಿಕ ನೀತಿಗಳ ಸಮರ್ಥಕರೂ, ಆರಾಧಕರೂ ಆಗಿರುವ ಕೋಮುವಾದಿಗಳಿಗೆ ಕುಮ್ಮಕ್ಕು ನೀಡಿ ರಾಜಿ ಮಾಡಿಕೊಂಡದ್ದು ಇದೇ. ಆಪತ್‌ಬಾಂಧವ' ಕೃಷ್ಣ. ಅರ್ಥಾತ್ ಕಾಂಗ್ರೆಸ್ ಪಕ್ಷವೇ ಅಲ್ಲವೇ? ಈ ನೀತಿಗಳಿಂದ 'ಅತ್ಯಂತ ಜನಪ್ರಿಯತೆ' ಪಡೆದಿದ್ದರಿಂದಲೇ ಕೃಷ್ಣರವರು ತಾವು ಆಯ್ಕೆಯಾಗಿದ್ದ ಹುಟ್ಟೂರು ಆಗಿದ್ದ ಕ್ಷೇತ್ರದಿಂದ ಬೆಂಗಳೂರಿನ ಚಾಮರಾಜಪೇಟೆ ಕ್ಷೇತ್ರದಲ್ಲಿ ಸ್ಪರ್ಧಿಸಿ ಸುರಕ್ಷವಾಗ ಬಯಸಿದ್ದು. ಕೊನೆಗೆ ಜನತೆ ಕಾಂಗ್ರೆಸ್‌ನ ಹೈಟೆಕ್ ಮಾತುಗಳಿಗೆ ಮರುಳಾಗದೇ ಸೋಲಿಸಿ, ಈ ನೀತಿಗಳಿಗೆ ತಿರುಗೇಟು ನೀಡಿ ಜನಾದೇಶ ಹೊರಡಿಸಿದ್ದು. ಆದರೆ ಕಾಂಗ್ರೆಸ್ ಜನರ ತೀರ್ಪಿನಿಂದಲಾದರೂ ಪಾಠ ಕಲಿಯಲಿಲ್ಲ. ಕಲಿಯಲು ಸಿದ್ಧರೂ ಇಲ್ಲ ಎಂಬುದನ್ನು ತನದಂತರದಲ್ಲಿ ತೋರಿಸಿದೆ. ಇಂದಿನ ಪ್ರಶ್ನೆ ಇಂತಹ ನೀತಿಗಳನ್ನು ಕಾಂಗ್ರೆಸ್ ಬದಲಾಯಿಸಿಕೊಳ್ಳುವುದೇ? ಮೂರನೆಯ ರಾಜಕೀಯ ಶಕ್ತಿಗಳನ್ನು ಸಹಿಸಿಕೊಳ್ಳುವುದೇ?

ಆದ್ದರಿಂದ ಈಗಲಾದರೂ ಕಾಂಗ್ರೆಸ್ ನೇತೃತ್ವದ ಕೇಂದ್ರದ ಯು.ಪಿ.ಎ ಸರ್ಕಾರ ದೇಶದಲ್ಲಿಯೂ, ರಾಜ್ಯದಲ್ಲಿಯೂ ಜನತೆಗೆ ಮೂಲಭೂತವಾಗಿ ಸಹಾಯ ನೀಡುವ ನೀತಿಗಳನ್ನು ಅನುಸರಿಸಿ ಜನರ ಮನಗೆಲ್ಲಬೇಕು. ಬೆಂಬಲ ಗಳಿಸಲು ಆಗಲೇ ಸಾಧ್ಯ. ಆದರೆ ನೀತಿಗಳ ಬದಲಾವಣೆ ಯಾಗದೇ ಕೇವಲ ನೇತಾಗಳ ಬದಲಾವಣೆಯಾದರೆ ಜನರಿಗೇನು ಪ್ರಯೋಜನ? ಅಧಿಕಾರದ ಗದ್ದುಗೆ ಮೇಲೆ ಕಣ್ಣಿರಿಸಿರುವ ಕಾಂಗ್ರೆಸ್ ನಿಜಕ್ಕೂ ಬದಲಾಗಬೇಕಾದ್ದು ಇಲ್ಲೇ ಇಲ್ಲವಾದರೆ ಇದರ ವೈಫಲ್ಯಗಳು ಕೋಮುವಾದಿ ಬಿಜೆಪಿ ಬಲಗೊಳ್ಳಲು ಕಾರಣವಾಗದೇ ಇರದು ಎಂಬ ಎಚ್ಚರವೂ ಇರಬೇಕು.

# ಕಾರ್ಮಿಕ ವರ್ಗದ ಕಲರವ

## ಕಾರ್ಮಿಕ ಸಂಘಗಳ ಸದಸ್ಯತ್ವ ಪರಿಶೀಲನೆ ಎಂಬ 'ಸರ್ಕಾರಿ ತಮಾಷಾ'

ನಮ್ಮ ದೇಶದಲ್ಲಿ ಕಾರ್ಮಿಕ ಚಳುವಳಿ, ಕಾರ್ಮಿಕ ಸಂಘಟನೆಗಳು ವಹಿಸುತ್ತಾ ಇರೋ ಒಂದು ಮಹತ್ವದ ಪಾತ್ರವನ್ನು ನಮ್ಮ ಮಾಧ್ಯಮಗಳು ಸರಿಯಾಗಿ ಬಿಂಬಿಸುತ್ತಿಲ್ಲ. ಕಾರ್ಮಿಕ ಚಳುವಳಿ, ದುಡಿಯೋ ಜನರ ಹೋರಾಟ ಅಂದರೆ ಏನೋ ಒಂಥರಾ ಅಲರ್ಜಿ ಅವಕ್ಕೆ. ಆದರೆ ಇಡೀ ದೇಶವನ್ನು ಅಮೇರಿಕಾದಂತಹ ಸುಲಿಗೆಕೋರ ದೇಶದ ಪದ ತಲದಲ್ಲಿ ಇಟ್ಟುಬಿಡಬೇಕು ಅಂತ ಇರೋ ನಮ್ಮ ದೇಶದ ಆಳುವ ವರ್ಗದ ನೀತಿಗಳಿಗೆ ಏನಾದರೂ ಒಂದಷ್ಟು ಅಡೆ ತಡೆ ಆಗಿದ್ರೆ ಅದು ಪ್ರಧಾನವಾಗಿ ಈ ದೇಶದ ಕಾರ್ಮಿಕ ವರ್ಗದ ಚಳುವಳಿಯಿಂದ. ಇರಲಿ, ತಾಜಾ ಸುದ್ದಿ ಎಂದರೆ ಕಾರ್ಮಿಕ ರಂಗದಲ್ಲಿ ಈಗ ಸದಸ್ಯತ್ವ ಪರಿಶೀಲನೆ ಅನ್ನೋ ಹೆಸರಿನಲ್ಲಿ ನಡೀತಾ ಇರೋ 'ಸರ್ಕಾರಿ ತಮಾಷಾ' ದಿಂದಾಗಿ ಒಂದು ಕಡೆ ಕಾರ್ಮಿಕರು ಹಾಗೂ ಜನರ ನಡುವೆ ಒಂಥರಾ ಗೊಂದಲ ಉಂಟಾಗಿದ್ದರೆ ಇನ್ನೊಂದು ಕಡೆ ಜನರಿಗೆ ಪುಕ್ಕಟೆ ಮನರಂಜನೆ ದೊರಕುತ್ತಿದೆ.

**ಸಂಘ ಪರಿವಾರದ ಹಿಗ್ಗು**

ಈ ಸರ್ಕಾರಿ ತಮಾಷಾ ನೋಡಿ ಬಾರಿ ಹಿಗ್ಗಿರೋದು ನಮ್ಮ ಸಂಘ ಪರಿವಾರ. ಆರೆಸ್ಸೆಸ್ ಮುಖವಾಣಿ 'ಆರ್ಗನೈಸರ್' ಪತ್ರಿಕೆಯಲ್ಲಿ ಈ ಬಗ್ಗೆ ಒಂದು ಲೇಖನ ಕೂಡ ಬಂದು ಬಿಟ್ಟಿದೆ. 'ಕಾರ್ಮಿಕ ಚಳುವಳಿ'ಯಲ್ಲಿ ಕಮ್ಯುನಿಸ್ಟ್ ಪ್ರಭಾವ ಕುಸಿದು ಹೋಗಿದೆ. ಸಿಐಟಿಯು ಬಲವೂ ಕೂಡ ಕಡಿಮೆ ಆಗಿ ಹೋಗಿದೆ.... ಇತ್ಯಾದಿ ಇತ್ಯಾದಿ. ಆರೆಸ್ಸೆಸ್‌ನ ಹಿಗ್ಗಿಗೆ ಮತ್ತೊಂದು ಕಾರಣ ಅಂತಂದ್ರೆ, ಸಂಘ ಪರಿವಾರದ ಕಾರ್ಮಿಕ ಸಂಘಟನೆ ಭಾರತೀಯ ಮಜ್ದೂರ್ ಸಭಾ ಅಂದರೆ 'ಬಿಎಂಎಸ್', ಪ್ರಥಮ ಸ್ಥಾನಕ್ಕೆ ಏರಿದೆ ಅನ್ನೋದು.

ಇಂಡಿಯನ್ ಎಕ್ಸ್‌ಪ್ರೆಸ್ ಪತ್ರಿಕೆ ತನ್ನ ಸಂಪಾದಕೀಯದಲ್ಲಿ ಬರದೇ ಬಿಟ್ಟಿದೆ. 'ರೈಲ್ವೆ ಕಾರ್ಮಿಕರ ನಡುವೆ ಸಿಐಟಿಯು ನೆಲೆಯನ್ನೇ ಕಳೆದುಕೊಂಡು ಬಿಟ್ಟಿದೆ ಅಂತ.

**ಇದೇನು ತಮಾಷಾ!!**

ಸಿಐಟಿಯು ಸಂಘಟನೆಯ ಸದಸ್ಯತ್ವ 24 ಲಕ್ಷ ಇದ್ದದ್ದು ಈ ಅವಧಿಯಲ್ಲಿ 34 ಲಕ್ಷ ಆಗಿದೆ. ತಮಿಳುನಾಡಲ್ಲಿ ಸಿಐಟಿಯು ಸದಸ್ಯತ್ವ ಒಂದೇ ವರ್ಷದಲ್ಲಿ ದ್ವಿಗುಣ ಆಗಿದೆ. ಕರ್ನಾಟಕದಲ್ಲೂ ದೇಶದ ವಿವಿಧ ರಾಜ್ಯಗಳಲ್ಲೂ ಸಿಐಟಿಯು ಬೆಳವಣಿಗೆ ತೋರಿಸುತ್ತಾ ಮುಂದೆ ಹೆಜ್ಜೆ ಇಡ್ತಾ ಇರೋವಾಗ ಏನಿದು ಇಂಥ ವರದಿ ಅಂತ ಸ್ವಲ್ಪ ಸರಿಯಾಗಿ ಪರಿಶೀಲನೆ ಮಾಡಿದರೆ ಆಗ ನಮಗೆ ಕಂಡು ಬರೋದೇ ಈ 'ಸರ್ಕಾರಿ ತಮಾಷಾ'.

**ರೈಲ್ವೆ ನೌಕರರೂ ಮತ್ತು ಸದಸ್ಯತ್ವ ಪರಿಶೀಲನೆಯೂ**

ನಮ್ಮ ಸರ್ಕಾರದ ಕಾರ್ಮಿಕ ಇಲಾಖೆಯು ವಿವಿಧ ಕಾರ್ಮಿಕ ಸಂಘಟನೆಗಳ ಸದಸ್ಯತ್ವವನ್ನು ಪರಿಶೀಲಿಸಿ ಎಷ್ಟೆಂದು ಘೋಷಿಸುತ್ತದೆ. ದೇಶದ ಒಂದು ಬೃಹತ್ ಸಾರ್ವಜನಿಕ ಸಂಸ್ಥೆಯಾದ ರೈಲ್ವೆ ನೌಕರರ ಸಂಘಟನೆಗಳ ಸದಸ್ಯತ್ವ ಪರಿಶೀಲನೆ ನಡೆಸಿ ಘೋಷಿಸಿದೆ. ಈ ಘೋಷಣೆ ಪ್ರಕಾರ ರೈಲ್ವೆ ನೌಕರರ ಸಂಘಗಳ ಒಟ್ಟು ಸದಸ್ಯತ್ವ 25 ಲಕ್ಷ. ಹಾಗಿದ್ದರೆ ದೇಶದಲ್ಲಿ ಇರುವ ಒಟ್ಟು ರೈಲ್ವೆ ನೌಕರರ ಸಂಖ್ಯೆ ಎಷ್ಟು ಗೊತ್ತೇ? 13 ಲಕ್ಷ !! ವಾರೆವ್ಹಾ ಇದಪ್ಪ ಮಜಾ!

ಈ ವಿಚಿತ್ರ ವೈರುಧ್ಯ ಕಂಡು ದೇಶದ ಪ್ರಜ್ಞಾವಂತರು ಬಿದ್ದು ಬಿದ್ದು ನಕ್ಕರು. ಆ ಮೇಲೆ ರೈಲ್ವೆ ಕಾರ್ಮಿಕರ ನಡುವೆ ಚುನಾವಣೆ - 'ರಹಸ್ಯ ಮತದಾನ' ನಡೆದ ಮೇಲೆ ಏನಾಯ್ತು? '10 ಲಕ್ಷ ಸದಸ್ಯರಿದ್ದ' ಎಚ್.ಎಂ.ಎಸ್. ಅನ್ನೋ ಸಂಘದ ಸದಸ್ಯತ್ವ 4.5 ಲಕ್ಷ ಆಯ್ತು. ಕಾಂಗ್ರೆಸ್ ಬೆಂಬಲಿತ ಐಎನ್‌ಟಿಯುಸಿ ಸದಸ್ಯತ್ವವು 7.5 ಲಕ್ಷದಿಂದ 3 ಲಕ್ಷಕ್ಕೆ ಇಳಿಯಿತು 6.5 ಲಕ್ಷ ಇದ್ದ ಬಿ.ಎಂ.ಎಸ್. ಸದಸ್ಯತ್ವ 2 ಲಕ್ಷಕ್ಕಿಳಿಯಿತು!!

ಎಲ್ಲೆ ಆಗಲಿ ಕಾರ್ಮಿಕ ಸಂಘಕ್ಕೆ ಮಾನ್ಯತೆ ದೊರೆಯಬೇಕಾದರೆ, ಕಾರ್ಮಿಕರಿಗೆ ಮುಕ್ತವಾದ ಮತದಾನದ ಹಕ್ಕನ್ನು ನೀಡುವ ರಹಸ್ಯ ಮತದಾನದ ಪದ್ಧತಿಯನ್ನು ಜಾರಿಗೆ ತನ್ನಿ ಅಂತ ಸಿಐಟಿಯು, ಎಐಟಿಯುಸಿ ಇನ್ನು ಮೊದಲಾದ ಸಂಘಟನೆಗಳು ಕೇಂದ್ರ ಸರ್ಕಾರವನ್ನು ನಿರಂತರವಾಗಿ ಒತ್ತಾಯಿಸುತ್ತಾ ಬರುತ್ತಿದ್ದರೂ ಆ ನೀತಿ ಜಾರಿಗೆ ಬಂದಿಲ್ಲ.

ಅದು ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರ ಇದ್ದಾಗಲೂ ಆಗಿಲ್ಲ, ಕಾಂಗ್ರೆಸ್ ನೇತೃತ್ವದ ಯುಪಿಎ ಇದ್ದಾಗಲೂ ಕೂಡ ಆಗಿಲ್ಲ.

**ಕೃಷಿ ಕೂಲಿಕಾರರೇ ಬಲಾಢ್ಯರು!!**

ಕೃಷಿ ಕೂಲಿಕಾರರಿಗೆ ಕನಿಷ್ಟ ಕೂಲಿ ಮತ್ತಿತರ ಸೌಲಭ್ಯಗಳನ್ನು ಖಾತರಿ ಪಡಿಸುವ ಒಂದು ಸಮಗ್ರ ಮಸೂದೆ ಜಾರಿಗೆ ತನ್ನಿ ಅಂತ ಸಿಪಿಐ(ಎಂ) ಮತ್ತು ಎಡಪಕ್ಷಗಳು ಇನ್ನಿಲ್ಲದ ಪ್ರಯತ್ನ ಮಾಡುತ್ತಿದ್ದರು ಅದು ಇನ್ನೂ ಜಾರಿಗೆ ಬಂದಿಲ್ಲ. ಈ ದೇಶದಲ್ಲಿ ಕೋಟಿಗಟ್ಟಲೆ ಜನ ಕೃಷಿ ಕೂಲಿಕಾರರಿದ್ದಾರೆ. ಅವರಲ್ಲಿ ಬಹಳ ಜನ ದಲಿತರಾಗಿದ್ದಾರೆ. ಅವರು ಅಸಂಘಟಿತರು.

ಆದರೆ ಕಾರ್ಮಿಕ ಇಲಾಖೆಯ ಅಂಕಿ ಸಂಖ್ಯೆಗಳ ಪ್ರಕಾರ ದೇಶದ ಕೃಷಿ ಕಾರ್ಮಿಕರು ಅತ್ಯಂತ ಸಂಘಟಿತರು!! ಏಕೆಂದರೆ ಅವರ ಸದಸ್ಯತ್ವ ದೇಶದಲ್ಲಿ 76 ಲಕ್ಷ . ಇಷ್ಟು ದೊಡ್ಡ ಸಂಖ್ಯೆಯ ಜನ ಕಾರ್ಮಿಕ ಸಂಘಗಳ ಸದಸ್ಯರಾಗಿದ್ದಾರೆ.!!

ಅತ್ಯಂತ ಅಪಮಾನಕಾರಿ ಸಾಮಾಜಿಕ ಪರಿಸರದಲ್ಲಿ ಗ್ರಾಮಾಂತರ ಪ್ರದೇಶದಲ್ಲಿ ಭೂಮಾಲೀಕರ, ಶ್ರೀಮಂತ ರೈತರ ಕೈ ಕೆಳಗೆ ದುಡಿದು, ದುಡಿದೂ ಹೈರಾಣಾಗುವ ಕೃಷಿ ಕೂಲಿಕಾರರ, ದಲಿತರ ಸಮಸ್ಯೆಯ ಸ್ವರೂಪವೇ ಬೇರೆ. ಹಾಗಾಗಿ ಸಿಐಟಿಯು, ತನ್ನ ಸಂಘದಲ್ಲಿ ಕೃಷಿ ಕೂಲಿಕಾರರನ್ನು ಸದಸ್ಯರನ್ನಾಗಿ ತೆಗೆದುಕೊಳ್ಳುವುದಿಲ್ಲ. ತನ್ನಂಥದ್ದೇ ವಿಚಾರಧಾರೆ ಹೊಂದಿರುವ ಅಖಿಲ ಭಾರತ ಕೃಷಿ ಕೂಲಿಕಾರರ ಸಂಘ ಎಂಬ ಪ್ರತ್ಯೇಕ ಸಂಘಟನೆಯೊಂದಿಗೆ ಹೆಚ್ಚಿನ ಸಂಬಂಧ, ಒಡನಾಟ ಹೊಂದಿದೆ. ಆ ಸಂಘಕ್ಕೆ ಸುಮಾರು 30 ಲಕ್ಷ ಸದಸ್ಯತ್ವವಿದೆ. ರೈಲ್ವೆ ಇಲಾಖೆಯಲ್ಲಿನ ಸದಸ್ಯತ್ವ ವಿಷಯವೂ ಹಾಗೆ, 'ಇದು ಸಿಐಟಿಯು ಸದಸ್ಯತ್ವ' ಎಂದು ಪ್ರತ್ಯೇಕ ತೋರಿಸುವ ಸ್ಥಿತಿ ಅಲ್ಲಿ ಇಲ್ಲ.

ಇಲ್ಲಿ ಏನು ನಡೆದಿದೆ. ಕಾರ್ಮಿಕ ಸಂಘಟನೆಗಳ ನಡುವೆ ಮುಂಚೂಣಿ ಸ್ಥಾನ ಪಡೆದುಕೊಳ್ಳಬೇಕೆಂಬ ಹಂಬಲದ ಹಲವು ಸಂಘಟನೆಗಳೂ ತಮ್ಮ ಸಂಘದಲ್ಲಿ ಕೃಷಿ ಕೂಲಿಕಾರರಿಗೂ ಸದಸ್ಯತ್ವ ಕೊಡುತ್ತಿದ್ದಾರೆ. ಕೊಡಲಿ. ಅದು ವಿಚಾರ, ದೃಷ್ಟಿಕೋನಕ್ಕೆ ಸಂಬಂಧಿಸಿದ್ದು. ಆದರೆ ಈ ಸದಸ್ಯತ್ವ ಪರಿಶೀಲಿಸುವವರು ಯಾರು? ಹೇಗೆ ? ಕಾರ್ಖಾನೆ ಉದ್ದಿಮೆಗಳ ಕಾರ್ಮಿಕರ ಸದಸ್ಯತ್ವದ ಕತೆಯೇ ಹಾಗಾದರೆ, ಇನ್ನು ಕೂಲಿಕಾರರದ್ದು?

ಬಿ.ಎಂ.ಎಸ್. ಐಎನ್‌ಟಿಯುಸಿ ಯಂತಹ ಕಾರ್ಮಿಕ ಸಂಘಗಳು ಈ ದೇಶದ ಕೃಷಿ ಕೂಲಿಕಾರರಿಗೆ ಭಾರಿ ಋಣಿಗಳಾಗಿರಬೇಕು. ಏಕೆಂದರೆ ಭೂ ಮಾಲೀಕರ, ಮೇಲ್ಜಾತಿಯ ಜನರ ಹೊಲಗದ್ದೆಗಳಲ್ಲಿ ಅತ್ಯಂತ ಅಗ್ಗವಾಗಿ ದುಡಿದು, ಅವರಿಗೂ ದೇಶಕ್ಕೂ ಅನ್ನ ನೀಡಿ ತಾವು ಹಸಿದ ಹೊಟ್ಟೆಯಲ್ಲಿ ಮಲಗುವುದಲ್ಲದೇ, ತಮಗಾಗಿ ಏನೊಂದು ಮಾಡದ, ಚಕಾರವನ್ನೇ ಎತ್ತದ ಕಾರ್ಮಿಕ ಸಂಘಗಳಿಗೆ ಕಾರ್ಮಿಕ ಚಳುವಳಿಯಲ್ಲಿ ಪ್ರಥಮ, ದ್ವಿತೀಯ ಇತ್ಯಾದಿ ಸ್ಥಾನಗಳನ್ನು ತಂದು ಕೊಟ್ಟಿದ್ದಾರೆ ಕೃಷಿಕೂಲಿಕಾರರು. ಪರಿಸ್ಥಿತಿ ಹೀಗಿದ್ದು ಸಂಘ ಪರಿವಾರಕ್ಕೆ ಏನೋ ಸಂಭ್ರಮ.

### ಉಕ್ಕಿನ ಕೈಗಾರಿಕೆಯಲ್ಲಿ...

ದೇಶದ ಉಕ್ಕಿನ ಕೈಗಾರಿಕೆಯಲ್ಲಿ ಕಾರ್ಮಿಕ ಇಲಾಖೆಯು ಪರಿಶೀಲಿಸಿ ಘೋಷಿಸಿದ ನಂತರ ಎಚ್.ಎಂ.ಎಸ್. ಬಿ.ಎಂ.ಎಸ್ ಸಂಘಗಳ ಸದಸ್ಯತ್ವವು ಸಿಐಟಿಯುಗಿಂತಲೂ ಹೆಚ್ಚಾಗಿದೆ. ಆದರೆ ವಾಸ್ತವ ಏನೆಂದರೆ, ಉಕ್ಕಿನ ಕೈಗಾರಿಕೆಯಲ್ಲಿ ಬಿಎಂಎಸ್‌ಗಾಗಲೀ, ಎಚ್‌ಎಂಎಸ್ ಗಾಗಲೀ ಎಲ್ಲಿಯೂ ಮಾನ್ಯತೆ ಪಡೆದ ಕಾರ್ಮಿಕ ಸಂಘವಿಲ್ಲ. ಆದರೆ ಈ ರಂಗದಲ್ಲಿ 4 ಪ್ರಮುಖ ಕೈಗಾರಿಕೆಗಳಲ್ಲಿ ಸಿಐಟಿಯು ಮಾನ್ಯತೆ ಪಡೆದ ಅಧಿಕೃತ ಕಾರ್ಮಿಕ ಸಂಘವಾಗಿದೆ. ಅಂದರೆ ರಹಸ್ಯ ಮತದಾನದಲ್ಲಿ ಕಾರ್ಮಿಕರು ಸಿಐಟಿಯುವನ್ನು ಚುನಾಯಿಸಿ ಮಾನ್ಯತೆ ನೀಡಿದ್ದಾರೆ. ಅಂಕಿ ಸಂಖ್ಯೆಗಳ ಕಸರತ್ತಿಗಿಂತ ಕಾರ್ಮಿಕ ವಿರೋಧಿ, ದೇಶ ವಿರೋಧಿ ನೀತಿಗಳನ್ನು ಪ್ರತಿಭಟಿಸುವ ಕೆಚ್ಚು, ರಾಜಕೀಯ ಇಚ್ಛಾಶಕ್ತಿ, ಬದ್ಧತೆ ಯಾರಿಗಿದೆ. ಯಾರು ನಿಜವಾಗಿಯೂ ಅದಕ್ಕಾಗಿ ಹೋರಾಡುವವರು ಎಂಬುದು ಇಲ್ಲಿ ಬಹಳ ಮುಖ್ಯವಾದ ಪ್ರಶ್ನೆ. ಇತರ ಕಾರ್ಮಿಕ ಸಂಘಗಳು ಅಂಕಿ ಸಂಖ್ಯೆಯಲ್ಲಿ ಏನೇನೋ ಚಮತ್ಕಾರ ಮಾಡಿ ಸಿಐಟಿಯುವನ್ನು ಹಿಂದಿಕ್ಕಿದರೂ ಈ ವಿಷಯದಲ್ಲಿ ಹಿಂದಿಕ್ಕಲಾರವು ಅಲ್ಲವೇ?

# ಸಾಮಾನ್ಯ ಪ್ರವೇಶ ಪರೀಕ್ಷೆ

ಆ ಪಕ್ಷ ಸೇರಿ....ಈ ಪಕ್ಷ ಸೇರಿ....ಊ ಪಕ್ಷ........ ಎಂಬ ಗೋಡೆ ಬರೆಹಗಳನ್ನು ಆಗಾಗ್ಗೆ ನೀವು ಅಲ್ಲಲ್ಲಿ ನೋಡಿರಬಹುದು. ಕೆಲವು ಪಕ್ಷಗಳಲ್ಲಿ ಒಳಗೆ ಹೋಗಲು ಮುಕ್ತ ಆಹ್ವಾನ, ಯಾರೂ ಬೇಕಾದರೂ ಸೇರಬಹುದು. ಖಾಸಗಿ ಬಸ್‌ಗಳಲ್ಲಿ ಕಂಡಕ್ಟರುಗಳು ಕರೆಯುವಂತೆ ಕೆಲವು ಪಕ್ಷಗಳ ಮುಖಂಡರು ಬಾಗಿಲ ಬಳಿ ನಿಂತು ಕರೆಯುತ್ತಿರುತ್ತಾರೆ. ಸಿಪಿಐ, ಸಿಪಿಐ(ಎಂ), (ಎಂಎಲ್).... ಬ್ರಾಂಡ್ ಪಕ್ಷಗಳಲ್ಲಿ ಮಾತ್ರ ಭಿನ್ನ. ಇಲ್ಲಿ ಒಳಗೆ ಹೋಗಬೇಕಾದರೆ ಚೆಕ್‌ಅಪ್, ಸೆನ್ಸಾರ್, ಸ್ಕ್ಯಾನು ಅಂತ ಸ್ವಲ್ಪ ಬಿಗೀನೇ. ಇಂತಹ ಪರಿಶೀಲನೆ ಒಂದೊಂದು ಕೆಟಗರಿಯ ಪಕ್ಷಗಳಿಗೂ ಸಿದ್ಧಾಂತ ಗುರಿಗೆ ತಕ್ಕಂತೆ ಭಿನ್ನ ಅಲ್ಲವೇ?

ಈ ಅರ್ಹತಾ ಪರಿಶೀಲನೆಯ ಮತ್ತೊಂದು ಕೆಟಗರಿ ಮುಂದಿದೆ. ತಾಜಾ ಸುದ್ದಿ ಏನಪ್ಪಾ ಅಂದರೆ ಜೆಡಿಎಸ್‌ಗೆ ಸೇರಿಸಿಕೊಳ್ಳಲು ಪರೀಕ್ಷೆ ನಡೆಸುತ್ತಾರಂತೆ. ದೇವೇಗೌಡರ ಬಗ್ಗೆ ಪ್ರಶ್ನೆಗಳಿರುತ್ತವೆಯಂತೆ. ನಿಜವಾಗಿಯೂ ಉತ್ತಮ ಯೋಚನೆ ಹಾಗೂ ಯೋಜನೆ. ಹೀಗೆ ಒಂದು ಪಕ್ಷಕ್ಕೆ ಸೇರುವ ಪರೀಕ್ಷೆಗೆ ಮುಂಚೆ ಒಂದು ಸಾಮಾನ್ಯ ಪ್ರವೇಶ ಪರೀಕ್ಷೆ (ಸಿಇಟಿ)ಯನ್ನು ರಾಜಕೀಯ ಸೇರ ಬಯಸುವ ಎಲ್ಲರಿಗೂ ಮಾಡುವುದು ಒಳ್ಳೆಯದು. ಸಾ.ಪ್ರ.ಪರೀಕ್ಷೆಯಲ್ಲಿ ರ್‍ಯಾಂಕಿಂಗ್ ಬಂದವರನ್ನು ಪರೀಕ್ಷೆ ಮೂಲಕ ಆಯ್ಕೆ ಮಾಡಿಕೊಳ್ಳುವ ಅವಕಾಶ ಅದು ಬೇಕಾದ ಪಕ್ಷಗಳಿಗೆ ಇರುತ್ತದೆ. ಹಾಗೆ ರ್‍ಯಾಂಕಿಂಗ್ ಬಂದವರು ಮುಂದಿನ ಹಂತದಲ್ಲಿ ತಮಗೆ ಬೇಕಾದ ಪಕ್ಷದ ಪರೀಕ್ಷೆ ತೆಗೆದುಕೊಳ್ಳುವ ಅವಕಾಶ ಇರಬೇಕು.

ಇಂತಹ ಪಾರದರ್ಶಕ ವ್ಯವಸ್ಥೆಯ ಸಾ.ಪ್ರ. ಪರೀಕ್ಷೆಗಾಗಿ ಇಲ್ಲಿ ಕೆಲವು ಮಾದರಿ ಪ್ರಶ್ನೆ ಪತ್ರಿಕೆ ನೀಡಲಾಗಿದೆ.

1. ನೀವು ರಾಜಕೀಯ ಸೇರುತ್ತಿರುವುದರ ಉದ್ದೇಶ ಏನು?

ಕಾ) ಮಾಡಕ್ಕೆ ಬೇರೆ ಕೆಲಸವಿಲ್ಲದೆ

ಬಾ) ಸೀಕ್ರೆಟ್, ಅದನ್ನ ಹೇಳೋಕಾಗಲ್ಲ

ಜಾ) ಹಣ ಮಾಡಲು

ಸ) ಅಧಿಕಾರ ಪಡೆಯಲು

2) ನೀವು ಯಾವ ಪಕ್ಷ ಸೇರಲಿಚ್ಛಿಸುತ್ತೀರಿ?

ಕಾ) ಯಾರು ಸೇರಿಸಿಕೊಳ್ಳುತ್ತಾರೋ ಆ ಪಕ್ಷವನ್ನು

ಬಾ) ಯಾರು ಟಿಕೆಟ್ ಕೊಡುತ್ತಾರೋ ಆ ಪಕ್ಷ

ಜಾ) ಎಲ್ಲಿ ಅಧಿಕಾರ ಸಿಗುವುದೋ ಆ ಪಕ್ಷ

ಸಾ) ಎಲ್ಲಿ ಕಮಾಯಿ ಇದೆಯೋ ಆ ಪಕ್ಷ

3) ನೀವು ರಾಜಕೀಯಕ್ಕೆ ಬರುವ ಮೊದಲು ಏನು ಉದ್ಯೋಗ ಮಾಡುತ್ತಿದ್ದೀರಿ?

ಕಾ) ಸಣ್ಣ ಪುಟ್ಟ ರೋಲ್ ಕಾಲ್

ಬಾ) ಮಾಫಿಯಾ/ ಗೂಂಡಾಗಿರಿ

ಜಾ) ಸುಪಾರಿ ಬಿಸಿನೆಸ್

ಸಾ) ಮುನಿಸಿಪಾಲಿಟಿ ಮಧ್ಯವರ್ತಿ

4) ನೀವು ಏನು ಓದಿದ್ದೀರಿ?

ಕಾ) ಇಂಥ ಪ್ರಶ್ನೆ ಕೇಳಿ ನಮಗೆ ಅವಮಾನ ಮಾಡುತ್ತಿದ್ದೀರಿ.

ಬಾ) ಏಳನೇ ಕ್ಲಾಸು ಆರುಸಲ

ಜಾ) ಸಂಬಂಧವಿಲ್ಲದ, ಅಸಂಬದ್ಧ ಪ್ರಶ್ನೆ

ಸಾ) ಈ ಉದ್ಯೋಗಕ್ಕೂ ಓದು ಮುಖ್ಯವಲ್ಲ.

5) ಜನಸೇವೆ ಎಂದರೆನು?

ಕಾ) ಟ್ರಾನ್ಸ್‌ಫರ್ ಕೊಡ್ಸೋದು

ಬಾ) ಸೈಟು ಮನೆ ಕೊಡ್ಸೋದು

ಜಾ) ಸಾಲ ಕೊಡ್ಸೋದು

ಸಾ) ಕಾಂಟ್ರಾಕ್ಟ್ ಕೊಡ್ಸೋದು.

6) ಹೋರಾಟ ಎಂದರೇನು?

ಕಾ) ಗೊಂಬೆ ಸುಡುವುದು

ಬಾ) ನಮಗಾಗದವರನ್ನು ಅವರ ಮನೆಯನ್ನು ಸುಡುವುದು.

ಜಾ) ಬಸ್ಸು ಸುಡುವುದು.

ಸಾ) ಕಲ್ಲು ಹೊಡೆಯುವುದು.

7) ನೀವು ಗೆದ್ದು ಬರಲು ಮುಖ್ಯವಾಗಿ ಯಾವ ತಂತ್ರ ಉಪಯೋಗಿಸುತ್ತಿರಿ?

ಕಾ) ಹಣ, ಹೆಂಡ, ಹಂಚುತ್ತೀವಿ.

ಬಾ) ಧರ್ಮ (ಕೋಮು) ವಿಚಾರ ಚುಚ್ಚಿ ಎಬ್ಬಿಸುತ್ತೇವೆ.

ಜಾ) ನಮ್ಮ ಮಠಾಧಿಪತಿಗಳಿಗೆ ಅಡ್ಡ ಬೀಳ್ತೀವಿ.

ಸಾ) ಏನೇನು ಬೇಕೋ ಎಲ್ಲಾ ಮಾಡ್ತೇವೆ.

8) ರಾಜಕಾರಣಿಗಳಿಗೆ ನಿವೃತ್ತಿಯಿಲ್ಲ, ಜೀವನದಿಂದ ನಿವೃತ್ತಿ ಹೊಂದುವ ವರೆಗೂ ವೃತ್ತಿಯಲ್ಲಿರಬಹುದು. ಅಷ್ಟರಲ್ಲಿ ನೀವು ಈ ವೃತ್ತಿಯಲ್ಲಿ ಸಾಧಿಸಬೇಕೆಂದಿರುವ ಗುರಿ ಏನು?

ಕಾ) ಮಂತ್ರಿ/ ಮುಖ್ಯಮಂತ್ರಿ ಆಗುವುದು

ಬಾ) ವಿರೋಧಿಗಳನ್ನೆಲ್ಲ ಮಟ್ಟ ಹಾಕುವುದು.

ಜಾ) ನಮ್ಮ ವಂಶದವರು ದುಡಿಯದೇ ತಿಂದು ಉಡಾಯಿಸುವಷ್ಟು ಆಸ್ತಿ ಮಾಡುವುದು.

ಸಾ) ನನ್ನ ಅಧಿಕಾರವು ನನ್ನ ವಂಶದವರಿಗೇ ಮುಂದುವರೆಯುವಂಥಹ ಹೆಸರು/ ಖ್ಯಾತಿ/ ಪ್ರಭಾವ ಗಳಿಸುವುದು. ಆಸಕ್ತಿಯಿರುವವರು ಗೈಡ್‌ಗಳು, ಸಂಭವನೀಯ ಪ್ರಶ್ನೋತ್ತರಗಳೂ, ಪರೀಕ್ಷೆ ಪಾಸ್ ಮಾಡುವ ಸುಲಭದ ವಿಧಾನ ಮುಂತಾದವುಕ್ಕಾಗಿ ಟ್ಯೂಷನ್ ವ್ಯವಸ್ಥೆಯೂ ಇದೆ.

# ದುಡಿಯುವ ಜನತೆಯ ಜ್ವಲಂತ ಸಮಸ್ಯೆಗಳನ್ನು ಬಗೆಹರಿಸಲು ಒತ್ತಾಯ

**ರಾಜ್ಯದಲ್ಲಿ ಬಂದ ಸರ್ಕಾರಗಳೆಲ್ಲಾ ದುಡಿವ ಜನರ ಜೀವ ಹಿಂಡುವ ನೀತಿಗಳನ್ನೇ ಜಾರಿಗೆ ತಂದವು. ಜನರ ಬದುಕು ದುಸ್ತರವಾಗಿದೆ. ರಾಜ್ಯದ ಜನಪರ ಚಳುವಳಿಯ ಪ್ರಧಾನ ಧಾರೆಯಾದ ಸಿಪಿಐ(ಎಂ) ಪಕ್ಷವು ರಾಜ್ಯಾದ್ಯಂತ ಜನರ ಬವಣೆಗಳ ಕುರಿತು ಪ್ರಚಾರಾಂದೋಲನ ಆಯೋಜಿಸಿದೆ.**

## ಮಾರ್ಚ್ 10 ರಿಂದ 24ರವರೆಗೆ

# ಪ್ರಚಾರಾಂದೋಲನ

ಸ್ವಾತಂತ್ರ್ಯಾನಂತರ 1983 ರವರೆಗೆ ಕರ್ನಾಟಕ ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷವೇ ನಿರಂತರ ಆಳ್ವಿಕೆ ನಡೆಸುತ್ತಾ ಬಂದಿತ್ತು. ಜನತಾ ಪಾರ್ಟಿ 1983 ರಿಂದ 1988 ರವರೆಗೆ ಅಧಿಕಾರದಲ್ಲಿತ್ತು. ಮತ್ತೇ 1989 ರಿಂದ 94ವರೆಗೆ ಹಾಗೂ 1999 ರಿಂದ 2004 ರವರೆಗೆ ಕಾಂಗ್ರೆಸ್ ಆಡಳಿತ ನಡೆಸಿತು. ನಡುವೆ 1994 ರಿಂದ 1999 ರವರೆಗೆ ಜನತಾದಳ ಅಧಿಕಾರದಲ್ಲಿತ್ತು. ಪುನಃ 2004 ರಿಂದ 2005 ರವರೆಗೆ ಕಾಂಗ್ರೆಸ್- ಜೆಡಿ(ಎಸ್) ಸಮ್ಮಿಶ್ರ ಸರ್ಕಾರ ಅಧಿಕಾರ ನಡೆಸಿತು. ಮುಂದೆ 20 ತಿಂಗಳ ಕಾಲ ಜೆಡಿ(ಎಸ್)-ಬಿಜೆಪಿ ಜೊತೆ ಅಧಿಕಾರ ಹಂಚಿಕೊಂಡು ಆಡಳಿತ ನಡೆಸಿತು.

ಈ ಎಲ್ಲ ಸರ್ಕಾರಗಳು ರಾಜ್ಯದ ದುಡಿಯುವ ಜನತೆಯ ಹಿತಗಳನ್ನು ಕಡೆಗಣಿಸಿದ ಸರ್ಕಾರಗಳೇ ಆಗಿದ್ದವು. ಈಗಲೂ ಸಹ ಈ ಪಕ್ಷಗಳು ಸಮಾಜದ ಮೇಲ್ವರ್ಗದವರ ಪಕ್ಷಪಾತಿಗಳಾಗಿಯೇ ಹೊರತು ಶೋಷಿತ ವರ್ಗಗಳ ಬಗ್ಗೆ ಎಳ್ಳಷ್ಟೂ ಕಾಳಜಿ ಅವುಗಳಿಗಿಲ್ಲ. ಭಾರತ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷ ಮತ್ತು ಇತರ ಎಡ ಶಕ್ತಿಗಳು ಮಾತ್ರ ರಾಜ್ಯದ ವಿವಿಧ ದುಡಿಯುವ ಜನ ವಿಭಾಗಗಳ ಸಮಸ್ಯೆಗಳನ್ನು ಎತ್ತಿಕೊಂಡು ನಿರಂತರವಾದ ಚಳುವಳಿಗಳನ್ನು ನಡೆಸುತ್ತಾ ಬಂದಿವೆ.

ಇತ್ತೀಚೆಗೆ ಮೈಸೂರಿನಲ್ಲಿ ನಡೆದ ಸಿಪಿಐ(ಎಂ) 19ನೇ ರಾಜ್ಯ ಸಮ್ಮೇಳನವು ರಾಜ್ಯದ ಕಾರ್ಮಿಕರು, ರೈತರು, ಕೃಷಿಕೂಲಿಕಾರರು ಮತ್ತು ಇತರ ದುಡಿಯುವ ಜನರು ಎದುರಿಸುತ್ತಿರುವ ಜ್ವಲಂತ ಸಮಸ್ಯೆಗಳ ಬಗ್ಗೆ ಚರ್ಚಿಸಿ ಅವುಗಳಿಗೆ ಕಾರಣವಾಗಿರುವ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ನೀತಿಗಳ ಬಗ್ಗೆ ಜನಜಾಗೃತಿ ಉಂಟುಮಾಡಲು ಪ್ರಚಾರಾಂದೋಲನ ನಡೆಸಬೇಕೆಂದೂ, ಜನರ ನಿರ್ದಿಷ್ಟ ಬೇಡಿಕೆಗಳಿಗಾಗಿ ಹೋರಾಟಗಳನ್ನು ಸಂಘಟಿಸಬೇಕೆಂದು ತೀರ್ಮಾನಿಸಿತ್ತು.

ಈ ತೀರ್ಮಾನವನ್ನು ಜಾರಿಗೊಳಿಸಲು ಸಿಪಿಐ(ಎಂ) ಕರ್ನಾಟಕ ರಾಜ್ಯ ಸಮಿತಿಯು ರಾಜ್ಯಾದ್ಯಂತ 2008 ಮಾರ್ಚ್ 10 ರಿಂದ 24 ರವರೆಗೆ 15 ದಿನಗಳ ಪ್ರಚಾರಾಂದೋಲನ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ.

**ಬೆಲೆಏರಿಕೆ**

ಅಗತ್ಯ ವಸ್ತುಗಳ, ವಿಶೇಷವಾಗಿ ಆಹಾರ ದಾನ್ಯಗಳ, ಬೇಳೆ ಕಾಳುಗಳ, ಖಾದ್ಯ ತೈಲಗಳ, ಸಕ್ಕರೆ, ಹಣ್ಣು, ತರಕಾರಿ ಮೊದಲಾದ ಜೀವನಾವಶ್ಯಕ ವಸ್ತುಗಳ ಬೆಲೆಏರಿಕೆ ದುಡಿಯುವ ಜನತೆಯನ್ನು ಬಾಧಿಸುತ್ತಿರುವ ಮುಖ್ಯ ಪ್ರಶ್ನೆಯಾಗಿದೆ. ಈ ಸಲ ಉತ್ತರ ಕರ್ನಾಟಕದ ಜನರ ಮುಖ್ಯ ಆಹಾರ ದಾನ್ಯ-ಜೋಳದ ಬೆಲೆ ಗಗನಕ್ಕೇರಿ ಬಡ ಕೂಲಿಕಾರರು ಒಪ್ಪತ್ತಿನ ಊಟಕ್ಕೂ ಪರದಾಡುವಂತಾಯಿತು. ಆಹಾರ ದಾನ್ಯಗಳನ್ನು ಬೆಳೆಯುವ ರೈತರಿಗೆ ಸರ್ಕಾರದಿಂದ ಯಾವುದೇ ಪ್ರೋತ್ಸಾಹ ದೊರೆಯದಿರುವುದು, ಆಹಾರ ದಾನ್ಯಗಳ ಉತ್ಪಾದನೆ ಕುಸಿದಿರುವುದು, ರೈತರು ಬೆಳೆದ ಆಹಾರ ದಾನ್ಯಗಳನ್ನು ಬೆಂಬಲ ಬೆಲೆ ನೀಡಿ ಸರ್ಕಾರ ಖರೀದಿ ಮಾಡಲು ಮುಂದಾಗದಿರುವುದು, ನಮ್ಮ ರೈತರಿಗೆ ನೀಡುವ ಬೆಲೆಗಿಂತ ಹೆಚ್ಚಿನ ಬೆಲೆಕೊಟ್ಟು ಗೋದಿಯಂತಹ ಆಹಾರ ದಾನ್ಯಗಳನ್ನು ವಿದೇಶಗಳಿಂದ ಆಮದು ಮಾಡಿಕೊಳ್ಳುವುದು, ಆಹಾರ ದಾನ್ಯಗಳ ವ್ಯಾಪಾರದಲ್ಲಿ ಬೃಹತ್ ಕಂಪನಿಗಳಿಗೆ ಪ್ರವೇಶ ನೀಡಿರುವುದು, ಆಹಾರ ದಾನ್ಯಗಳ ಮುಂಗಡ ವ್ಯಾಪಾರಕ್ಕೆ ಅವಕಾಶ ನೀಡಿರುವುದು, ಅಕ್ರಮ ದಾಸ್ತಾನುದಾರರನ್ನು ಕಾಳಸಂತೆಕೋರರನ್ನು ನಿಯಂತ್ರಿಸದಿರುವುದು, ಪೆಟ್ರೋಲ್, ಡೀಸೆಲ್, ಬೆಲೆಗಳನ್ನು ಮೇಲಿಂದ ಮೇಲೆ ಏರಿಸುತ್ತಿರುವುದು ಆಹಾರ ದಾನ್ಯಗಳ ಮತ್ತು ಇತರ ಅಗತ್ಯ ವಸ್ತುಗಳ ತೀವ್ರ ಬೆಲೆಏರಿಕೆಗೆ ಕಾರಣವಾಗಿದೆ. 2008-09 ರ ಕೇಂದ್ರ ಸರ್ಕಾರದ ಬಜೆಟ್ ಸಹ ಬೆಲೆ ಏರಿಕೆಗೆ ಕಡಿವಾಣ ಹಾಕುವುದರಲ್ಲಿ ವಿಫಲವಾಗಿದೆ. ಕರ್ನಾಟಕದಲ್ಲಿ ಚುನಾಯಿತ ಸರ್ಕಾರವೇ ಇಲ್ಲದಿರುವುದರಿಂದ ಬಡವರ, ಮಧ್ಯಮ ವರ್ಗದವರ ಗೋಳನ್ನು ಕೇಳುವವರೇ ಇಲ್ಲದಂತಾಗಿದೆ.

ಜನ ಸಾಮಾನ್ಯರ ಬದುಕಿನ ಬಗ್ಗೆ ಕಾಳಜಿ ಇಲ್ಲದ ಇಂತಹ ರಾಜಕೀಯ ಪಕ್ಷಗಳಿಗೆ ಮುಂಬರುವ ಚುನಾವಣೆಗಳಲ್ಲಿ ಮತ ಹಾಕಬೇಕೆ ?

**ರೇಷನ್ ವ್ಯವಸ್ಥೆ ನಾಶ ಮಾಡುವ ಹುನ್ನಾರ**

ಕನಿಷ್ಠ ಸಮರ್ಪಕವಾದ ರೇಷನ್ ವ್ಯವಸ್ಥೆಯನ್ನು ಜಾರಿಮಾಡಿ, ಬೆಲೆ ಏರಿಕೆಯಿಂದ ತತ್ತರಿಸುತ್ತಿರುವ ಜನಗಳ ನೆರವಿಗೆ ಧಾವಿಸಬೇಕಾಗಿತ್ತು ಸರ್ಕಾರ. ಆದರೆ ಗಾಯದ ಮೇಲೆ ಬರೆ ಎಳೆಯುವ ರೀತಿಯಲ್ಲಿ ಸಾರ್ವಜನಿಕ ರೇಷನ್ ವ್ಯವಸ್ಥೆಯನ್ನೇ ನಾಶ ಮಾಡುವ ಹುನ್ನಾರ ನಡೆಯುತ್ತಿದೆ. ಬಡತನ ರೇಖೆಯ ಕೆಳಗೆ ಇರುವವರನ್ನು ಗುರುತಿಸಲು ತಪ್ಪು ಲೆಕ್ಕಾಚಾರ ಮತ್ತು ಅಸಂಬದ್ಧ ಮಾನದಂಡಗಳನ್ನು ಉಪಯೋಗಿಸುವ ಮೂಲಕ ಬಿಪಿಎಲ್ ಫಲಾನುಭವಿಗಳ ಸಂಖ್ಯೆಯನ್ನು ಗರಿಷ್ಠ ಪ್ರಮಾಣದಲ್ಲಿ ಕಡಿತಗೊಳಿಸಿ ಬಿಪಿಎಲ್ ರೇಷನ್ ಕಾರ್ಡುಗಳನ್ನು ಕಡಿತಗೊಳಿಸಲಾಗಿದೆ. ಕೇಂದ್ರ ಸರ್ಕಾರದ ಈ ಕ್ರಮಕ್ಕೆ ಅನುಗುಣವಾಗಿ ರಾಜ್ಯಗಳಿಗೆ ಒದಗಿಸುವ ರೇಷನ್ ಆಹಾರ ದಾನ್ಯಗಳ ಪ್ರಮಾಣವನ್ನೂ ಗರಿಷ್ಠ ಪ್ರಮಾಣದಲ್ಲಿ ಕಡಿತ ಮಾಡಿದೆ. ಈ ಸಲದ ಬಜೆಟ್‌ನಲ್ಲಿ ಆಹಾರ ಸಬ್ಸಿಡಿಯನ್ನು ಕೇವಲ 3.5 ಶೇ. ಹೆಚ್ಚಿಸಲಾಗಿದೆ. ಹಣದುಬ್ಬರ ದರ 6ಶೇ. ರಷ್ಟಿರುವಾಗ, ವಾಸ್ತವದಲ್ಲಿ ಆಹಾರ ಸಬ್ಸಿಡಿ ಕಳೆದ ವರ್ಷಕ್ಕಿಂತ ಕಡಿಮೆ ಮಾಡಿದಂತಾಗಿದೆ. ರೇಷನ್ ವ್ಯವಸ್ಥೆಯನ್ನು ಸಾರ್ವತ್ರಿಕಗೊಳಿಸುವ ಯು.ಪಿ.ಎ. ಸರ್ಕಾರದ ಸಾಮಾನ್ಯ ಕನಿಷ್ಠ ಕಾರ್ಯಕ್ರಮದ ಭರವಸೆಯನ್ನೇ ಅದು ಮರೆತುಬಿಟ್ಟಿದೆ.

ಎಲ್ಲಾ ಬಡವರಿಗೆ ರೇಷನ್ ಕಾರ್ಡ್ ನೀಡಿ ರೇಷನ್ ಒದಗಿಸುವ ಹೆಚ್ಚುವರಿ ಹೊರೆಯನ್ನು ಹೊರಲು ರಾಜ್ಯ ಸರ್ಕಾರವೂ ಮುಂದೆ ಬರುತ್ತಿಲ್ಲ. ಕಾಂಗ್ರೆಸಿನ ಎಸ್.ಎಂ.ಕೃಷ್ಣ ಸರ್ಕಾರಕ್ಕಾಗಲಿ, ಅನಂತರದ ಕಾಂಗ್ರೆಸ್-ಜೆಡಿ(ಎಸ್) ಸರ್ಕಾರಕ್ಕಾಗಲಿ, ಇತ್ತೀಚಿನ ಯಡಿಯೂರಪ್ಪ-ಕುಮಾರಸ್ವಾಮಿ ಸರ್ಕಾರಕ್ಕಾಗಲಿ, ಈಗಿನ ರಾಜ್ಯಪಾಲರ ಸರ್ಕಾರಕ್ಕಾಗಲಿ ಇದುವರೆಗೆ ರಾಜ್ಯದ ಬಡವರಿಗೆ ಒಂದು ರೇಷನ್ ಕಾರ್ಡ್ ವಿತರಣೆ ಮಾಡಲು ಸಾಧ್ಯವಾಗದೆ ಇರುವುದು ನಾಚಿಕೆಗೇಡಿನ ಸಂಗತಿಯಾಗಿದೆ.

ಯೂನಿಟ್ ಪದ್ಧತಿಯ ಹೆಸರಿನಲ್ಲಿ ಒಬ್ಬರಿಗೆ ಒಂದು ತಿಂಗಳಿಗೆ ಕೇವಲ 4 ಕೆಜಿ ಅಕ್ಕಿಯನ್ನು ಕೊಡಲಾಗುತ್ತಿದೆ. ಇದು ಜೈಲಿನಲ್ಲಿ ಶಿಕ್ಷೆ ಅನುಭವಿಸುತ್ತಿರುವ ಕೈದಿಗಳಿಗೆ ಕೊಡುವ ಆಹಾರದ ಪ್ರಮಾಣಕ್ಕಿಂತಲೂ ಕಡಿಮೆಯಾಗಿದೆ. ಈಗ 'ಭಾವಚಿತ್ರವುಳ್ಳ ಕಾರ್ಡ್ ಕೊಡುತ್ತೇವೆ' ಎಂದು ರೂ.45 ರಂತೆ ಬಡವರ ಹಣವನ್ನು ಲೂಟಿ ಮಾಡುತ್ತಿದ್ದಾರೆ. ಇಂತಹ ದಬ್ಬಾಳಿಕೆಯನ್ನು ತೀವ್ರವಾಗಿ ವಿರೋಧಿಸಬೇಕಾಗಿದೆ. ಬಡವರನ್ನು ಭಿಕ್ಷುಕರಂತೆ ಕಾಣುವ ಸರ್ಕಾರದ ಧೋರಣೆಯನ್ನು ವಿರೋಧಿಸಿ ಮಂಡ್ಯ ಜಿಲ್ಲೆಯ ಸಾವಿರಾರು ಕೂಲಿಕಾರರು, ಮಹಿಳೆಯರು ಜಿಲ್ಲಾಧಿಕಾರಿ ಕಛೇರಿಗೆ ಮುತ್ತಿಗೆ ಹಾಕಿ ಕುಳಿತಾಗ, ಅವರಿಗೆ ರೇಷನ್ ಕಾರ್ಡ್ ಕೊಡುವ ಬದಲು ಪೋಲಿಸರು ಅವರ ಮೇಲೆ ಅಮಾನುಷವಾಗಿ ಲಾಠಿ ಪ್ರಹಾರ ಮಾಡಿ ಮಹಿಳೆಯರನ್ನು ಮಕ್ಕಳನ್ನು ಬೂಟುಗಾಲಿನಿಂದ ತುಳಿದುಹಾಕಿದ್ದಾರೆ. ಆದರೂ ಚಳುವಳಿ ನಿರತರು ಚದುರಲಿಲ್ಲ. ಇಂತಹ ಚಳುವಳಿಗಳು ಎಲ್ಲಾ ಕಡೆಗಳಲ್ಲಿಯೂ ನಡೆಯಬೇಕು.

**ಸಾಮಾಜಿಕ ಭದ್ರತೆಗಾಗಿ**

ಅಸಂಘಟಿತ ಮತ್ತು ಅನೌಪಚಾರಿಕ ವಲಯದಲ್ಲಿ ದುಡಿಯುತ್ತಿರುವ ಲಕ್ಷ ಲಕ್ಷಗಟ್ಟಲೆ ಕೆಲಸಗಾರರಿಗೆ ಸರಿಯಾದ ವೇತನ ಸಿಗುವುದಿಲ್ಲ ಮಾತ್ರವಲ್ಲ ಅವರಿಗೆ ಸರಿಯಾದ ಸಾಮಾಜಿಕ ಭದ್ರತೆಯು ಸಹ ಇಲ್ಲ. ಕಾರ್ಮಿಕರ ಭವಿಷ್ಯ ನಿಧಿಯನ್ನು ಎಲ್ಲಾ ಕೆಲಸಗಾರರಿಗೆ ಅನ್ವಯ ಮಾಡಿಲ್ಲ. ಬೀಡಿ ಕಾರ್ಮಿಕರಿಗೆ ಅದನ್ನು ಅನ್ವಯಗೊಳಿಸಲಾಗಿದ್ದರೂ ಸಂಘಟನೆ ಬಲಿಷ್ಠವಾಗಿರುವ ದ.ಕ ಮತ್ತು ಉಡುಪಿ ಜಿಲ್ಲೆಗಳಲ್ಲಿ ಮಾತ್ರ ಅದು ಜಾರಿಯಾಗಿದ್ದು ಉಳಿದ ಕಡೆ ಲಕ್ಷಾಂತರ ಕಾರ್ಮಿಕರು ಈ ಸೌಲಭ್ಯದಿಂದ ವಂಚಿತರಾಗಿದ್ದಾರೆ. ಅಂಗನವಾಡಿ, ಬಿಸಿಯೂಟ, ಪಂಚಾಯಿತಿ, ಮುನಿಸಿಪಾಲಿಟಿಗಳಲ್ಲಿ ಕೆಲಸ ಮಾಡುವ ನೌಕರರಿಗೆ, ಕೃಷಿ ಉತ್ಪನ್ನ ಮಾರುಕಟ್ಟೆ, ಗಿರಣಿ ಹಾಗೂ ಉಗ್ರಾಣಗಳಲ್ಲಿ ದುಡಿಯುತ್ತಿರುವ ಹಮಾಲಿ ಕಾರ್ಮಿಕರಿಗೆ, ಕಟ್ಟಡ ನಿರ್ಮಾಣ ಕೈಗಾರಿಕೆಯಲ್ಲಿ ದುಡಿಯುತ್ತಿರುವವರಿಗೆ ಕಾರ್ಮಿಕರ ಭವಿಷ್ಯ ನಿಧಿ ಯನ್ನು ತುರ್ತಾಗಿ ಅನ್ವಯಿಸುವುದು ಆಗಬೇಕಾಗಿದೆ.

ಪುಟ 15 ಕ್ಕೆ

## ಸಾಮಾನ್ಯ ಕನಿಷ್ಟ ಕೂಲಿಗಾಗಿ ಸಮರ ಸಾಗಲಿ

ಕೇಂದ್ರ ಮತ್ತು ರಾಜ್ಯ ಸರ್ಕಾರದ ಉದಾರೀಕರಣ ನೀತಿಗಳ ಪರಿಣಾಮವಾಗಿ ಇಂದು ಹೆಚ್ಚೆಚ್ಚು ಜನ ಕೂಲಿಯಾಳುಗಳಾಗುತ್ತಿದ್ದಾರೆ. ಇವರೊಳಗೆ ಕೇವಲ ನೂರಕ್ಕೆ ಹತ್ತರಷ್ಟು ಮಾತ್ರ ದೊಡ್ಡ ಕಾರ್ಖಾನೆಗಳಲ್ಲಿ ದುಡಿಯುತ್ತಿದ್ದಾರೆ. ಇವರನ್ನು 'ಸಂಘಟಿತ ವಲಯದ ಕಾರ್ಮಿಕರು' ಎನ್ನಲಾಗುತ್ತದೆ. ದೊಡ್ಡ ಕಾರ್ಖಾನೆಗಳಲ್ಲಿ ದುಡಿಯುತ್ತಿರುವ ಕಾರ್ಮಿಕರಿಗೆ ಕಾನೂನು ಬದ್ಧ ಕನಿಷ್ಟ ಕೂಲಿಗಿಂತ ಹೆಚ್ಚಿಗೆ ಸಂಬಳ ಸಿಗುತ್ತದೆ. ಆದರೆ ತಮ್ಮ ಕೂಲಿಯನ್ನು ಚೌಕಾಸಿಯ ಮೂಲಕ ನಿರ್ಧರಿಸಿಕೊಳ್ಳಲು ಸಾಮರ್ಥ್ಯವಿಲ್ಲದ ಸುಮಾರು 2 ಕೋಟಿ ಜನ ಕಾರ್ಮಿಕರಿದ್ದಾರೆ. ಇವರೊಳಗೆ ಮಹಿಳೆಯರೂ ಸಮ ಸಂಖ್ಯೆಯಲ್ಲಿದ್ದಾರೆ. ಇವರನ್ನು 'ಅಸಂಘಟಿತ ವಲಯದ ಕಾರ್ಮಿಕರು' ಎನ್ನಲಾಗುತ್ತದೆ. ಕೃಷಿ ಕಾರ್ಮಿಕರು, ತೋಟ ಕಾರ್ಮಿಕರು, ಬೀಡಿ, ಅಗರಬತ್ತಿ, ಅರಣ್ಯ, ಕಟ್ಟಡ ನಿರ್ಮಾಣ, ಹೋಟೆಲ್, ಪೆಟ್ರೋಲ್ ಪಂಪ್, ಅಂಗಡಿ ಮತ್ತು ವಾಣಿಜ್ಯ ಸಂಸ್ಥೆಗಳು, ಸಾರಿಗೆ ಮೊದಲಾದ ಕ್ಷೇತ್ರಗಳಲ್ಲಿ ಹಾಗೂ ಹೆಂಚು, ಗಾರ್ಮೆಂಟ್ಸ್, ಎಂಜಿನಿಯರಿಂಗ್ ವರ್ಕ್‌ಶಾಪ್, ಗ್ಯಾರೇಜ್ ಮೊದಲಾದ ಸಣ್ಣ ಕಾರ್ಖಾನೆಗಳಲ್ಲಿ ದುಡಿಯುತ್ತಿರುವ ಕಾರ್ಮಿಕರು ಅಸಂಘಟಿತ ವಲಯದ ಕಾರ್ಮಿಕರಾಗಿದ್ದು ಸರ್ಕಾರವೇ ಇವರ ಕನಿಷ್ಟ ವೇತನ ಏಷ್ಟಿರಬೇಕೆಂದು ನಿರ್ಧರಿಸುತ್ತದೆ. ಇತ್ತೀಚೆಗೆ ಪೌರಸಂಸ್ಥೆಗಳಲ್ಲಿ ಮತ್ತು ಗ್ರಾಮಪಂಚಾಯಿತಿಗಳಲ್ಲಿ ದುಡಿಯುತ್ತಿರುವ ಕೆಲಸಗಾರರನ್ನು ಈ ವ್ಯಾಪ್ತಿಗೆ ಸೇರಿಸಲಾಗಿದೆ. ಇವರಲ್ಲದೆ ಅಂಗನವಾಡಿಗಳಲ್ಲಿ, ಶಾಲಾ ಮಕ್ಕಳ ಮಧ್ಯಾಹ್ನದ ಊಟದ ಯೋಜನೆ ಅಡಿಯಲ್ಲಿ, ಆರೋಗ್ಯ, ಶಿಕ್ಷಣದಂತಹ ಯೋಜನೆಗಳ ಅಡಿಯಲ್ಲಿ ಹಾಗೂ ಹಮಾಲಿ ಕಾರ್ಮಿಕರಾಗಿ, ದುಡಿಯುತ್ತಿರುವವರಿದ್ದಾರೆ ಇವರನ್ನು ಇನ್ನೂ ಕನಿಷ್ಟ ವೇತನದ ವ್ಯಾಪ್ತಿಗೆ ಸೇರಿಸಲಾಗಿಲ್ಲ ಮಾತ್ರವಲ್ಲ ಅವರು ಕಾನೂನುಬದ್ಧ ಕನಿಷ್ಟ ವೇತನಕ್ಕಿಂತ ಕಮ್ಮಿ ವೇತನ ಪಡೆಯುತ್ತಿದ್ದು ಅತ್ಯಂತ ಕನಿಷ್ಟ ಜೀವನ ನಡೆಸುತ್ತಿದ್ದಾರೆ.

ರಾಜ್ಯದಲ್ಲಿ ಸರ್ಕಾರ ನಿಗದಿಪಡಿಸಿದ ಸರಾಸರಿ ಕನಿಷ್ಠ ಕೂಲಿ ದಿನವೊಂದಕ್ಕೆ ರೂ.70, ಕೃಷಿ ಕಾರ್ಮಿಕರಿಗೆ ಇತ್ತೀಚೆಗೆ ರೂ. 100 ನಿಗದಿಯಾಗಿದೆ. ಆದರೆ ಅದು ಎಲ್ಲಿಯೂ ಜಾರಿಯಲ್ಲಿಲ್ಲ. ಬೆಲೆಏರಿಕೆಗೆ ಅನುಗುಣವಾಗಿ ಅಸಂಘಟಿತ ವಲಯದ ಈ ಕಾರ್ಮಿಕರ ಕನಿಷ್ಠ ಕೂಲಿ ಏರುವುದಿಲ್ಲ. ಈ ಅತ್ಯಲ್ಪ ವೇತನ ಅವರ ಬದುಕಿಗಾಗಲಿ, ಕುಟುಂಬ ನಿರ್ವಹಣೆಗಾಗಲಿ ಸಾಕಾಗುವುದಿಲ್ಲ. ಇವರೊಳಗಿನ ಅಕುಶಲ ಕಾರ್ಮಿಕರಿಗೆ ಬೆಲೆ ಸೂಚ್ಯಂಕದ 2967 ಅಂಶಗಳಿಗೆ ತಿಂಗಳಿಗೆ ರೂ. 4080, ಅರೆಕುಶಲ ಕಾರ್ಮಿಕರಿಗೆ ತಿಂಗಳಿಗೆ ರೂ.4692 ಮತ್ತು ಕುಶಲ ಕಾರ್ಮಿಕರಿಗೆ ತಿಂಗಳಿಗೆ ರೂ. 6120 ಕನಿಷ್ಠ ಕೂಲಿಯನ್ನು ನಿಗಧಿ ಪಡಿಸಬೇಕೆಂದೂ, ಬೆಲೆ ಸೂಚ್ಯಾಂಕದ 2967 ರ ಮೇಲಿನ ಪ್ರತಿಯೊಂದು ಪಾಯಿಂಟಿಗೆ ರೂ. 1.50 ದರದಲ್ಲಿ ತುಟ್ಟಿಭತ್ಯೆ ನೀಡಬೇಕೆಂದು ರಾಜ್ಯದ ಸಿಐಟಿಯು ಕಾರ್ಮಿಕ ಸಂಘಟನೆ ಸರ್ಕಾರವನ್ನು ಒತ್ತಾಯಿಸುತ್ತಿದೆ. ಕಾರ್ಮಿಕರ ಕನಿಷ್ಠ ಅವಶ್ಯಕತೆಗಳನ್ನು ಹಾಗೂ ಬೆಲೆಏರಿಕೆಯನ್ನು ಲೆಕ್ಕಹಾಕಿ ಈ ಬೇಡಿಕೆಯನ್ನು ರೂಪಿಸಲಾಗಿದೆ. ರಾಜ್ಯದ 2 ಕೋಟಿ ಜನಗಳಿಗೆ ಈ ಕನಿಷ್ಠ ವೇತನ ಸಿಕ್ಕರೆ, ಅದರಿಂದ ರಾಜ್ಯದಲ್ಲಿ ಉತ್ಪಾದನೆ, ವ್ಯಾಪಾರ ವಹಿವಾಟು ವೃದ್ಧಿಯಾಗಿ ರಾಜ್ಯದ ನಿಜವಾದ ಅಭಿವೃದ್ಧಿಗೆ ನಾಂದಿಯಾಗಲಿದೆ. ಅಸಂಘಟಿತ ವಲಯದ ಒಂದೊಂದು ವಿಭಾಗಕ್ಕೆ ಪ್ರತ್ಯೇಕವಾಗಿ ಕನಿಷ್ಠ ಕೂಲಿ ನಿಗಧಿ ಪಡಿಸುವುದಕ್ಕೆ ಅನಗತ್ಯವಾಗಿ ಕಾಲಹರಣವಾಗುತ್ತದೆ. ಅದರ ಬದಲಾಗಿ ಎಲ್ಲಾ ಶೆಡ್ಯೂಲ್ಡ್ ಕೈಗಾರಿಕೆಗಳಿಗೆ ದೆಹಲಿ, ಹರ್‍ಯಾಣ, ಪಂಜಾಬ ಮೊದಲಾದ ರಾಜ್ಯಗಳಲ್ಲಿ ಮಾಡಿರುವಂತೆ ಒಂದೇ ಸಾಮಾನ್ಯ ಆದೇಶದ ಮೂಲಕ ಸಾಮಾನ್ಯ ಕನಿಷ್ಠ ಕೂಲಿ ನಿಗದಿ ಮಾಡಬೇಕಿದೆ.

ಈ ಗುರಿ ಮುಟ್ಟಲು ಅಸಂಘಟಿತ ವಲಯದ ಎಲ್ಲ ಕಾರ್ಮಿಕರು ಒಂದಾಗಿ ಸಮರಶೀಲ ಹೋರಾಟಕ್ಕೆ ಮುಂದಾಗಬೇಕಿದೆ.




ಅದಮಾರು ಶ್ರೀಪತಿ ಆಚಾರ್ಯ

## ಉಡುಪಿ ಜಿಲ್ಲೆ

**ಸಂಘ ಪರಿವಾರದ ಹೊಣೆಗೇಡಿ ನಡವಳಿಕೆಯಿಂದ ಜನ ಇನ್ನೇನು ಬೇಸತ್ತು ಅವರ ಬಗ್ಗೆ ಜಿಗುಪ್ಸೆ ಪಡುತ್ತಾರೆ ಎನ್ನುವ ಹೊತ್ತಿನಲ್ಲೇ ಕೆ.ಎಫ್.ಡಿ ಎಂಬ ಮುಸ್ಲಿಂ ಮೂಲಭೂತವಾದಿ ಸಂಘಟನೆಯೊಂದು ಅವತರಿಸಿ ಸಂಘ ಪರಿವಾರದ ಕುಚೇಷ್ಟೆಗಳಿಗೆ ಅವರದ್ದೇ ರೀತಿಯಲ್ಲಿ ಪ್ರತಿಕ್ರಿಯೆ ನೀಡಲಾರಂಭಿಸಿ ರುವುದರ ಮೂಲಕ ಸಂಘ ಪರಿವಾರದ ರೊಟ್ಟಿ ಜಾರಿ ತುಪ್ಪದಲ್ಲಿ ಬೀಳುವಂತೆ ಮಾಡುತ್ತಿದೆ.**

# ಸಂಘ ಪರಿವಾರ - ಕೆಎಫ್‌ಡಿಗಳಿಂದ ಸಾಮರಸ್ಯಕ್ಕೆ ಧಕ್ಕೆ

ಇಪ್ಪತ್ತು ವರ್ಷಗಳ ಹಿಂದೆ ಸಂಘ ಪರಿವಾರವು 'ರಾಮಜನ್ಮಭೂಮಿ' ಮತ್ತು 'ಹಿಂದುತ್ವ'ದ ಹುಯಿಲೆಬ್ಬಿಸುವವರೆಗೂ ಕೋಮುಸಾಮರಸ್ಯಕ್ಕೆ ಹೆಸರಾಗಿದ್ದ ಅಂದಿನ ಅವಿಭಜಿತ ದ.ಕ.ಜಿಲ್ಲೆಯ ಉತ್ತರ ಭಾಗವಾಗಿದ್ದ ಉಡುಪಿ ಜಿಲ್ಲೆ ಇದೀಗ ಕೋಮುವಾದದ ಅಟ್ಟಹಾಸಕ್ಕೆ ಆಡುಂಬೊಲವಾಗುತ್ತಿರುವ ಲಕ್ಷಣಗಳು ಆತಂಕಕಾರಿಯಾಗಿವೆ. ಉಡುಪಿಯಿಂದ ದಕ್ಷಿಣಕ್ಕೆ ರಾಷ್ಟ್ರೀಯ ಹೆದ್ದಾರಿ 17ರ ಇಕ್ಕೆಲಗಳಲ್ಲಿರುವ ಕಾಪು, ಮೂಳೂರು, ಉಚ್ಚಿಲ ಮತ್ತು ಪಡುಬಿದ್ರಿಯಂತಹ ಪುಟ್ಟ ಪೇಟೆಗಳ ಪರಿಸರದಲ್ಲಿ ಸ್ವಾತಂತ್ರ್ಯಾನಂತರದ ಐವತ್ತು ವರ್ಷಗಳ ಕಾಲ ಹಿಂದೂ, ಮುಸ್ಲೀಮರು ಪರಸ್ಪರ ಸಾಮರಸ್ಯ ಮತ್ತು ಸೌಹಾರ್ದದಿಂದಲೇ ಬಾಳ್ವೆ ನಡೆಸುತ್ತಿದ್ದರು. ಎರಡೂ ಸಮುದಾಯಗಳ ನಡುವೆ ವ್ಯಾಪಾರ, ವಹಿವಾಟು ಮತ್ತು ಸಾಮಾಜಿಕ ಸಂಬಂಧಗಳಿಗೆ ಯಾವುದೇ ಅಡಚಣೆ ಇರಲಿಲ್ಲ. 1960ರ ದಶಕದಲ್ಲಿ ಕಾಂಗ್ರೆಸ್ ಅಭ್ಯರ್ಥಿಯಾಗಿ ವಿಧಾನಸಭೆಗೆ ಸ್ಪರ್ಧಿಸಿದ್ದ ಅಂದಿನ ಧರ್ಮಸ್ಥಳದ ಧರ್ಮಾಧಿಕಾರಿ ಡಿ.ರತ್ನವರ್ಮ ಹೆಗ್ಗಡೆಯವರನ್ನು ಯಾವುದೇ ಬೆದರಿಕೆಗೆ ಮಣಿಯದೆ ಸೋಲಿಸಿ, ಪಿ.ಎಸ್.ಪಿ.ಯಿಂದ ಶ್ರೀ ಬಿ.ಭಾಸ್ಕರ ಶೆಟ್ಟರನ್ನು ಗೆಲ್ಲಿಸಿದ ಪ್ರಜ್ಞಾವಂತ ಮತದಾರರು ಇಲ್ಲಿನವರು. ಇಂತಹ ಪ್ರದೇಶದಲ್ಲೂ ಸಂಘ ಪರಿವಾರ ಕೋಮುವಾದದ ಬೀಜ ಬಿತ್ತಿ ಅದನ್ನೊಂದು ವಿಷ ವೃಕ್ಷವಾಗಿ ಬೆಳೆಸುವುದರಲ್ಲಿ ಯಶಸ್ವಿಯಾಗಿದೆ. ಒಂದು ಕಾಲದಲ್ಲಿ ಮೇಲು ಜಾತಿ ಮತ್ತು ಮೇಲು ವರ್ಗದ ಜನರಿಗೆ ಮಾತ್ರ ಸೀಮಿತವಾಗಿದ್ದ ಸಂಘ ಪರಿವಾರ ಮತ್ತು ಹಿಂದುತ್ವದ ಪ್ರಭಾವ ಇದೀಗ ಸಮಾಜದ ತೀರಾ ಕೆಳಗಿನ ಸ್ತರದಲ್ಲಿರುವ ಬಡ ಹಾಗೂ ಹಿಂದುಳಿದ ವರ್ಗಗಳು ಹಾಗೂ ಪರಿಶಿಷ್ಟ ಪಂಗಡ ಮತ್ತು ಪರಿಶಿಷ್ಟ ಜಾತಿಯವರನ್ನೂ ತನ್ನ ತೆಕ್ಕೆಗೆ ತೆಗೆದುಕೊಂಡಿರುವುದು ಒಂದು ದೊಡ್ಡ ದುರಂತ.

### ರಸ್ತೆತಡೆ ಯಾಕೆ? ಜನರ ತರಾಟೆ

ಕೆಲವು ತಿಂಗಳ ಹಿಂದೆ 'ರಾಮಸೇತು'ವಿನ ಪ್ರಶ್ನೆಯಲ್ಲಿ ಸಂಘ ಪರಿವಾರದ ಜನ ಕಾಪುವಿನಲ್ಲಿ ರಾಷ್ಟ್ರೀಯ ಹೆದ್ದಾರಿ ಬಂದ್ ನಡೆಸಿದರು. ಕ್ಷಣ ಕ್ಷಣವೂ ನೂರಾರು ವಾಹನಗಳು ಎಡೆಬಿಡದೆ ಆಚೀಚೆ ಓಡಾಡುವ ಈ ಮಾರ್ಗದಲ್ಲಿ ಕೆಲವೇ ನಿಮಿಷಗಳಲ್ಲಿ ಸಾವಿರಾರು ವಾಹನಗಳು ಸ್ತಬ್ಧವಾಗಿ ನಿಲ್ಲಬೇಕಾಯಿತು. ಬಸ್‌ಗಳಲ್ಲಿದ್ದ ಪ್ರಯಾಣಿಕರು ಬಂದ್ ಸಂಘಟಕರನ್ನು ಬಾಯಿಗೆ ಬಂದಂತೆ ಬೈದುಕೊಂಡರು. ಮದುವೆ, ಮುಂಜಿ ಮುಂತಾದ ಕಾರ್ಯಕ್ರಮಗಳಿಗೆ ತುರ್ತಾಗಿ ಹೋಗಬೇಕಾಗಿದ್ದವರು 'ಇಲ್ಲಿಯೇ ಕಾಪುವಿನ ಬಳಿ ಇರುವ ಪಾಂಗಾಳ ಸೇತುವೆಯನ್ನು ಮುರಿದರೆ ನೀವು ರಸ್ತೆ ತಡೆ ಮಾಡುವುದು ಸರಿ. ಆದರೆ ಎಲ್ಲೋ ಇರುವ ಅಥವಾ ಇಲ್ಲದೇ ಇರುವ ರಾಮನ ಸೇತುವೆಗಾಗಿ ಇಲ್ಲಿ ಯಾಕೆ ಹೆದ್ದಾರಿ ಬಂದ್ ಮಾಡುತ್ತೀರಿ'? ಎಂದು ಸಂಘಟಕರನ್ನು ತರಾಟೆಗೆ ತೆಗೆದುಕೊಂಡರು. ಸಂಘ ಪರಿವಾರದವರು ಎಷ್ಟೇ ಬೊಂಬಡಿ ಹೊಡೆದರೂ ಸಾಮಾನ್ಯ ಜನಕ್ಕೆ 'ರಾಮಸೇತು'ವಿನ ಬಗ್ಗೆ ಕಳಕಳಿ ಇರಲಿಲ್ಲ ಮತ್ತು ಹೆದ್ದಾರಿ ಬಂದ್‌ನಿಂದಾಗಿ ಸಂಘ ಪರಿವಾರ ತನ್ನ ಮುಖಕ್ಕೆ ತಾನೇ ಮಸಿ ಬಳಿದುಕೊಳ್ಳಬೇಕಾಗಿ ಬಂತು.

### ಹೊಣೆಗೇಡಿತನ

ಇದಾದ ಮೇಲೆ 'ಪಡುಬಿದ್ರಿಯ ಇಬ್ಬರು ಬಜರಂಗಿ ಕಾರ್ಯಕರ್ತರ ಮೇಲೆ ಯಾರೋ ಅಜ್ಞಾತ ವ್ಯಕ್ತಿಗಳು ಮೂರು ತಿಂಗಳ ಹಿಂದೆ ಹಲ್ಲೆ ನಡೆಸಿದ್ದಾರೆ. ಅವರನ್ನು ಈವರೆಗೂ ಯಾಕೆ ಬಂಧಿಸಿಲ್ಲ?' ಎಂದು ವಾದ ಹೂಡಿ ಸಂಘ ಪರಿವಾರದವರು 12.02.08ರಂದು ದಿನವಿಡೀ ಹೆದ್ದಾರಿ ಬಂದ್‌ಗೆ ಕರೆ ನೀಡಿದರು. ಆದರೆ ಜಿಲ್ಲಾಡಳಿತ ಮತ್ತು ಪೊಲೀಸರು ಇಂತಹ ಹೊಣಗೇಡಿತನದ ಕಾರ್ಯಕ್ರಮದ ಬಗ್ಗೆ ಕಟ್ಟುನಿಟ್ಟಿನ ಕ್ರಮ ಕೈಗೊಂಡರು. ವ್ಯಾಪಕ ಪ್ರಚಾರ ನಡೆಸಿ ಅಟ್ಟಹಾಸದ ಸಿದ್ಧತೆ ನಡೆಸಿದ್ದ ಸಂಘ ಪರಿವಾರದವರ 'ರಾಷ್ಟ್ರೀಯ ಹೆದ್ದಾರಿ ಬಂದ್' ಜನ ಬೆಂಬಲವಿಲ್ಲದೆ 'ಠುಸ್' ಆಯಿತು. ಕೆಲದಿನಗಳ ಹಿಂದೆ ಕಾಪು ಪರಿಸರದಲ್ಲಿ ಮಾತಾ ಅಮೃತಾನಂದ ಮಯಿಯ ಕಾರ್ಯಕ್ರಮದ ಬಗ್ಗೆ ಹಾಕಿದ್ದ ಬ್ಯಾನರ್ ಒಂದನ್ನು ಯಾರೋ ಕಿತ್ತು ಹಾಕಿದ್ದಾರೆಂಬ ನೆಪದಲ್ಲಿ ಸಂಘ ಪರಿವಾರ ನಡೆಸಬೇಕೆಂದಿದ್ದ ಗಲಭೆಗೂ ಜನ ಬೆಂಬಲ ದೊರೆಯಲಿಲ್ಲ.


ಕಿತ್ತು ಬಿದ್ದಿರುವ ಬ್ಯಾನರ್

ಆದರೆ ಸಂಘ ಪರಿವಾರದ ಇಂತಹ ಹೊಣೆಗೇಡಿ ನಡವಳಿಕೆಯಿಂದ ಜನ ಇನ್ನೇನು ಬೇಸತ್ತು ಅವರ ಬಗ್ಗೆ ಜಿಗುಪ್ಸೆ ಪಡುತ್ತಾರೆ ಎನ್ನುವ ಹೊತ್ತಿನಲ್ಲೇ ಕೆ.ಎಫ್.ಡಿ ಎಂಬ ಮುಸ್ಲಿಂ ಮೂಲಭೂತವಾದಿ ಸಂಘಟನೆಯೊಂದು ಅವತರಿಸಿ ಸಂಘ ಪರಿವಾರದ ಕುಚೇಷ್ಟೆಗಳಿಗೆ ಅವರದ್ದೇ ರೀತಿಯಲ್ಲಿ ಪ್ರತಿಕ್ರಿಯೆ ನೀಡಲಾರಂಭಿಸಿ ರುವುದರ ಮೂಲಕ ಸಂಘ ಪರಿವಾರದ ರೊಟ್ಟಿ ಜಾರಿ ತುಪ್ಪದಲ್ಲಿ ಬೀಳುವಂತೆ ಮಾಡುತ್ತಿದೆ. ಉದಾಹರಣೆಗೆ ಮುಸ್ಲೀಮರು ಸಾಕಷ್ಟು ಸಂಖ್ಯೆಯಲ್ಲಿರುವ ಮೂಳೂರು ಪೇಟೆಯಲ್ಲಿನ ಮಸೀದಿಯ ಮುಂದೆ ಯಾರೋ ಕಿಡಿಗೇಡಿಗಳು ಹಂದಿಯ ತಲೆಯೊಂದನ್ನು ಕಡಿದು ತಂದುಹಾಕಿದ್ದರು. ಮುಸ್ಲಿಮರನ್ನು ರೊಚ್ಚುಗೆಬ್ಬಿಸಿ ಕೋಮುಗಲಭೆಯನ್ನು ಹುಟ್ಟು ಹಾಕಿಸುವುದೇ ಇದರ ಉದ್ದೇಶವೆಂಬುದನ್ನು ಬೇರ ಹೇಳಬೇಕಾಗಿಲ್ಲ. ಆದರೆ ಈ ಪ್ರದೇಶದ ಮುಸ್ಲಿಮರು ಅತ್ಯಂತ ಸಂಯಮದಿಂದ ವರ್ತಿಸಿ ಗಲಭೆ ಆಗುವುದನ್ನು ತಪ್ಪಿಸಿದರು. ಪೊಲೀಸರ ಸಕಾಲಿಕ ಕ್ರಮಗಳಿಂದಾಗಿ ಅನಾಹುತವೇನೂ ಸಂಭವಿಸಲಿಲ್ಲ. ಆದರೂ ಕೆ.ಎಫ್.ಡಿ ಈ ಪ್ರಕರಣವನ್ನು ಮುಂದಿಟ್ಟುಕೊಂಡು ಪ್ರತಿಭಟನೆ ನಡೆಸಲು ಮುಂದಾಯಿತು. ಈ ಊರಿನ ಪ್ರಜ್ಞಾವಂತ ಮುಸ್ಲಿಮರು ಕೆ.ಎಫ್.ಡಿ.ಯ ಕಾರ್ಯಕ್ರಮವನ್ನೇನು ಬೆಂಬಲಿಸಲಿಲ್ಲ.


ಬ್ಯಾನರ್ ರಂಪಾಟ

### 'ಬ್ಯಾನರ್' ರಂಪಾಟ

ಉಚ್ಚಿಲ ಪೇಟೆಯಲ್ಲಿ ಜಾರಂದಾಯ ದೈವದ ನೇಮಕ್ಕೆ ಸಂಬಂಧಿಸಿದ ಬ್ಯಾನರ್ ಒಂದನ್ನು ಮುಸ್ಲಿಮರೊಬ್ಬರ ಅಂಗಡಿಯ ಮುಂದೆಯೇ ಕಟ್ಟಲಾಗಿತ್ತು. ಇಲ್ಲಿ ನಡೆಯುವ ಉತ್ಸವ, ಜಾತ್ರೆ, ಕೋಲ, ನೇಮ ಮುಂತಾದ ಎಲ್ಲಾ ಧಾರ್ಮಿಕ ಕಾರ್ಯಕ್ರಮಗಳ ಬ್ಯಾನರ್‌ಗಳ ಮುಸ್ಲಿಮರ ಅಂಗಡಿಯ ಮುಂದೆಯೇ ಕಟ್ಟುವುದರ ಹಿಂದಿರುವ ಉದ್ದೇಶ ಸ್ಪಷ್ಟವಾಗಿದೆ. ಹೀಗೆ ಮುಸ್ಲಿಮರ ಅಂಗಡಿಯ ಮುಂದೆ ಕಟ್ಟಲಾಗಿದ್ದ ಈ ಬ್ಯಾನರ್ ವಾಹನವೊಂದು ತಾಗಿ ಅದು ಕಿತ್ತುಹೋಯಿತು. ಕಿತ್ತುಹೋದ ಬ್ಯಾನರನ್ನು ಮರಳಿ ಕಟ್ಟಲು ಕೆಲವು ಹಿಂದೂ ಯುವಕರು ಮುಂದಾದಾಗ ಅಂಗಡಿಯ ಮಾಲೀಕರ ಮಗ ಆಕ್ಷೇಪಿಸಿದನಂತೆ. ಈತ ಮಾನಸಿಕವಾಗಿ ದುರ್ಬಲನೆಂದು ಹೇಳಲಾಗಿದೆ. ಬ್ಯಾನರನ್ನು ಮರಳಿ ಕಟ್ಟುವ ವಿಚಾರದಲ್ಲಿ ಈತನಿಗೂ ಅಲ್ಲಿದ್ದ ಯುವಕರಿಗೂ ವಾದ ವಿವಾದಗಳುಂಟಾಗಿ ಆತ ಒಬ್ಬ ಹಿಂದು ಯುವಕನ ಮೇಲೆ ಕೈ ಮಾಡಿದನಂತೆ. ಈ ಅವಕಾಶಕ್ಕಾಗಿಯೇ ಕಾಯುತ್ತಿದ್ದ ಸಂಘ ಪರಿವಾರದವರು ಬಿ.ಜೆ.ಪಿಯ ಮಾಜಿ ಶಾಸಕ ಲಾಲಾಜಿ ಮೆಂಡನ್ ನಾಯಕತ್ವದಲ್ಲಿ ಗುಂಪುಗೂಡಿ ಅಂಗಡಿ ಮಾಲೀಕನನ್ನು ತರಾಟೆಗೆ ತೆಗೆದುಕೊಂಡರು. ಅಷ್ಟರಲ್ಲಿ ಅಂಗಡಿ ಮಾಲೀಕನ ಹೆಂಡತಿ ಹೊರಗೆ ಬಂದು ಅಲ್ಲಿದ್ದ ಜನ ತನ್ನ ಮೇಲೆ ಹಲ್ಲೆ ನಡೆಸಿದ್ದರೆಂದು ದೂರಿಕೊಂಡರೆನ್ನಲಾಗಿದೆ.

ಆದರೆ ಪ್ರತ್ಯಕ್ಷದರ್ಶಿಗಳ ಪ್ರಕಾರ ಅಂತಹ ಹಲ್ಲೆಯೇನೂ ನಡೆದಿರಲಿಲ್ಲ. ಅಷ್ಟರಲ್ಲಿ ಪೊಲೀಸರು ಸ್ಥಳಕ್ಕೆ ಧಾವಿಸಿ ಪರಿಸ್ಥಿತಿಯನ್ನು ಹತೋಟಿಗೆ ತಂದಿದ್ದಾರೆ. ಈ ದೃಶ್ಯವನ್ನು ಮೊಬೈಲ್‌ನಲ್ಲಿ ಸೆರೆ ಹಿಡಿಯಲು ಪ್ರಯತ್ನಿಸಿದ್ದ ಕೆ.ಎಫ್.ಡಿ ಕಾರ್ಯಕರ್ತರೆಂದು ಸಂದೇಹಿಸಲಾದ ವ್ಯಕ್ತಿಗಳನ್ನು ಪೊಲೀಸರು ಚದುರಿಸಿದ್ದಾರೆ. ಲಾಲಾಜಿ ಮೆಂಡನ್ ಮತ್ತು ಪೊಲೀಸರ ನಡುವೆ ವಾದ ವಿವಾದ ನಡೆಯುತ್ತಿದ್ದಾಗ ಒಬ್ಬ ಪೊಲೀಸ್ ಪೇದೆಯ ಕೈ ಆಕಸ್ಮಾತ್ತಾಗಿ ಮಾಜಿ ಶಾಸಕರಿಗೆ ತಾಕಿತಂತೆ ಕಾಕತಾಳೀಯವೆಂಬಂತೆ ಈ ಪೊಲೀಸ್ ಪೇದೆ ಒಬ್ಬ ಮುಸ್ಲಿಂ ಆಗಿದ್ದ. ಸಂಘ ಪರಿವಾರದವರಿಗೆ ಇಷ್ಟೇ ಸಾಕಾಗಿತ್ತು. ಮುಸ್ಲಿಂ ಅಂಗಡಿ ಮಾಲೀಕನನ್ನೂ ಅವನ ಮಗನನ್ನೂ ದಸ್ತಗಿರಿ ಮಾಡಬೇಕೆಂದೂ ಲಾಲಾಜಿ ಮೆಂಡನ್‌ರ ಮೇಲೆ ಕೈಮಾಡಿದ ರಫೀಕ್ ಎಂಬ ಪೊಲೀಸ್ ಪೇದೆಯ ವಿರುದ್ಧ ಕ್ರಮ ತೆಗೆದುಕೊಳ್ಳಬೇಕೆಂದು ಅವರು ವರಾತ ಹೂಡುತ್ತಿದ್ದಾರೆ. ಸದ್ಯಕ್ಕಂತೂ ಪರಿಸ್ಥಿತಿ ಮೇಲ್ನೋಟಕ್ಕಾದರೂ ಶಾಂತವಾಗಿರುವಂತೆ ಕಂಡುಬಂದರೂ ಸಂಘ ಪರಿವಾರ ಮತ್ತು ಕೆ.ಎಫ್.ಡಿ.ಗಳು ಹಿಂದೂ ಮತ್ತು ಮುಸ್ಲಿಂ ಸಮುದಾಯಗಳ ನಡುವಿನ ಕಂದರವನ್ನು ಇನ್ನಷ್ಟು ವಿಸ್ತರಿಸುವುದರಲ್ಲಿ ನಿರತವಾಗಿವೆ ಎನ್ನುವುದು ಸುಸ್ಪಷ್ಟ.

### ಅನುಮಾನ ನೀಗಬೇಕು, ವಿಶ್ವಾಸ ಮೂಡಬೇಕು


ಇತ್ತೀಚೆಗೆ ಮುಸ್ಲಿಂ ಸಮುದಾಯದೊಳಗೆ ಸೇರಿರುವ ಭಯ ಮತ್ತು ಅಸುರಕ್ಷಿತತೆಯ ಭಾವನೆಯಿಂದಾಗಿ ಅವರು ಎಲ್ಲಿಗೆ ಹೋದರೂ ಒಂಟಿಯಾಗಿ ಹೋಗದೆ ನಾಲ್ಕಾರು ಮಂದಿ ಜೊತೆಯಾಗಿ ಹೋಗುತ್ತಾರೆ. ಹೀಗೆ ಒಂದೇ ಕಡೆ ನಾಲ್ಕು ಬುರ್ಖಾಧಾರಿ ಮಹಿಳೆಯರನ್ನು ಗಡ್ಡ ಬೆಳೆಸಿದ ಇಬ್ಬರು ಗಂಡಸರನ್ನು ಕಂಡಾಗ ಅಮಾಯಕ ಹಿಂದೂಗಳ ತಲೆಯಲ್ಲೂ "ಅಯ್ಯಯ್ಯೋ ಎಲ್ಲಾ ಕಡೆ ಮುಸ್ಲೀಮರೇ ತುಂಬಿದ್ದಾರೆ" ಎನ್ನುವ ಭಾವನೆ ಮೂಡುತ್ತದೆ. ಈ ಆಧಾರರಹಿತ ದಿಗಿಲು ಕಾಪು, ಉಚ್ಚಿಲ ಪರಿಸರದಲ್ಲೂ ವ್ಯಾಪಕವಾಗಿದೆ. ಒಂದೆಡೆ ಹಿಂದೂಗಳೇ ರಸ್ತೆ ಬದಿಯಲ್ಲಿರುವ ಅಂಗಡಿ ಮುಂಗಟ್ಟುಗಳನ್ನು, ಜಮೀನನ್ನು ಮುಸ್ಲಿಮರಿಗೆ ದುಬಾರಿ ಬೆಲೆಗೆ ಮಾರಾಟ ಮಾಡುತ್ತಾರೆ. ಇತರ ಎಲ್ಲಾ ಮತಧರ್ಮಗಳ ಜನರು ಮಾಡುವಂತೆ ತಮ್ಮ ಒಡೆತನಕ್ಕೆ ಬಂದ ಅಂಗಡಿ ಮುಂಗಟ್ಟುಗಳನ್ನು ಮುಸ್ಲಿಮರು ತಮ್ಮವರಿಗೇ ಕೊಡುತ್ತಾರೆ. ತಾವು ಖರೀದಿಸಿದ ಜಮೀನನ್ನು ಮನೆ ನಿವೇಶನಗಳಾಗಿ ಪರಿವರ್ತಿಸಿ ತಮ್ಮವರಿಗೇ ಮಾರುತ್ತಾರೆ. ಹೀಗೆ ಎಲ್ಲಾ ಅಂಗಡಿ ಮುಂಗಟ್ಟುಗಳು, ಮನೆ ಸೈಟುಗಳಿಗೆ ಮುಸ್ಲೀಮರು ಬಂದಾಗ ಅವುಗಳನ್ನು ದುಬಾರಿ ಬೆಲೆಗೆ ಮಾರಿದ ಹಿಂದುಗಳೇ ಕಂಗಾಲಾಗಿ ಭಜರಂಗಿಗಳಿಗೆ ದೂರು ಕೊಡುತ್ತಾರೆ! ಸಂಘ ಪರಿವಾರದವರು ಈ ಆಧಾರರಹಿತ ಭಯಕ್ಕೆ ಕುಮ್ಮಕ್ಕು ನೀಡಿ ಮುಸ್ಲಿಮ್ ವಿರೋಧವನ್ನು ಬೆಳೆಸುತ್ತಾರೆ. ಇದು ಮುಂದೊಂದು ದಿನ ಈ ಎರಡೂ ಸಮುದಾಯಗಳ ಧ್ರುವೀಕರಣಕ್ಕೆ ಕಾರಣವಾಗುವ ಅಪಾಯವಿದೆ. ಮುಸ್ಲಿಮರಿಗೆ ಸುರಕ್ಷಿತೆಯ ಭಾವನೆ ಬರಬೇಕು. ಅವರಲ್ಲಿ ಆತ್ಮವಿಶ್ವಾಸ ಮೂಡುವಂತಹ ಕ್ರಮ ಕೈಗೊಳ್ಳಬೇಕು. ಹಿಂದೂಗಳಲ್ಲಿ ಮುಸ್ಲಿಮರ ಬಗ್ಗೆ ಇರುವ ಅನುಮಾನ ತೊಲಗಿ ವಿಶ್ವಾಸ ಮೂಡಬೇಕು. ಹೀಗಾಗದಿದ್ದಲ್ಲಿ ನಮ್ಮ ಸಮಾಜ ಮತ್ತೆ ಒಡೆಯುವ ಅಪಾಯವಿದೆ.

ಜನಶಕ್ತಿ ಕನ್ನಡ ವಾರಪತ್ರಿಕೆ



# ಪರಮಾಣು ವ್ಯವಹಾರ
## ನಿರ್ಣಾಯಕ ಕ್ಷಣವೀಗ ಬಂದಿದೆ

ಕಾಂಗ್ರೆಸ್ ಮುಖಂಡತ್ವ ಬುಶ್ ಆಡಳಿತದ ಬಾಲ ಹಿಡಿಯುವ ನಿರ್ಣಯ ಮಾಡಬಯಸುತ್ತದೋ ಅಥವಾ ಸಂಸತ್ತು ಮತ್ತು ಜನರ ದನಿಗಳಿಗೆ ಕಿವಿಗೊಟ್ಟು ಪ್ರಜಾ ಸತ್ತಾತ್ಮಕವಾಗಿ ವರ್ತಿಸುತ್ತದೋ ಎಂಬುದನ್ನು ನಿರ್ಧರಿಸಬೇಕಾಗಿದೆ. ಎಡ ಪಕ್ಷಗಳು ಈ ಬಗ್ಗೆ ಒಂದು ತ್ವರಿತ ಮತ್ತು ಸ್ಪಷ್ಟ ಉತ್ತರ ಬೇಕು ಎಂದಿವೆ. ಈ ಸರಕಾರದ ಭವಿಷ್ಯ ಅವರು ಕೈಗೊಳ್ಳುವ ನಿರ್ಧಾರವನ್ನು ಅವಲಂಬಿಸಿದೆ ಎಂದೂ ಎಡ ಪಕ್ಷಗಳು ಎಚ್ಚರಿಸಿವೆ.



ಮತ್ತೆ ಭಾರತ-ಅಮೆರಿಕಾ ಪರಮಾಣು ವ್ಯವಹಾರ ಸುದ್ದಿಯಲ್ಲಿದೆ. ಈ ವ್ಯವಹಾರವನ್ನು ಪೂರ್ಣಗೊಳಿಸುವತ್ತ ಇನ್ನೊಂದು 'ಯಶಸ್ವಿ' ಹೆಜ್ಜೆ ಇಡಲಾಗಿದೆ ಎಂದು ಅಮೆರಿಕಾ-ಪರ ಮಾಧ್ಯಮಗಳು ಸುದ್ದಿ ಹರಡಿವೆ. ಇದಕ್ಕೆ ಪ್ರಧಾನ ಮಂತ್ರಿಗಳ ಕಚೇರಿಯಲ್ಲಿನ ಮತ್ತು ವಿದೇಶಾಂಗ ಇಲಾಖೆಯ ಕೆಲವು ಮೂಲಗಳೂ ನೆರವು ನೀಡುತ್ತಿರುವಂತೆ ಕಾಣುತ್ತದೆ. ಅಂತರ್ರಾಷ್ಟ್ರೀಯ ಅಣುಶಕ್ತಿ ಏಜೆನ್ಸಿ (ಐಎಇಎ)ಯೊಂದಿಗೆ ಐದು ಸುತ್ತುಗಳ ಮಾತುಕತೆಗಳ ನಂತರ ಭಾರತ ಒಂದು ರಕ್ಷಕ ಒಪ್ಪಂದ ಪಡೆದಿದೆ, ಇದರ ಪ್ರಕಾರ ಹೈಡ್ ಕಾನೂನು ಮತ್ತು ಅದರ ಶಿಶುವಾದ 123 ಒಪ್ಪಂದದಲ್ಲಿನ ಸಮಸ್ಯೆಗಳಿಗೆಲ್ಲ ಪರಿಹಾರ ಸಿಕ್ಕಂತಾಗಿದೆ ಎಂದು ಹೇಳಲಾಗುತ್ತಿದೆ.

ಇದು ಕೇವಲ ಬೊಗಳೆ ಎಂದು ಈ ವ್ಯವಹಾರವನ್ನು ವಿರೋಧಿಸುವವರು ಹೇಳುತ್ತಾರೆ. ನಿಜವಾಗಿಯೂ ಈ ಸುದ್ದಿ ಅರ್ಥಹೀನ. ಏಕೆಂದರೆ ಐಎಇಎ ಒಂದು ಅಂತರ್ರಾಷ್ಟ್ರೀಯ ನಿಯಂತ್ರಣ ಸಂಸ್ಥೆಯೇ ಹೊರತು ಅದು ಪರಮಾಣು ಇಂಧನವನ್ನಾಗಲೀ, ಸಾಧನಗಳನ್ನಾಗಲೀ ಪೂರೈಸುವುದಿಲ್ಲ. 123 ಒಪ್ಪಂದದಲ್ಲಿ ಇದನ್ನು ಪೂರೈಸುವ ಪಾರ್ಟಿಯೆಂದರೆ ಅಮೆರಿಕಾ. ಅವರ ಹೈಡ್ ಕಾನೂನಿನಲ್ಲಾಗಲೀ, 123 ಒಪ್ಪಂದದಲ್ಲಾಗಲೀ ರಕ್ಷಕ ಒಪ್ಪಂದ ಪಡೆದ ಪರಮಾಣು ರಿಯಾಕ್ಟರುಗಳಿಗೆ ಕೊನೆಯ ವರೆಗೂ ಇಂಧನ ಪೂರೈಸುವ ಅಂಶವೇನೂ ಇಲ್ಲ. ಅಡೆತಡೆಯಿಲ್ಲದೆ ಇಂಧನ ಪೂರೈಸುವ ಭರವಸೆ ನೀಡುವುದು ಐಎಇಎ ಅಧಿಕಾರ ವ್ಯಾಪ್ತಿಯೊಳಗೆ ಬರುವುದಿಲ್ಲ. ಅತ್ತ ಅಮೆರಿಕಾವಂತೂ ತಾನು ಹೈಡ್ ಕಾನೂನಿಗೆ ಬದ್ಧ, 123 ಒಪ್ಪಂದ ಹೈಡ್ ಕಾನೂನಿಗೆ ವ್ಯತಿರಿಕ್ತವಾಗುವುದಿಲ್ಲ ಎಂದು ಮತ್ತೆ-ಮತ್ತೆ ಹೇಳಿದೆ. ಹೀಗಿರುವಾಗ ಈ ಸುದ್ದಿಗೆ ಏನು ಅರ್ಥವಿದೆ ಎಂಬ ಪ್ರಶ್ನೆ ಸಹಜವೇ.

ಸಮಸ್ಯೆ ಎಲ್ಲಿ?

ಯುಪಿಎ ಸರಕಾರ ತಾನು ಐಎಇಎ ಯೊಂದಿಗೆ ಒಂದು ರಕ್ಷಕ ಒಪ್ಪಂದದ ಬಗ್ಗೆ ಮಾತುಕತೆ ನಡೆಸುತ್ತೇನೆ, ಇದರಲ್ಲಿ ಅಡೆತಡೆಯಿಲ್ಲದೆ ಇಂಧನ ಪೂರೈಕೆ, ಒಂದು ಇಂಧನ ಭಂಡಾರದ ರಚನೆ ಹಾಗು ಸರಿಪಡಿಕೆ ಕ್ರಮಗಳು ಈ ಎಲ್ಲ ಪ್ರಶ್ನೆಗಳನ್ನು ಚರ್ಚಿಸುತ್ತೇನೆ ಎಂದಿತು. ಆದರೆ ಎಡ ಪಕ್ಷಗಳ ಪ್ರಕಾರ ಸಮಸ್ಯೆ ರಕ್ಷಕ ಒಪ್ಪಂದದ್ದಲ್ಲ, ನಿಜವಾದ ಸಮಸ್ಯೆ ಇರುವುದು ಹೈಡ್ ಕಾನೂನು ಮತ್ತು ದ್ವಿಪಕ್ಷೀಯ 123 ಒಪ್ಪಂದದಲ್ಲಿ ಎಂದು ಅಭಿಪ್ರಾಯ ಪಟ್ಟವು. ಇದಕ್ಕೆ ಸಂಬಂಧಪಟ್ಟಂತೆ ಎಡ ಪಕ್ಷಗಳು ಪರಮಾಣು ಪ್ರಶ್ನೆ ಕುರಿತ ಯುಪಿಎ-ಎಡಪಕ್ಷಗಳ ಸಮಿತಿಯಲ್ಲಿ ಹೈಡ್ ಕಾನೂನು, 123 ಒಪ್ಪಂದ, ವಿದೇಶಾಂಗ ನೀತಿ, ದೇಶದ ಭದ್ರತೆ ಕುರಿತಾಗಿ ಐದು ಸಮಗ್ರ ಟಿಪ್ಪಣಿಗಳನ್ನು ಸಲ್ಲಿಸಿದವು ಎಂಬುದು 'ಜನಶಕ್ತಿ' ಯ ಓದುಗರಿಗೆ ತಿಳಿದಿದೆ.

ಕೊಟ್ಟ ವಚನವೇನು? ಮಾಡುತ್ತಿರು ವುದೇನು?


ಏನೇ ಇರಲಿ, ಸರಕಾರ ಬೇಕಾದರೆ ಐಎಇಎ ಯೊಂದಿಗೆ ಮಾತುಕತೆ ನಡೆಸಬಹುದು, ಆದರೆ ಈ ಮಾತುಕತೆಗಳ ಬಗ್ಗೆ ಯುಪಿಎ-ಎಡಪಕ್ಷಗಳ ಸಮಿತಿಗೆ ವರದಿ ನೀಡಬೇಕು, ಸಮಿತಿ ಇದನ್ನು ಪರಿಶೀಲಿಸದೆ ಈ ಒಪ್ಪಂದದಲ್ಲಿ ಮುಂದಿನ ಹೆಜ್ಜೆ ಇಡುವುದಿಲ್ಲ ಎಂದು ನವೆಂಬರ್ 2007ರಲ್ಲಿ ಈ ಸಮಿತಿಯ ಹೇಳಿಕೆಯಲ್ಲಿ ತಿಳಿಸಲಾಯಿತು ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ಅಂದರೆ 123 ಒಪ್ಪಂದದ ಮೇಲೆ ಹೈಡ್ ಕಾನೂನಿನ ಪ್ರಭಾವದ ಬಗ್ಗೆ ಮೂಲಭೂತ ಆಕ್ಷೇಪ ಇರುವಾಗ ಐಎಇಎ ಯೊಂದಿಗೆ ರಕ್ಷಕ ಒಪ್ಪಂದವನ್ನು ಅಂತಿಮ ಗೊಳಿಸುವುದಾಗಲೀ, ಪರಮಾಣು ಪೂರೈಕೆದಾರರ ಗುಂಪಿನೊಡನೆ ಮಾತುಕತೆಯ ಮುಂದಿನ ಕ್ರಮಕ್ಕೆ ಮುಂದಾಗುವುದಾಗಲೀ ಸಾಧ್ಯವಲ್ಲ ಎಂದು ಎಡ ಪಕ್ಷಗಳು ಹೇಳಿದ್ದವು. ಯುಪಿಎ ಅದಕ್ಕೆ ಒಪ್ಪಿಕೊಂಡಿತು. ಆದರೆ ಈಗ ಈ ಒಪ್ಪಂದವನ್ನು ಕಾರ್ಯಗತಗೊಳಿಸುವ ಬಗ್ಗೆ ಸಂಸತ್ತಿನಲ್ಲಿ ವಿದೇಶಾಂಗ ಮಂತ್ರಿಗಳ ಹೇಳಿಕೆ ಮತ್ತು ರಾಷ್ಟ್ರಪತಿಗಳ ಭಾಷಣದ ಮೇಲಿನ ಚರ್ಚೆಗೆ ಉತ್ತರ ಕೊಡುತ್ತಾ ಪ್ರಧಾನ ಮಂತ್ರಿಗಳು ಕೂಡಾ ಅದೇ ಹಳೆಯ ರಾಗ ಆಲಾಪಿಸುತ್ತಿರುವುದಕ್ಕೆ ಎಡ ಪಕ್ಷಗಳು ತಮ್ಮ ತೀವ್ರ ಅಸಮಾಧಾನ ವ್ಯಕ್ತ ಪಡಿಸಿವೆ. ಐಎಇಎ ಯೊಂದಿಗೆ ಒಂದು ರಕ್ಷಕ ಒಪ್ಪಂದದ ಬಗ್ಗೆ ಇತ್ಯರ್ಥಕ್ಕೆ ಬಂದರೆ 123 ಒಪ್ಪಂದ ವನ್ನು ಕಾರ್ಯಗತಗೊಳಿಸಲು ಮುಂದಿನ ಕ್ರಮ ಕೈಗೊಳ್ಳಬಹುದು ಎಂದು ಯುಪಿಎ ಸರಕಾರ ಭಾವಿಸಿದ್ದರೆ ಅದು ದೊಡ್ಡ ತಪ್ಪಾಗುತ್ತದೆ ಎಂದು ಎಡ ಪಕ್ಷಗಳು ಎಚ್ಚರಿಸಿವೆ.

ಪಾರ್ಲಿಮೆಂಟ್‌ನ ಬಹುಮತ ಬೇಡವೇ?

ಸಂಸತ್ತಿನಲ್ಲಿ ಬಹುಪಾಲು ಅಭಿಪ್ರಾಯ ಈ ಒಪ್ಪಂದದ ವಿರುದ್ಧ ಇದೆ ಎಂಬುದು ಈಗಾಗಲೇ ಸ್ಪಷ್ಟವಾಗಿದೆ. ಆದ್ದರಿಂದ ಈ ನಿಟ್ಟಿನಲ್ಲಿ ಅದನ್ನು ಉಪೇಕ್ಷಿಸಿ ಮುಂದೊತ್ತಲು ಪ್ರಯತ್ನಿಸುವುದು ಈ ಅಭಿಪ್ರಾಯದ ನಗ್ನ ಉಲ್ಲಂಘನೆಯಾಗುತ್ತದೆ ಎಂದಿರುವ ಎಡ ಪಕ್ಷಗಳು ಸರಕಾರ ಇಂತಹ ಹಾನಿಕಾರಕ ಕ್ರಮಗಳನ್ನು ಕೈಗೊಳ್ಳದಂತೆ ತಡೆಯಲು ಎಲ್ಲ ಅಗತ್ಯ ಕ್ರಮಗಳನ್ನು ವಹಿಸುತ್ತವೆ ಎಂದೂ ಎಚ್ಚರಿಸಿವೆ. ಕಾಂಗ್ರೆಸ್ ಮುಖಂಡತ್ವ ಬುಶ್ ಆಡಳಿತದ ಬಾಲ ಹಿಡಿಯುವ ನಿರ್ಣಯ ಮಾಡಬಯಸುತ್ತದೋ ಅಥವಾ ಸಂಸತ್ತು ಮತ್ತು ಜನರ ದನಿಗಳಿಗೆ ಕಿವಿಗೊಟ್ಟು ಪ್ರಜಾಸತ್ತಾತ್ಮಕವಾಗಿ ವರ್ತಿಸುತ್ತದೋ ಎಂಬುದನ್ನು ನಿರ್ಧರಿಸಬೇಕಾಗಿದೆ. ಎಡ ಪಕ್ಷಗಳು ಈ ಬಗ್ಗೆ ಒಂದು ತ್ವರಿತ ಮತ್ತು ಸ್ಪಷ್ಟ ಉತ್ತರ ಬೇಕು ಎಂದಿವೆ. ಈ ಸರಕಾರದ ಭವಿಷ್ಯ ಅವರು ಕೈಗೊಳ್ಳುವ ನಿರ್ಧಾರವನ್ನು ಅವಲಂಬಿಸಿದೆ ಎಂದೂ ಎಡ ಪಕ್ಷಗಳು ಹೇಳಿವೆ.

# ಬೆಂಗಳೂರು ವಿಮಾನ ನಿಲ್ದಾಣ ಮುಚ್ಚುವ ಹುನ್ನಾರ

ಸದ್ಯ ಕಾರ್ಯ ನಿರ್ವಹಿಸುತ್ತಿರುವ ಬೆಂಗಳೂರು ಹಾಗೂ ಹೈದ್ರಾಬಾದ್ ಏರ್‌ಪೋರ್ಟ್‌ಗಳನ್ನು ಮುಚ್ಚಬಾರದೆಂದು ಸಂಸತ್ತಿನ ವಿಮಾನಯಾನ ಕುರಿತಾದ ಸ್ಥಾಯಿಸಮಿತಿಯು ಕೇಂದ್ರ ಸರ್ಕಾರವನ್ನು ಸರ್ವಾನುಮತದಿಂದ ಆಗ್ರಹಿಸಿದೆ. ಈ ವಿಚಾರಕ್ಕೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರ ಖಾಸಗಿ ಸಂಸ್ಥೆಗಳ ಜೊತೆ ಮರುಮಾತುಕತೆ ನಡೆಸಬೇಕೆಂದು ಸ್ಥಾಯಿ ಸಮಿತಿ ಅಧ್ಯಕ್ಷರಾದ ಸೀತಾರಾಂ ಯೆಚೂರಿ ನೇತೃತ್ವದ ಸಮಿತಿ ಸಂಸತ್ತಿಗೆ ತನ್ನ ವರದಿಯನ್ನು ಸಲ್ಲಿಸಿ ಆಗ್ರಹ ಪಡಿಸಿದೆ. ಸಮಿತಿಯು ಸರ್ವಾನುಮತದಿಂದ ಕೈಗೊಂಡಿರುವ ಈ ನಿರ್ಧಾರದ ಹಿಂದಿರುವ ರಾಷ್ಟ್ರೀಯತೆಯ ಅಂಶವನ್ನು ಸರ್ಕಾರ ಗಮನಿಸಬೇಕೆಂದು ಅದು ಹೇಳಿದೆ.




ಹೈದ್ರಾಬಾದ್, ಬೆಂಗಳೂರು ವಿಮಾನ ನಿಲ್ದಾಣಗಳನ್ನು ಆ ದಿನಗಳಲ್ಲಿ ಅಭಿವೃದ್ಧಿಪಡಿಸುವಾಗ ಶೇ.6ರಷ್ಟು ಸಾರಿಗೆ ದಟ್ಟಣೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ನಿರ್ಮಿಸಲಾಗಿತ್ತು. ಆದರೆ ವಿಮಾನಯಾನ ಕ್ಷೇತ್ರದ ಬೆಳವಣಿಗೆಯು ಇದೀಗ ವರ್ಷದ ಶೇ.20ರಷ್ಟು ಹಂತ ತಲುಪಿದೆ. ಇದೇ ಪರಿಸ್ಥಿತಿ ಮುಂದುವರೆದಿದ್ದಾದರೆ ಮುಂದಿನ ಒಂದೆರಡೇ ವರ್ಷಗಳಲ್ಲಿ ಈಗ ಅಭಿವೃದ್ಧಿಪಡಿಸುವ ಹಸುರಿನ ವಲಯದ ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಸುಮಾರು 7 ಮಿಲಿಯನ್ ಪ್ರಯಾಣಿಕರನ್ನು ಸಾಗಣಿಸುವ ಹೊರೆಯನ್ನು ಹೊರಬೇಕಾಗುತ್ತದೆ. ಇದನ್ನು ಸರಿದೂಗಿಸಲು ಆ ಪ್ರಮಾಣದ ಪ್ರಯಾಣಿಕರಿಗೆ ಸೌಲಭ್ಯ ಒದಗಿಸಲು ಮತ್ತೆ ಪರ್ಯಾಯಗಳತ್ತ ಮುಖ ಮಾಡಬೇಕಾಗುತ್ತದೆ. ಹಾಗಾಗಿ ಮುಂಬರುವ ದಿನಗಳಲ್ಲಿ ಎದುರಾಗುವ ಆ ಸವಾಲುಗಳನ್ನು ನಿಭಾಯಿಸಲು ಸರ್ಕಾರ ಸದ್ಯ ಬಳಕೆಯಲ್ಲಿರುವ ವಿಮಾನ ನಿಲ್ದಾಣಗಳನ್ನು ಬಳಸಲು ಕ್ರಮ ಕೈಗೊಳ್ಳಬೇಕು. ಆ ಮೂಲಕ ಸರ್ಕಾರ ಸಾರ್ವಜನಿಕ ಹಿತದೃಷ್ಟಿಯಿಂದ ತನ್ನ ಹೊಣೆಗಾರಿಕೆ ಪ್ರದರ್ಶಿಸಬೇಕೆಂದು ಸಮಿತಿ ಸರ್ಕಾರಕ್ಕೆ ಸಲ್ಲಿಸಲಾದ ವರದಿಯಲ್ಲಿ ಹೇಳಿವೆ.

ಹೊಸ ಅಂತರಾಷ್ಟ್ರೀಯ ವಿಮಾನ ನಿಲ್ದಾಣಗಳ ಆರಂಭದೊಂದಿಗೆ ಸದ್ಯ ಇರುವ ವಿಮಾನ ನಿಲ್ದಾಣಗಳು ತಮ್ಮ ಕೆಲಸವನ್ನು ಸ್ಥಗಿತಗೊಳಿಸಲಿದೆ. ಸಾರ್ವಜನಿಕ ಹಣದಿಂದ ನಿರ್ಮಿಸಲ್ಪಟ್ಟಿರುವ ಈ ವಿಮಾನ ನಿಲ್ದಾಣಗಳನ್ನು ಸರ್ಕಾರ ಮುಚ್ಚಹೊರಟಿರುವ ಕೃತ್ಯದ ಬಗ್ಗೆ ಸ್ಥಾಯಿ ಸಮಿತಿ ತೀವ್ರ ಆಕ್ಷೇಪ ವ್ಯಕ್ತಪಡಿಸಿದೆ. ಕಳೆದ ಮೂರು ದಶಕಗಳಿಂದ ದೇಶಕ್ಕೆ ಸೇವೆ ಸಲ್ಲಿಸಿದ ಈ ವಿಮಾನ ನಿಲ್ದಾಣಗಳನ್ನು ಇದೀಗ ಖಾಸಗಿ ಸಂಸ್ಥೆಗಳಿಗೆ ಲಾಭ ಮಾಡಿಕೊಡಲು ಮುಂದಾಗಿರುವ ಬಗ್ಗೆಯೂ ತನ್ನ ವಿರೋಧ ವ್ಯಕ್ತಪಡಿಸಿದೆ. ಸರ್ಕಾರ ವಿಮಾನಯಾನ ನಿರ್ಮಾಣ ಕ್ಷೇತ್ರದಲ್ಲಿ ಖಾಸಗಿ ಭಾಗಿತ್ವವನ್ನು ಉದ್ದೇಶಪೂರ್ವಕವಾಗಿ ಜಾರಿ ತರುತ್ತಿರುವುದು ಇದರಿಂದ ಸ್ಥಗಿತಗೊಳ್ಳುವಂತೆ ಮಾಡಿದೆ ಎಂಬುದನ್ನು ಸ್ಥಾಯಿಸಮಿತಿ ಗುರ್ತಿಸಿದೆ. ಮಾತ್ರವಲ್ಲ ಖಾಸಗಿ ಸಂಸ್ಥೆಗಳನ್ನು ಪ್ರತಿಯೊಬ್ಬ ಪ್ರಯಾಣಿಕನಿಂದ ರೂ.700 ಅಭಿವೃದ್ಧಿ ಶುಲ್ಕ ಸಂಗ್ರಹಕ್ಕೆ ಅವಕಾಶ ನೀಡಿರುವುದನ್ನು ಸ್ಥಾಯಿ ಸಮಿತಿ ತೀವ್ರವಾಗಿ ಟೀಕಿಸಿದೆ. ವಿಮಾನ ಪ್ರಯಾಣಿಕರಿಂದ ಈ ರೀತಿ ಸಂಗ್ರಹಿಸಿ ಖಾಸಗಿ ಡೆವಲಪರ್ಸ್ ಗಳಿಗೆ ಲಾಭ ಮಾಡಿಕೊಟ್ಟ ವಿಮಾನಯಾನ ಪ್ರಾಧಿಕಾರದ ಕ್ರಮವನ್ನು ಪುನರ್ ಪರಿಶೀಲಿಸಬೇಕೆಂದು ಸೀತಾರಾಂ ಯೆಚೂರಿ ಒತ್ತಾಯಿಸಿದ್ದಾರೆ. ನಗರಗಳ ಹೃದಯ ಭಾಗಗಳಲ್ಲಿರುವ ಸದ್ಯದ ವಿಮಾನ ನಿಲ್ದಾಣಗಳನ್ನು ಹೊರಗಡೆ ಸ್ಥಳಾಂತರಿಸುವುದರಿಂದ ಪ್ರಯಾಣಿಕರಿಗೆ ಲಾಭಕ್ಕಿಂತ ಹೊರೆಯೇ ಜಾಸ್ತಿ. ಹೆಚ್ಚಿನ ಹಣ, ಸಮಯ ಕೂಡ ಜಾಸ್ತಿ. ಉದಾ: ಬೆಂಗಳೂರು, ಹೈದ್ರಾಬಾದ್ ನಡುವಣ ಪ್ರಯಾಣದ ಸಮಯ ವಿಮಾನದಲ್ಲಿ ಕೇವಲ 30 ನಿಮಿಷ. ಆದರೆ ಬೆಂಗಳೂರಿನಲ್ಲಿ ಈಗ ಅಭಿವೃದ್ಧಿಪಡಿಸಿದ ದೇವನಹಳ್ಳಿ. ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ತಲುಪಲು ಎರಡು ಗಂಟೆ ಬೇಕಾಗುತ್ತದೆ. ಹಾಗಾಗಿ ಹೊಸ ನಿಲ್ದಾಣಗಳು ಪ್ರಯಾಣಿಕ ಸ್ನೇಹಿ ಅಲ್ಲವೆಂದು ಸ್ಥಾಯಿ ಸಮಿತಿ ಅಭಿಪ್ರಾಯ ವ್ಯಕ್ತಪಡಿಸಿದೆ.

ಸದ್ಯ ಕಾರ್ಯನಿರ್ವಹಿಸುತ್ತಿರುವ ಈ ಎರಡೂ ವಿಮಾನ ನಿಲ್ದಾಣಗಳನ್ನು ಮುಚ್ಚುವುದರಿಂದ ಅಲ್ಲಿನ ನೌಕರರ ಮೇಲಾಗುವ ಪರಿಣಾಮಗಳ ಬಗ್ಗೆ ಸಮಿತಿ ತನ್ನ ಅಧ್ಯಯನದಲ್ಲಿ ಗುರ್ತಿಸಿದೆ. ಈ ಹಿಂದೆ ದೆಹಲಿ ಮತ್ತು ಮುಂಬೈ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣಗಳು ಆರಂಭಗೊಂಡಾಗ ಅಲ್ಲಿ ಆ ಸಂದರ್ಭದಲ್ಲಿ ಕೆಲಸ ಮಾಡುತ್ತಿದ್ದ ನೌಕರರನ್ನು ನೂತನ ಅಂತರರಾಷ್ಟ್ರೀಯ ನಿಲ್ದಾಣಗಳಲ್ಲೂ ಕೆಲಸಕ್ಕೆ ತೆಗೆದುಕೊಳ್ಳುವ ಬಗ್ಗೆ ಅವಕಾಶ ನೀಡಲಾಗಿತ್ತು. ಆದರೆ ಅಂತಹ ಅವಕಾಶಗಳನ್ನು ಈಗ ನೀಡಲಾಗಿಲ್ಲ. ಹಾಗಾಗಿ ಬೆಂಗಳೂರು, ಹೈದ್ರಾಬಾದ್ ನಿಲ್ದಾಣಗಳಲ್ಲಿಯೂ ಸದ್ಯ 600 ನೌಕರರ ಪರಿಸ್ಥಿತಿ ಬಗ್ಗೆ ಸರ್ಕಾರ ಮುಚ್ಚುವ ಮುನ್ನ ಚಿಂತಿಸಬೇಕು ಎಂದು ಸಮಿತಿ ಆಗ್ರಹಪಡಿಸಿದೆ. ಹೈದ್ರಾಬಾದ್ ಅಂತರಾಷ್ಟ್ರೀಯ ವಿಮಾನನಿಲ್ದಾಣ ಮಾರ್ಚ್

ಪುಟ 10ಕ್ಕೆ

ಹಣಾಹಣಿ ರಾಜಕೀಯಕ್ಕೆ ಹೆಸರಾದ ಹಾಸನದಲ್ಲಿ ನಡೆದಿರುವ ಬಗೆಬಗೆಯ ಅಕ್ರಮ ದಂಧೆಗಳಾದರೂ ಏನು?

# ಹಾಸನ : ಅಕ್ರಮ ದಂಧೆಗಳ ತಾಣ

## ನೂತನ ಎಸ್.ಪಿ.ಯ ಮುಂದೆ ನೂರಾರು ಸವಾಲುಗಳು

ಎಸ್.ಹೆಚ್. ಗುಲ್ವಾಡಿ

ಇತ್ತೀಚಿನ 3ರಿಂದ 4 ವರ್ಷಗಳಲ್ಲಿ ಕೊಲೆ, ಸುಲಿಗೆ, ದರೋಡೆ ಸೇರಿದಂತೆ ಖಾಸಗಿ ಚಾನಲ್‌ನ ಕ್ರೈ ಡೈರಿ, ಕ್ರೈಂ ಸ್ಟೋರಿ ಇತರೆ ಕ್ರೈಂ ವಿಭಾಗಗಳಲ್ಲಿ ವಾರಕ್ಕೊಮ್ಮೆ ಒಂದು ಪ್ರಕರಣದಲ್ಲಾದರೂ ಸುದ್ದಿಯಲ್ಲಿರುವ ಬೆಂಗಳೂರು ನಂತರದ ಸ್ಥಾನ ಪಡೆದಿರುವ ಜಿಲ್ಲೆ ಹಾಸನ.

ದ್ವೇಷದ ರಾಜಕಾರಣದಿಂದಾಗುವ ಪ್ರಕರಣಗಳು ಜಿಲ್ಲೆಯ ಹೆಸರಿಗೆ ಕಪ್ಪು ಚುಕ್ಕೆ ಇಟ್ಟರೆ, ನಿರಾತಂಕವಾಗಿ ನಡೆಯುತ್ತಿರುವ ಬಡ್ಡಿ ದಂಧೆ ಮತ್ತು ಮಟ್ಕಾ ದಂಧೆ ಬಡ ಜನರ ರಕ್ತ ಹೀರುತ್ತಿದೆ. ಮಾಧ್ಯಮಗಳ ಮೂಲಕ ಹಲವಾರು ಪ್ರಕರಣಗಳು ಬೆಳಕಿಗೆ ಬಂದರೂ ಸರಿಯಾದ ತನಿಖೆ ನಡೆಯದೇ ಪೊಲೀಸ್ ಫೈಲ್‌ನಲ್ಲಿಯೇ ಕೊಳೆಯುತ್ತಿವೆ. ರಾಜಕೀಯ ಒತ್ತಡದ ಕಾರಣಗಳು ಏನೇ ಇದ್ದರೂ ಅದನ್ನು ಮೆಟ್ಟಿ ನಿಲ್ಲುವ ಧೈರ್ಯ ತೋರುವ ಅಧಿಕಾರಿಗಳ ಕೊರತೆ ಎದ್ದು ಕಾಣುತ್ತಿದೆ.

### ಎದ್ದು ಕಾಣುವ ವೈಫಲ್ಯ

ಬಾರಿ ರಾಜಕೀಯ ಪ್ರಭಾವ ಹೊಂದಿದ ಹಾಸನ ಜಿಲ್ಲೆಗೆ ಪೊಲೀಸ್ ಮುಖ್ಯಾಧಿಕಾರಿಯಾಗಲು ಹಲವರು ಹಿಂದೇಟು ಹಾಕುತ್ತಿರುವ ಈ ಸಂದರ್ಭದಲ್ಲಿ ನೂತನ ಎಸ್.ಪಿ.ಯಾಗಿ ಶರತ್ ಚಂದ್ರರವರು ಅಧಿಕಾರ ವಹಿಸಿಕೊಂಡಿದ್ದು, ಜಿಲ್ಲೆಯ ಹಲವಾರು ಸವಾಲುಗಳನ್ನು . ಎದುರಿಸಿ ಕೆಲಸ ಮಾಡುವುದರೊಂದಿಗೆ ಜಡ್ಡುಗಟ್ಟಿದ ಪೊಲೀಸ್ ವ್ಯವಸ್ಥೆಗೆ ಕಾಯಕಲ್ಪ ನೀಡಬೇಕಾಗಿದೆ.

ಕಳೆದ ಕೆಲವು ವರ್ಷಗಳಿಂದ ನಡೆಯುತ್ತಿದ್ದ ವರ್ಷಕ್ಕೊಂದು ನಗರಸಭಾ ಸದಸ್ಯನ ಹತ್ಯೆಗಳು ಸೇರಿದಂತೆ ಇತ್ತೀಚೆಗಿನ ನಲ್ಲೂರು, ಬಳದೆರೆ ಗ್ರಾಮದ ದಲಿತರ ಸಾಮಾಜಿಕ ಬಹಿಷ್ಕಾರ ಪ್ರಕರಣದವರೆಗೂ ಪೊಲೀಸ್ ವೈಫಲ್ಯ ಎದ್ದುಕಾಣುತ್ತಿದ್ದ ಬಗ್ಗೆ ಮಾಧ್ಯಮಗಳಲ್ಲಿ ವರದಿಯಾಗಿರುವುದು ಬಹಿರಂಗ ಸತ್ಯ.

### ಬರೀ ರಾಜಿ ಕಬೂಲಿ

ಇನ್ನು ಪೊಲಿಸ್ ಠಾಣೆ ಮೆಟ್ಟಿಲೇರಿದ ಅದೆಷ್ಟೋ ಪ್ರಕರಣಗಳು ರಾಜಿಯಲ್ಲೆ ಕೊನೆಗೊಂಡಿರುವುದರಿಂದ ಜನರಿಗೆ ಪೊಲೀಸ್ ವ್ಯವಸ್ಥೆ ಬಗ್ಗೆ ವಿಶ್ವಾಸ ಕಡಿಮೆ ಆಗಿರುವುದು ಸುಳ್ಳಲ್ಲ. ಅದರಲ್ಲೂ ಮುಖ್ಯವಾಗಿ ಇಂತಹ ರಾಜಿ ಪ್ರಕರಣಗಳಲ್ಲಿ ಪೊಲೀಸರೇ 'ಮಧ್ಯಸ್ತಿಕೆ' ವಹಿಸಿ ಅಪರಾಧಿಗಳು ರಾಜಾರೋಷವಾಗಿ ತಿರುಗಾಡುವಲ್ಲಿ ಪ್ರಮುಖ ಪಾತ್ರ ವಹಿಸುತ್ತಿರುವುದರಿಂದ ಕೆಲವೊಂದು ಪ್ರಕರಣಗಳು ಠಾಣೆ ಮೆಟ್ಟಿಲೇರುವುದೂ ಇಲ್ಲ. ರಾಜಿ ಸೂತ್ರದ ಮಂತ್ರ ಪಠಿಸುವ ಇಲ್ಲಿನ ರಾಜಕೀಯ ಮುಖಂಡರು ಮತ್ತು ಅಧಿಕಾರಿ ವರ್ಗದವರಿಂದಾಗಿ ಕೊಲೆ ಆರೋಪ ಹೊತ್ತ ವ್ಯಕ್ತಿಗಳೂ ಸಾರ್ವಜನಿಕವಾಗಿ ಧೈರ್ಯದಿಂದ ತಿರುಗಾಡುತ್ತಿರು ವುದಲ್ಲದೆ, ಇತರೆ ಪುಂಡರಿಗೆ ಮಾರ್ಗದರ್ಶಕರಾಗಲು ಕಾರಣವಾಗಿದೆ. ರಾಜಿ ಏನೋ ಪ್ರಕರಣದ ಸುಖಾಂತ್ಯ ಎಂದೆನಿಸಿದರೂ ಆರೋಪಿಗೆ ಶಿಕ್ಷೆಯಾಗದೇ ಇದ್ದಲ್ಲಿ ಪೊಲೀಸ್ ವ್ಯವಸ್ಥೆ ಏಕೆ ಬೇಕು ಎನ್ನುವ ಪ್ರಶ್ನೆ ಸಾರ್ವಜನಿಕರಲ್ಲಿ ಮೂಡದೇ ಇರುವುದಿಲ್ಲ.

### ಮಟ್ಕಾ, ಬಡ್ಡಿ ದಂಧೆ ಮತ್ತು ಒಳ ಒಪ್ಪಂದ

ಎರಡು ವರ್ಷಗಳ ಹಿಂದೆ ನಡೆದ ನಗರಸಭಾ ಸದಸ್ಯರ ಕೊಲೆ ಅದಕ್ಕೆ ಪ್ರತಿಕಾರ ಎಂಬಂತೆ ನಡೆದ ಸುಮಾರು 89 ಮನೆಗಳಿಗೆ ಬೆಂಕಿ ಇಟ್ಟ ಪ್ರಕರಣವೂ ಸೇರಿದಂತೆ, ಕಳೆದ ವರ್ಷ ನಡೆದ ನಗರಸಭಾ ಸದಸ್ಯರ ಕೊಲೆಗೆ ಪ್ರತಿ ಕೊಲೆ ನಡೆದಾಗಲೂ ರಾಜಿಗೆ ಯತ್ನಿಸಿದ್ದು ಇಲ್ಲಿನ ವ್ಯವಸ್ಥೆಗೆ ಹಿಡಿದ ಕನ್ನಡಿಯಾಗಿದೆ. ಅಲ್ಲದೆ ಜಿಲ್ಲೆಯಲ್ಲಿ ಹಲವಾರು ದಂಧೆಗಳು ರಾಜಾರೋಷವಾಗಿ ನಡೆಯುತ್ತಿದ್ದು ಇದರಲ್ಲಿ ಮುಖ್ಯವಾಗಿ ಮಟ್ಕಾ ಮತ್ತು ಬಡ್ಡಿ ದಂಧೆ ಇಡೀ ಹಾಸನ ನಗರವನ್ನು ವ್ಯಾಪಿಸಿಕೊಂಡಿದೆ. ಕೆಲವೊಂದು ರಾಜಕೀಯ ನಾಯಕರ ಚೆಲಾಗಳೇ ಇಂತಹ ದಂಧೆಯನ್ನು ನಡೆಸುತ್ತಿರುವ ಬಗ್ಗೆ ಇಲಾಖೆಗೆ ಮಾಹಿತಿ ಇರುವುದರಿಂದ ದಂಧೆಯನ್ನು ಮಟ್ಟ ಹಾಕಲು ಸಾಧ್ಯವಾಗಿಲ್ಲ ಎಂದು ಮೇಲ್ನೋಟಕ್ಕೆ ಕಾಣಿಸಿದರೂ ಪೊಲೀಸರ ಒಳಒಪ್ಪಂದ ಇದಕ್ಕೆ ಪ್ರಮುಖ ಕಾರಣವಾಗಿದೆ. ಈ ಹಿಂದಿನ ಉಪಮುಖ್ಯಮಂತ್ರಿ ಯಡಿಯೂರಪ್ಪನವರು ಸರಕಾರ ನಡೆಸುತ್ತಿದ್ದ ಲಾಟರಿಯನ್ನು ನಿಷೇಧಿಸಿ ಆದೇಶ ಹೊರಡಿಸಿದರೇ ವಿನಃ ಅದಕ್ಕೆ ಪೂರಕವಾಗಿ ನಡೆಯುತ್ತಿರುವ ಮಟ್ಕಾವನ್ನು ನಿಯಂತ್ರಿಸುವ ಬಗ್ಗೆ ಕನಿಷ್ಟ ಯೋಚನೆ ಮಾಡದೇ ಇರುವುದರಿಂದ ಲಾಟರಿಯಲ್ಲಿ ಹಣ ತೊಡಗಿಸುತ್ತಿದ್ದ ವ್ಯಕ್ತಿ ಮಟ್ಕಾದಲ್ಲಿ ಹಣ ತೊಡಗಿಸಲು ಪರೋಕ್ಷವಾಗಿ ಕಾರಣರಾದರಲ್ಲದೆ ಮಟ್ಕಾ ದಂಧೆ ಎಗ್ಗಿಲ್ಲದೆ ಅವ್ಯಾಹತವಾಗಿ ವಿಸ್ತಾರವಾಗಲು ಕಾರಣವಾಯಿತು.




### ಟ್ಯೂಷನ್ ಎಂಬ ದಂಧೆ

ಇನ್ನು ನಗರದಲ್ಲಿ ಕಾಣಸಿಗುವ ಟ್ಯೂಷನ್ ಕೇಂದ್ರಗಳಿಂದಾಗಿ ಇಂದಿನ ವಿದ್ಯಾರ್ಥಿಗಳು ಶಾಲಾ, ಕಾಲೇಜಿನ ತರಗತಿಯ ಹಾಜರಾತಿಗಿಂತ ಟ್ಯೂಷನ್ ಅತೀ ಮುಖ್ಯ ಎನ್ನುವ ಪರಿಕಲ್ಪನೆಗೆ ಒಳಗಾಗಿದ್ದಾರೆ. ಅನುದಾನಿತ ಕಾಲೇಜಿನ ಉಪನ್ಯಾಸಕರು ಮನೆಪಾಠ ನಡೆಯುತ್ತಿರುವುದರಿಂದ ಟ್ಯೂಷನ್ ಕೇವಲ ಒಂದು ದಂಧೆಯಾಗಿ ಉಳಿದಿಲ್ಲ, ಇಲ್ಲಿ ನಡೆಯುವ ಲಕ್ಷಾಂತರ ರೂಪಾಯಿ ವ್ಯವಹಾರದಿಂದಾಗಿ ಟ್ಯೂಷನ್ ಮಾಡುತ್ತಿರುವ ಉಪನ್ಯಾಸಕರು ಹಣದಾಸೆಯಿಂದ ಸ್ವತಹ ಟ್ಯೂಷನ್ ಕೇಂದ್ರ ತೆರೆದು ಪೈಪೋಟಿಗೂ ಕಾರಣರಾಗಿದ್ದಾರೆ. ಈಗಾಗಲೇ ಹಲವಾರು ಟ್ಯೂಷನ್ ಕೇಂದ್ರಗಳಲ್ಲಿ ಕೆಲಸ ಮಾಡುತ್ತಿದ್ದ ಉಪನ್ಯಾಸಕರು ಹೊರಬಂದು ಬೀದಿಗೊಂದು, ಬಡಾವಣೆಗೊಂದು ಟ್ಯೂಷನ್ ಕೇಂದ್ರ ತಲೆ ಎತ್ತಲು ಕಾರಣವಾಗಿದ್ದಲ್ಲದೆ ಮುಂದೊಂದು ದಿನ ಪೈಪೋಟಿಯ ಮೇಲೆ ಜಗಳ ನಡೆಯುವ ಸಾಧ್ಯತೆಗಳನ್ನು ಅಲ್ಲಗಳೆಯುವಂತಿಲ್ಲ. 5 ವರ್ಷಗಳ ಹಿಂದೆ ವಿದ್ಯಾರ್ಥಿ ಯುವಜನ ಸಂಘಟನೆಗಳ ಹೋರಾಟದ ಫಲವಾಗಿ ಆಗಿನ ಜಿಲ್ಲಾಧಿಕಾರಿ ಎಲ್.ಕೆ.ಅತೀಕ್‌ರವರು ಅನುದಾನಿನ ಕಾಲೇಜಿನ ಉಪನ್ಯಾಸಕರು ನಡೆಸುವ ಮನೆ ಪಾಠಕ್ಕೆ ಕಡಿವಾಣ ಹಾಕಿದ್ದರು. ಆದರೆ ನಂತರ ಬಂದ ಯಾವುದೇ ಅಧಿಕಾರಿಗಳು ಈ ಬಗ್ಗೆ ಕ್ರಮ ಕೈಗೊಳ್ಳದೆ ಟ್ಯೂಷನ್ ಪಿಡುಗು ಬೃಹದಾಕಾರವಾಗಿ ಬೆಳೆಯುತ್ತಿದೆ.

ಈ ಜಿಲ್ಲೆಗೆ ಅಂಟಿಕೊಂಡ ಮತ್ತೊಂದು ಶಾಪ ಎಂದರೆ ಬಡ್ಡಿ ವ್ಯವಹಾರ. ಬಡ್ಡಿ ದಂಧೆಯ ವಿಷ ವರ್ತುಲದಲ್ಲಿ ಸಿಲುಕಿ ಆಚೆ ಬರಲಾಗದೆ ಹಲವಾರು ಜನರು ಆತ್ಮಹತ್ಯೆ ಮಾಡಿಕೊಂಡ ನಂತರವೂ ಪೊಲೀಸರು ಎಚ್ಚೆತ್ತುಕೊಳ್ಳದೆ ಇರುವುದು ದುರಂತದ ಸಂಗತಿ. ವಿಪರೀತ ಬಡ್ಡಿ ತೆಗೆದುಕೊಂಡು ವ್ಯವಹಾರ ಮಾಡುತ್ತಿರುವವರ ಬಗ್ಗೆ ಮಾಹಿತಿಯಿದ್ದು ಪೊಲೀಸರು ನಿಯಂತ್ರಿಸಲು ಮುಂದಾಗದೆ ಇದ್ದುದರಿಂದ ಕಳೆದ ವರ್ಷ ಒಂದೇ ಮನೆಯ ಏಳು ಜನರು ಜೀವ ತೆರಬೇಕಾಯಿತು. ಬಡ್ಡಿ ತೆರಲು ಸಾಧ್ಯವಾಗದೆ ಆತ್ಮಹತ್ಯೆ ಮಾಡಿಕೊಳ್ಳುವವರು ಒಂದು ಕಡೆಯಾದರೆ, ಸರಿಯಾಗಿ ಮರುಪಾವತಿ ಮಾಡದೆ ಬಡ್ಡಿ ವ್ಯವಹಾರಸ್ಥರ ಬಾಡಿಗೆ ಗೂಂಡಾಗಳಿಂದ ಹಲ್ಲೆಗೊಳಗಾದವರು, ಕೊಲೆಯಾದವರು ಅದೆಷ್ಟೋ ಮಂದಿ ಇದ್ದಾರೆ. ಇಲಾಖೆಯಲ್ಲಿರುವ ಕೆಲವು ಸಿಬ್ಬಂದಿಗಳೂ ಈ ವ್ಯವಹಾರ ನಡೆಸುತ್ತಿರುವದರಿಂದ ಈ ವ್ಯವಹಾರ ನಿಲ್ಲುವ ಸೂಚನೆ ಕಾಣುತ್ತಿಲ್ಲ.

### ಮರಗಳ್ಳತನ ಅವ್ಯಾಹತ

ಜಿಲ್ಲೆಯ ಸಕಲೇಶಪುರ ತಾಲ್ಲೂಕಿನ ಪಶ್ಚಿಮಘಟ್ಟ ಕಾಡುಗಳಲ್ಲಿ ನಕಲಿ ಖಾತೆಗಳನ್ನು ಬಳಸಿ ಸರ್ಕಾರಿ ಜಾಗದಲ್ಲಿರುವ ಕಾಡುಗಳನ್ನು ಕಡಿಯಲಾಗುತ್ತಿದ್ದು ಈ ಅವ್ಯಾಹತ ಮರಗಳ್ಳತನದಿಂದಾಗಿ ಸರ್ಕಾರದ ಬೊಕ್ಕಸಕ್ಕೆ ಭಾರಿ ಪ್ರಮಾಣದಲ್ಲಿ ನಷ್ಟ ಸಂಭವಿಸುತ್ತಿದೆ. ಇತ್ತೀಚಿನ ಎರಡು ವರ್ಷಗಳಿಂದ ಅರಣ್ಯ ಲೂಟಿ

ಪುಟ 12 ಕ್ಕೆ

## ರೇಷನ್ ಡಿಪೋಗೆ ಬಾರದ ಅಕ್ಕಿ ಚೀಲಗಳು

ಇಡೀ ರಾಜ್ಯದಲ್ಲೇ ಅತೀ ಹೆಚ್ಚು ಬಾರಿ ಅಕ್ಕಿ ಹಗರಣ ನಡೆದಿರುವುದು ಹಾಸನ ಜಿಲ್ಲೆಯಲ್ಲಿ. ಆಹಾರ ಸರಬರಾಜು ಇಲಾಖೆಯ ಗೋದಾಮಿನಲ್ಲಿ ಇಳಿಯಬೇಕಾದ ಅಕ್ಕಿ ಚೀಲಗಳು ನೇರವಾಗಿ ಖಾಸಗಿ ಮಾಲಿಕತ್ವದ ರೈಸ್‌ಮಿಲ್‌ನಲ್ಲಿ ಇಳಿದಿರುವುದನ್ನು ಇಲ್ಲಿನ ಪತ್ರಿಕೆಗಳು ಹಲವಾರು ಬಾರಿ ಚಿತ್ರಸಮೇತ ಪ್ರಕಟಿಸಿದ್ದವು. ಆದರೂ ಪದೇ ಪದೇ ಇಂತಹ ಪ್ರಕರಣ ನಡೆಯುತ್ತಿರುವುದು ಈ ಜಿಲ್ಲೆಯ ಜನರ ದುರಂತ. ಈ ಹಿಂದೆ ಸುಮಾರು 20 ಅಧಿಕಾರಿಗಳು ಅಕ್ಕಿ ಹಗರಣದ ಒಂದೇ ಪ್ರಕರಣದಲ್ಲಿ ಜೈಲಿಗೆ ಹೋಗಿದ್ದಾರೆಂದರೆ ಹಗರಣದ ತೀವ್ರತೆ ಅಂದಾಜಿಸಬಹುದು. ಇದಲ್ಲದೆ ಈ ಜಿಲ್ಲೆಯಿಂದ ಬೇರೆ ಜಿಲ್ಲೆಗೆ ಅಕ್ಕಿ ಸಾಗಿಸುತ್ತಿರುವಾಗ ಲಾರಿ ಸಮೇತ ಸಿಕ್ಕಿಬಿದ್ದಿರುವ ಹಲವಾರು ಪ್ರಕರಣಗಳು ಬೆಳಕಿಗೆ ಬಂದರೂ ಸಂಬಂಧಪಟ್ಟ ಅಧಿಕಾರಿಗಳು ಏನು ಮಾಡುತ್ತಿದ್ದಾರೆ ಎನ್ನುವುದು ನಿಗೂಡವಾಗಿಯೇ ಉಳಿದಿದೆ.

## ರಾಷ್ಟ್ರೀಯ ಹೆದ್ದಾರಿಯಲ್ಲಿ.....

ಜಿಲ್ಲೆಯಲ್ಲಿ ಹಾದು ಹೋಗುವ ರಾಷ್ಟ್ರೀಯ ಹೆದ್ದಾರಿ ಅಕ್ರಮ ದಂಧೆಗಳಿಗೆ ಹೆಬ್ಬಾಗಿಲಾಗಿ ಕಾರ್ಯಾಚರಿಸುತ್ತದೆ. ಆಯಿಲ್ ದಂಧೆಗೆ ಹೆಸರುವಾಸಿಯಾಗಿರುವ ಈ ಹೆದ್ದಾರಿಯಲ್ಲಿ ಡೀಸೆಲ್, ಪೆಟ್ರೋಲ್‌ನ್ನು ಅಕ್ರಮವಾಗಿ ಟ್ಯಾಂಕರ್‌ನಿಂದ ತೆಗೆದು ವ್ಯವಹಾರ ನಡೆಸುತ್ತಿರುವುದು ಗುಟ್ಟಾಗಿ ಉಳಿದಿಲ್ಲ. ಹಲವಾರು ವರ್ಷಗಳಿಂದ ನಡೆಯುತ್ತಿರುವ ಆಯಿಲ್ ದಂಧೆಯ ಬಗ್ಗೆ ಇಲಾಖೆಗೆ ಮಾಹಿತಿ ಇದ್ದರೂ ಪೆಟ್ರೋಲ್, ಡೀಸೆಲ್ ದಂಧೆಗೆ ಪೂರ್ಣ ವಿರಾಮ ಹೇಳಲು ಇಲ್ಲಿನ ಪೊಲೀಸರಿಗೆ ಸಾಧ್ಯವಾಗದೇ ಇರುವುದು ಸತ್ಯ. ಇದಲ್ಲದೆ ಅಕ್ರಮ ಡಾಂಬಾರು ದಂಧೆ ಅವ್ಯಾಹತವಾಗಿ ನಡೆಯುತ್ತಿದ್ದು ಲೋಕೋಪಯೋಗಿ ಇಲಾಖೆಗೆ ಸೇರಬೇಕಾದ ಡಾಂಬರು ಇಲ್ಲಿನ ಹೆದ್ದಾರಿಯಲ್ಲಿ ಅಕ್ರಮವಾಗಿ ಬಿಕರಿಯಾಗುತ್ತಿದೆ. ಮಾಧ್ಯಮಗಳು ಈ ಕುರಿತು ಪುಟಗಟ್ಟಲೆ ಬರೆದರೂ ಡಾಂಬಾರ್ ದಂಧೆ ಎಂದಿನಂತೆ ಸರಾಗವಾಗಿ ನಡೆಯುತ್ತಿದೆ. ಕಳೆದ ವರ್ಷ ಇಂತಹ ದಂಧೆಗಳ ಪರಿಣಾಮವಾಗಿ ಅಡಗಿಸಿದ್ದ ಗೋದಾಮಿಗೆ ಬೆಂಕಿಬಿದ್ದು ಗೋದಾಮು ಸೇರಿದಂತೆ ಪಕ್ಕದಲ್ಲಿರುವ ನೂತನ ಮನೆಯೂ ಸುಟ್ಟು ಕರಕಲಾದಾಗ ಪೊಲೀಸರು "ನೋಡಿ ಬರುವ" ಕೆಲಸ ಮಾಡಿದರೇ ವಿನಃ ಈ ಬಗ್ಗೆ ಕ್ರಮ ಕೈಗೊಂಡಿಲ್ಲ. ಇತ್ತೀಚೆಗೆ ಇದೇ ಹೆದ್ದಾರಿಯಲ್ಲಿ ಲಕ್ಷಾಂತರ ರೂಪಾಯಿ ಮೌಲ್ಯದ ತಾಳೆ ಎಣ್ಣೆಯನ್ನು ನಿಗೂಢ ಸ್ಥಳದಲ್ಲಿ ಶೇಖರಿಸಿ ಬಳಿಕ ಖಾಲಿ ಟ್ಯಾಂಕರ್‌ನ್ನು ಹತ್ತಿರದ ಕೆರೆಗೆ ತಳ್ಳಿದ ಪ್ರಕರಣವನ್ನು ಸಹ ಅಪಘಾತ ಎಂದು ಬಿಂಬಿಸುವ ಯತ್ನ ತೆರೆಮರೆಯಲ್ಲಿ ನಡೆದಿತ್ತು. ಆದರೆ ಪ್ರಜ್ಞಾವಂತ ನಾಗರೀಕರ ಪ್ರಯತ್ನದಿಂದಾಗಿ ಕೊನೆಗೂ ಅವ್ಯವಹಾರ ಬಯಲಾಗಿತ್ತು.

# ಮಂಡ್ಯವನ್ನು ಕಟ್ಟಿದವರ ಮನೆ ಮಾರು ಭಸ್ಮ

**ಜಿಲ್ಲಾಧಿಕಾರಿಗಳ ಕಛೇರಿಯ ಮುಂದೆ ಅನಿರ್ದಿಷ್ಟಾವಧಿಯ ಹಗಲು ರಾತ್ರಿ ಧರಣ, ಮಾಡಿ ಟಿಕಾಣಿ ಹೂಡಿದಾಗ ಈ ಗುಡಿಸಲು ವಾಸಿಗಳಿಗೆ ಹಕ್ಕುಪತ್ರ ನೀಡಲು ಜಿಲ್ಲಾಡಳಿತ ಒಪ್ಪಿತ್ತು. ಆಯಕಟ್ಟಿನ ಜಾಗದ ಭೂಮಿ ಲಪಟಾಯಿಸುವ ಸಂಚುಕೋರರ ಮಸಲತ್ತಿನಿಂದಾಗಿ ಅದು ವಿಳಂಬವಾಗುತ್ತಾ ಬಂತು. ಇದೀಗ ಗುಡಿಸಲಿಗೆ ಬೆಂಕಿ ಬಿದ್ದಿದೆ. ಅದು ಬರೀ ಆಕಸ್ಮಿಕವೋ, ಭೂಮಿ ನುಂಗುವ ಷಡ್ಯಂತ್ರವೋ ಪತ್ತೆಯಾಗಬೇಕಿದೆ.**

ತಮಿಳು ಕಾಲೋನಿ ಸ್ಲಂ ಮಂಡ್ಯ ನಗರದ ಅತಿದೊಡ್ಡ ಮತ್ತು ಅತ್ಯಂತ ಹಳೆಯ ಸ್ಲಂ. ಸುಮಾರು 2700 ಮತದಾರರು, 4000 ಸಾವಿರದಷ್ಟು ಜನಸಂಖ್ಯೆಯ ಕಿಷ್ಕಿಂದೆಯಲ್ಲಿ 500 ಕ್ಕೂ ಹೆಚ್ಚು ಮನೆಗಳಿವೆ. ಇದರಲ್ಲಿ ಕೇವಲ ನೂರರಷ್ಟು ಮನೆಗಳು ಪಕ್ಕಾ ಮನೆಗಳೆಂದರೆ ಉಳಿದವು ತೆಂಗಿನ ಗರಿಯಿಂದ ನಿರ್ಮಿಸಿಕೊಂಡಿದ್ದ ಗೂಡುಗಳು. ಬೇಸಿಗೆಯ ಬಿಸಿಲಿಗೆ ಒಣಗಿ ನಿಂತಿದ್ದ ತೆಂಗಿನ ಗರಿಯ ಮಾಂಡಿಗೆ ತಗುಲಿದ ಬೆಂಕಿ ಕೇವಲ ಅರ್ಧ ಗಂಟೆಯಲ್ಲಿ 400 ಕ್ಕೂ ಹೆಚ್ಚಿನ ಗುಡಿಸಲುಗಳನ್ನು ಅದರ ಅವಶೇಷವೂ ಸಿಗದಂತೆ ನುಂಗಿ ಹಾಕಿತ್ತು.

ಮಾರ್ಚ್ 3 ರ ಮಧ್ಯಾಹ್ನ ಮೂರು ಗಂಟೆ ಸಮಯದಲ್ಲಿ ಬೆಂಕಿ ಬಿದ್ದ ಬಗೆ ಹೇಗೆಂಬುದರ ಬಗ್ಗೆ ಅನೇಕ ಅಭಿಪ್ರಾಯಗಳು, ಅನುಮಾನಗಳಿವೆ. ಅಡುಗೆ ಮಾಡುತ್ತಿದ್ದಾಗ ಒಂದು ಗುಡಿಸಲಿಗೆ ಬಿದ್ದ ಬೆಂಕಿ ತ್ವರಿತವಾಗಿ ವ್ಯಾಪಿಸಿದ್ದೆ ಅವಘಡಕ್ಕೆ ಕಾರಣ ಎಂದು ಕೆಲವರು ಹೇಳಿದರೆ ನಾವು ಅಡುಗೆಯನ್ನೇ ಮಾಡುತ್ತಿರಲಿಲ್ಲ ಎಂಬುದು ಸಂಬಂಧಿಸಿದ ಮನೆಯವರ ಸ್ಪಷ್ಟ ಮಾತು. ವಿದ್ಯುತ್ ಶಾರ್ಟ್ ಸರ್ಕ್ಯೂಟ್ ಆಗಿ ಬೆಂಕಿ ಹತ್ತಿಕೊಂಡಿತ್ತು ಎಂಬುದು ಕೆಲವರ ನುಡಿ.

ಎಲ್ಲವೂ ಭಸ್ಮ : ಬೆಂಕಿ ಆವರಿಸಿದ ಬಗೆ ಏನೇ ಆದರೂ ಅದು ಅಲ್ಲಿದ್ದ ಬಡವರ ಸರ್ವಸ್ವವನ್ನು ನುಂಗಿ ಹಾಕಿದ್ದು ಸತ್ಯ. ತಮ್ಮ ಮೈ ತುಂಬಿದ್ದ ಬಟ್ಟೆಯನ್ನು ಹೊರತುಪಡಿಸಿ ಬೇರೇನೂ ಉಳಿದಿಲ್ಲ. ಅಡುಗೆ ಮಾಡುವ ಪಾತ್ರೆಯಿಂದ ಹಿಡಿದು ಮಗಳ ಮದುವೆಗೆಂದು ಕೂಡಿಟ್ಟಿದ್ದ ಹಣ, ಒಡವೆ, ತುತ್ತಿಗೆ ಕೂಡಿಟ್ಟಿದ್ದ ಅಕ್ಕಿ, ರಾಗಿ ಹೀಗೆ ಎಲ್ಲವೂ ಸ್ವಾಹ. ಈಗದು ಅಕ್ಷರಶಃ ಸ್ಮಶಾನ.

ಮಂಡ್ಯನಗರದ ಹೃದಯ ಭಾಗದಲ್ಲಿರುವ ಈ ಜಾಗ ಕೋಟ್ಯಾಂತರ ರೂ. ಬೆಲೆ ಬಾಳುವಂತಹದ್ದು, ಇದನ್ನು ಕಬಳಿಸಲು ಭೂ ಮಾಫಿಯಾಗಳ ಸಂಚು ಬಹಳ ದೊಡ್ಡದು. ಸುಮ್ಮನೆ ತೆರವುಗೊಳಿಸಲು ಪ್ರಯತ್ನಿಸಿದರೆ ಸಂಘಟಿತ ಪ್ರತಿರೋಧ ಎದುರಿಸ ಬೇಕಾಗುತ್ತದೆ ಎಂಬ ಭಯ. ಬೆಂಕಿ ಹಚ್ಚಿಸಲು ಪ್ರೇರೇಪಣೆ ನೀಡಿರಲೂಬಹುದು. ಅಂದು ಬೆಂಕಿ ಆರಿಸಲು ಬಂದ ಅಗ್ನಿಶಾಮಕ ವಾಹನಗಳನ್ನು ಒಳಗೆ ಬಿಡದೆ ತಡೆದಿರುವುದು, ಒಂದೂ ಗುಡಿಸಲು ಉಳಿಯದಂತೆ ಸುಟ್ಟು ಹೋಗಿರುವುದು, ಹೀಗೆ ಅನುಮಾನಗಳ ಹುತ್ತ ಬೆಳೆಯುತ್ತದೆ. ಸಿಪಿಐ(ಎಂ) ಪಕ್ಷ ಈಗಾಗಲೇ ಆಗ್ರಹಿಸಿರುವಂತೆ ಸಮಗ್ರ ತನಿಖೆ ಮಾತ್ರ ಇದನ್ನು ಹೊರಗೆಡುವಬಹುದು.

ನೀರು, ಶೌಚಾಲಯ, ಹಕ್ಕುಪತ್ರ.... ಮರೀಚಿಕೆ : ಈಗಿರುವ ಆಧುನಿಕ ಮಂಡ್ಯವನ್ನು ನಿರ್ಮಾಣ ಮಾಡಿದವರೇ ತಮಿಳು ಸ್ಲಂನ ನಿವಾಸಿಗಳು, ಸುಮಾರು ಒಂದು ಶತಮಾನಕ್ಕೂ ಹೆಚ್ಚು ಇತಿಹಾಸವಿರುವ ಈ ಸ್ಲಂಗೆ ಬಂದ ನಿವಾಸಿಗಳು ಮಂಡ್ಯದ ಜಿಲ್ಲಾಧಿಕಾರಿಗಳ ಕಛೇರಿಯನ್ನು ನಿರ್ಮಾಣ ಮಾಡಲು, ಮೈ ಷುಗರ್ಸ್ ಕಟ್ಟಲು ತಮಿಳುನಾಡಿನಿಂದ ಬಂದವರು. ಈಗ ಅವರ ಸಂಬಂಧಿಕರು, ಇತರರು ಸೇರಿ ಅವರ ಸಂಖ್ಯೆ 4000 ಮುಟ್ಟಿದೆ.

ಒಂದು ಶತಮಾನದ ಇತಿಹಾಸವಿರುವ ಈ ಸ್ಲಂ ನಿವಾಸಿಗಳಿಗೆ ನಾಗರೀಕ ಸಂಘದ ಯಾವ ಸವಲತ್ತುಗಳೂ ಸಿಕ್ಕಿಲ್ಲ. ರಸ್ತೆ, ಚರಂಡಿ, ಶೌಚಾಲಯ, ಕುಡಿಯುವ ನೀರು ಹೀಗೆ ಎಲ್ಲವೂ ಮರೀಚಿಕೆ. ಕನಿಷ್ಠ ಅವರಿರುವ ಜಾಗ ಅವರದೇ ಎನ್ನುವ ಹಕ್ಕು ಪತ್ರವೂ ಆ ನತದೃಷ್ಟರಿಗೆ ಸಿಕ್ಕಿಲ್ಲ. ಮೇಲಿನೆಲ್ಲವೂ ಅವರ ದುರಂತ ಬದುಕಿನ ಚಿತ್ರಗಳು.

ಈ ಜನತೆಯನ್ನು ವಿಭಾಗಿಸಿ ಗುಂಪು ಕಟ್ಟಿ ಎಲ್ಲಾ ರಾಜಕೀಯ ಪಕ್ಷಗಳು ಮತ ಪಡೆದವೇ ಹೊರತು, ಇನ್ನೇನೂ ಆಗಲಿಲ್ಲ.

ಇಂತಹ ಜನರ ನಡುವೆ ಜನವಾದಿ ಮಹಿಳಾ ಸಂಘಟನೆ ಮತ್ತು ಕೃಷಿ ಕೂಲಿಕಾರರ ಸಂಘಟನೆ ಕಟ್ಟಲು ತೀರ್ಮಾನಿಸಿ, ಮಧ್ಯಪ್ರವೇಶಿಸಲಾಯಿತು. ಅಲ್ಲಿರುವ ಒಂದೊಂದೇ ಸಮಸ್ಯೆಗಳನ್ನು ಆಲಿಸಿ ಅವುಗಳ ಪರಿಹಾರಕ್ಕೆ ಆ ಜನರನ್ನು ಸಂಘಟಿಸಿ ಹೋರಾಟಕ್ಕಿಳಿಸಲಾಯಿತು. ರೇಷನ್ ಕಾರ್ಡಿಗಾಗಿ, ಭಾಗ್ಯಜ್ಯೋತಿಗಾಗಿ, ಹೀಗೆ ಅನೇಕ ಹೋರಾಟಗಳು ನಡೆದವು. ಈ ಹೋರಾಟಗಳಿಗೆಲ್ಲ ಪ್ರಮುಖವೆಂಬಂತೆ ಸತತವಾಗಿ ಮೂರುದಿನಗಳ ಕಾಲ ಎರಡು ವರ್ಷದ ಹಿಂದೆ ಜಿಲ್ಲಾಧಿಕಾರಿ ಕಛೇರಿ ಎದುರು ನಡೆದ ಅಹೋರಾತ್ರಿ ಧರಣಿ ಸತ್ಯಾಗ್ರಹ. ಹಕ್ಕು ಪತ್ರಕ್ಕಾಗಿ ನಡೆದ ಈ ಹೋರಾಟ. ಮಹತ್ವವಾದುದು. ಕೂಲಿಕಾರರ ಸಂಘ ಮತ್ತು ಮಹಿಳಾ ಸಂಘಟನೆ ನೇತೃತ್ವದಲ್ಲಿ ನಡೆದ ಈ ಹೋರಾಟವನ್ನು ಮುರಿಯಲು ಅನೇಕ ಶಕ್ತಿಗಳು ಪ್ರಯತ್ನಿಸಿತಿದಾದರೂ ಯಶಸ್ವಿಯಾಗಲಿಲ್ಲ, ಆದರೆ ಹೋರಾಟ ಯಶಸ್ವಿಯಾಯಿತು. ಜಿಲ್ಲಾಡಳಿತ ಮತ್ತು ನಗರ ಸಭೆ ಹೋರಾಟಕ್ಕೆ ಮಣಿದು ಹಕ್ಕು ಪತ್ರ ನೀಡಲು ತೀರ್ಮಾನಿಸಿ ಸಮೀಕ್ಷೆ ನಡೆಸಿ, ಅಳತೆ ಮಾಡಿ ನಿವೇಶನಗಳಿಗೆ ನಂಬರ್‌ಗಳನ್ನು ನೀಡಲಾಗಿತ್ತು. ಮಾಜಿ ಶಾಸಕ ಶ್ರೀನಿವಾಸ್ ನೇತೃತ್ವದಲ್ಲಿನ ಭೂ ಮಾಫಿಯಾಗಳು ಆಗಲೂ ಹಕ್ಕುಪತ್ರ ವಿತರಣೆಯಾಗದಂತೆ ನೋಡಿಕೊಂಡವು. ಈಗ ಮತ್ತೊಂದು ಸುತ್ತಿನ ಹೋರಾಟ ಆರಂಭಿಸಬೇಕೆನ್ನುವಷ್ಟರಲ್ಲಿ ಈ ದುರಂತ ನಡೆದಿದೆ.



ಬಡವರಿಗೆ ದನಿಯಾದ ಆಂದೋಲನ :

ಈ ಎಲ್ಲಾ ಹೋರಾಟಗಳಿಗೆ ನೇತೃತ್ವ ಮತ್ತು ಮಾರ್ಗದರ್ಶನವನ್ನು ನಿರಂತರವಾಗಿ ನೀಡಿದ್ದು ಸಿಪಿಐ(ಎಂ)ಮತ್ತದರ ಕಾರ್ಯಕರ್ತರು. ಇದರ ಫಲವಾಗಿ ಪಕ್ಷಕ್ಕೆ ಕೆಲವು ಸದಸ್ಯರೂ ಬಂದರು. ಮಂಡ್ಯ ನಗರದಲ್ಲಿ ಪಕ್ಷಕ್ಕೆ ಒಂದು ಸಣ್ಣ ನೆಲೆಯೂ ಸಿಕ್ಕಿತು. ಆದ್ದರಿಂದಲೇ ಕಳೆದ ನಗರಸಭೆ ಚುನಾವಣೆಯಲ್ಲಿ ಮಂಡ್ಯದಲ್ಲಿ ಪ್ರಥಮ ಬಾರಿಗೆ ಚುನಾವಣೆಗಳಿಗೆ ಸ್ಪರ್ಧಿಸಲು ಸಾಧ್ಯವಾಯಿತು ಮತ್ತು ಅಸ್ತಿತ್ವವನ್ನು ರುಜುವಾತುಪಡಿಸಲು ಸಾಧ್ಯವಾಯಿತು.

ಈ ದುರಂತ ನಡೆದ ನಂತರವೂ ಪಕ್ಷ ಸಂತ್ರಸ್ತರ ಸಹಾಯಕ್ಕೆ ಶಕ್ತಿಮೀರಿ ಪ್ರಯತ್ನಿಸಿತು. ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಕಾಂ:ವಿ.ಜೆ.ಕೆ.ನಾಯರ್, ಸಿಪಿಐ(ಎಂ) ಪಕ್ಷದ ನಾಯಕರೂ, ಮಾಜಿ ಶಾಸಕರೂ ಕಾಂ:ಶ್ರೀರಾಮರೆಡ್ಡಿ, ಜನವಾದಿ ಮಹಿಳಾ ಸಂಘಟನೆಯ ರಾಜ್ಯ ಮುಖಂಡರಾದ ಕಾಂ: ಕೆ.ಎಸ್. ವಿಮಲ ಎಲ್ಲರೂ ಖುದ್ದು ಭೇಟಿ ನೀಡಿದರು. ಕಾಂ: ವಿ.ಜೆ.ಕೆ.ನಾಯರ್ ನೇತೃತ್ವದಲ್ಲಿ ಪಕ್ಷದಿಂದ ಸಂತ್ರಸ್ತ ಪ್ರತಿ ಕುಟುಂಬಕ್ಕೆ ಒಂದು ಸೀರೆ ಮತ್ತು ಟವಲ್ಲು ವಿತರಿಸಲಾಯಿತು. ಮಂಡ್ಯ ನಗರದಲ್ಲಿ ನಿಧಿ ಸಂಗ್ರಹಿಸಿ ಅವರಿಗೆ ಸಹಾಯ ಮಾಡಲಾಯಿತು. ಪಕ್ಷದ ಜಿಲ್ಲೆಯ ಎಲ್ಲಾ ಮುಖಂಡರೂ ಹಗಲಿರುಳೂ ಅವರ ಜೊತೆಯಿದ್ದು ಸಹಾಯ ಮಾಡಿ, ಸಾಂತ್ವನ ಹೇಳಿದರು.

● ಟಿ.ಎಲ್.ಕೃಷ್ಣೇಗೌಡ

# ಇಲಾಖೆಯ ಅಸಮರ್ಥತೆಗೆ ಬಡ ಅಂಗನವಾಡಿ ಕಾರ್ಯಕರ್ತರು ಕೆಲಸ ಕಳೆದುಕೊಳ್ಳಬೇಕೆ?

## ಸರ್ಕಾರದ ಬೇಜವಾಬ್ದಾರಿಯಿಂದಾಗಿ ಸಹಸ್ರಾರು ಅಂಗನವಾಡಿ ನೌಕರರ ನೇಮಕಾತಿ ರದ್ದಾಗುವಂತಾಗಿರುವುದು ಒಂದು ದುರಂತ.

ಎಸ್. ವರಲಕ್ಷ್ಮಿ

ಶಿಶು ಸಮಗ್ರ ಅಭಿವೃದ್ಧಿ ಯೋಜನೆ (ಐಸಿಡಿಎಸ್) ಕಳೆದ 32 ವರ್ಷಗಳಿಂದ ಕೇಂದ್ರ ಸರ್ಕಾರದ ಅತ್ಯಂತ ದೊಡ್ಡ ಯೋಜನೆಯಾಗಿ, ದೀರ್ಘಕಾಲಿನ ಯೋಜನೆಯಾಗಿ ದೇಶದ ಮಾನವ ಸಂಪನ್ಮೂಲಗಳ ಅಭಿವೃದ್ಧಿಗಾಗಿ ದುಡಿಯುತ್ತಿದೆ. ಈ ಯೋಜನೆಯಡಿಯಲ್ಲಿ ದೇಶದಾದ್ಯಂತ ಸುಮಾರು 15 ಲಕ್ಷ ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರು ದುಡಿಯುತ್ತಿದ್ದಾರೆ. ಅದೇ ರೀತಿ ರಾಜ್ಯದಲ್ಲಿ 175 ಯೋಜನೆಗಳಲ್ಲಿ 1 ಲಕ್ಷ 20 ಸಾವಿರ ನೌಕರರು ದುಡಿಯುತ್ತಿದ್ದಾರೆ. ಆದರೆ ಇಷ್ಟು ವರ್ಷಗಳಿಂದ ಯೋಜನೆಯಿದ್ದರೂ ಅದಕ್ಕೆ ಸರಿಯಾದ ಮಾರ್ಗದರ್ಶಿ ಸೂತ್ರಗಳನ್ನು ಅಳವಡಿಸದಿರುವುದು, ಅಳವಡಿಸಿದರೂ ಅದನ್ನು ಸ್ಥಳೀಯ ಮಟ್ಟದಲ್ಲಿ ಜಾರಿಗೊಳಿಸಲು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಅಭಿವೃದ್ಧಿ ಇಲಾಖೆಯ ಅಧಿಕಾರಿಗಳು ವಿಫಲವಾಗುತ್ತಿರುವುದು ಹಲವಾರು ಸಂದರ್ಭಗಳಲ್ಲಿ ಕಂಡಿದೆ.

ಯುಪಿಎ ಸರ್ಕಾರ ತನ್ನ ಪ್ರಣಾಳಿಕೆಯಲ್ಲಿ ಐಸಿಡಿಎಸ್ ಯೋಜನೆಯ ವಿಸ್ತರಣೆ ಮತ್ತು ಬಲವರ್ಧನೆ ಮಾಡುವುದಾಗಿ ಘೋಷಿಸಿತ್ತು. ಈ ಘೋಷಣೆಯನ್ನು ಜಾರಿ ಮಾಡಬೇಕೆಂದೂ ಸಿಪಿಐ(ಎಂ) ಮತ್ತು ಸಂಬಂಧಿಸಿದ ಸಂಘಟನೆಗಳು ಒತ್ತಾಯ ಮಾಡುತ್ತಿದ್ದವು. ಇದರ ಫಲವಾಗಿ ಮತ್ತು ಸುಪ್ರಿಂ ಕೋರ್ಟ್ ದೇಶದ ಎಲ್ಲಾ 17 ಕೋಟಿ ಮಕ್ಕಳಿಗೂ ಐಸಿಡಿಎಸ್ ಯೋಜನೆಯ ಫಲ ಸಿಗಬೇಕು ಹಾಗೂ ಪೌಷ್ಠಿಕ ಆಹಾರವನ್ನು ಒದಗಿಸಬೇಕು ಎಂದು ಆದೇಶಿಸಿತ್ತು. ಇದರ ಭಾಗವಾಗಿ 2005ರಲ್ಲಿ ಯೋಜನೆಯ ವಿಸ್ತರಣೆಯ ಭಾಗವಾಗಿ ರಾಜ್ಯಕ್ಕೆ 11,500 ಕೇಂದ್ರಗಳು ಮಂಜೂರಾದವು.

ಈ ಕೇಂದ್ರಗಳಿಗೆ ಆಯ್ಕೆ ಪ್ರಕ್ರಿಯೆಯ ಭಾಗವಾಗಿ ಕೇಂದ್ರ ಸರ್ಕಾರ ನಿಯಮಾವಳಿಯನ್ನು ರೂಪಿಸಿ ಕಳುಹಿಸಿತ್ತು. ಈ ನಿಯಮಾವಳಿಯ ಪ್ರಕಾರ ತಾಲೂಕು ಮತ್ತು ಜಿಲ್ಲಾ ಪಂಚಾಯಿತಿ ಸದಸ್ಯರಿಗೆ, ಜಿಲ್ಲಾ ಪಂಚಾಯಿತಿ ಕಾರ್ಯದರ್ಶಿಗಳು, ಐಸಿಡಿಎಸ್ ಯೋಜನೆಯ ಉಪನಿರ್ದೇಶಕರು ಹಾಗೂ ಸಿಡಿಪಿಓಗಳು ಈ ಆಯ್ಕೆ ಸಮಿತಿಯಲ್ಲಿರುವವರು, ಇವರು ಕೂಡಾ ಆಯ್ಕೆ ಮಾಡುವಾಗ ವರ್ಗಾವಣೆ ಬಯಸಿದ ಅಂಗನವಾಡಿ ಕಾರ್ಯಕರ್ತೆಯರಿಗೆ ಮತ್ತು 7ನೇ ತರಗತಿ ಪಾಸಾದ 10 ವರ್ಷ ಸೇವೆ ಸಲ್ಲಿಸಿದ ಸಹಾಯಕಿಯರಿಗೆ ಕಾರ್ಯಕರ್ತೆಯರಾಗಿ ಭಡ್ತಿ ನೀಡಿ ನಂತರ ಉಳಿದ ಅಂಗನವಾಡಿ ಕೇಂದ್ರಗಳಿಗೆ ಆಯ್ಕೆಗಾಗಿ ನೋಟಿಫಿಕೇಶನ್ ಹೊರಡಿಸಬೇಕಾಗಿತ್ತು. ಆದರೆ ಆ ರೀತಿಯಲ್ಲಿ ಎಲ್ಲೂ ಮಾಡಿಲ್ಲ ಎಂಬುದನ್ನು ಗಮನಿಸಬೇಕು.


1995ರಲ್ಲಿ ಅಂಗನವಾಡಿ ಕೇಂದ್ರಗಳಿಗೆ ನೇಮಕ ಮಾಡುವಾಗ ಶಾಸಕರ ಅಧ್ಯಕ್ಷತೆಯಲ್ಲಿಯೇ ನೇಮಕ ಪ್ರಕ್ರಿಯೆ ನಡೆದಿತ್ತು. ಅದೇ ರೀತಿಯಲ್ಲಿ ನಡೆಸಬೇಕೆಂದು ರಾಜ್ಯ ವಿಧಾನ ಸಭೆಯಲ್ಲಿ 2006-07ರಲ್ಲಿ ಶಾಸಕರು ಏಕಧ್ವನಿಯಾಗಿ ಪ್ರತಿಭಟಿಸಿ ತಮಗೂ ನೇಮಕ ಪ್ರಕ್ರಿಯೆಯ ಅಧಿಕಾರ ಇರಬೇಕೆಂದರು. ಅದೇ ರೀತಿ ವಿಧಾನಸಭೆಯ ಅಂತಿಮ ನಿರ್ಣಯವಾಗಿ 2006ರಲ್ಲಿ ರಾಜ್ಯ ಸರ್ಕಾರವೇ ಮತ್ತೊಂದು ಸುತ್ತೋಲೆಯನ್ನು ಹೊರಡಿಸಿತ್ತು. ಇದರ ಪ್ರಕಾರ ಕ್ಷೇತ್ರವಾರು ಸಮಿತಿಗಳನ್ನು ಮಾಡಿ ಆಯ್ಕೆ ಮಾಡಲಾಯಿತು. ಶಾಸಕರ ಸಮ್ಮುಖದಲ್ಲಿ ಆಯ್ಕೆ ಪ್ರಕ್ರಿಯೆ ಪ್ರಾರಂಭವಾದ ಕೂಡಲೇ ಜಿಲ್ಲಾ ಪಂಚಾಯಿತಿ ಸದಸ್ಯರು ಇದನ್ನು ವಿರೋಧ ಮಾಡಿ ಹೈ ಕೋರ್ಟ್‌ಗೆ ದೂರನ್ನು ನೀಡಿದರು. ಕೂಡಲೇ ಹೈಕೋರ್ಟ್ ತೀರ್ಪನ್ನು ನೀಡಿತ್ತು. ರಾಜ್ಯ ಸರ್ಕಾರಗಳು ಅಂಗನವಾಡಿ ಕೇಂದ್ರಗಳನ್ನು ಸ್ಥಾಪಿಸುವಲ್ಲಿ ವಿಳಂಬ ಧೋರಣೆ ಅನುಸರಿಸುತ್ತಿವೆ, ಕೂಡಲೇ ಕೇಂದ್ರಗಳನ್ನು ಪ್ರಾರಂಭಿಸಬೇಕೆಂದೂ ಸರ್ವೋಚ್ಚ ನ್ಯಾಯಾಲಯ ಕೇಂದ್ರ ಸರ್ಕಾರಕ್ಕೆ ಆದೇಶಿಸಿತು.

ಈ ಒತ್ತಾಯಗಳ ಮೇರೆಗೆ ರಾಜ್ಯ ಸರ್ಕಾರ ಹೈಕೋರ್ಟ್‌ನಲ್ಲಿ ಕೇಸಿದ್ದರೂ ನೇಮಕ ಆಗುವವರು ಕೋರ್ಟ್‌ನ ಅಂತಿಮ ತೀರ್ಮಾನಕ್ಕೆ ಒಳಪಡಬೇಕೆಂಬ ನಿಬಂಧನೆಯೊಟ್ಟಿಗೆ ಶಾಸಕರ ಅಧ್ಯಕ್ಷತೆಯಲ್ಲಿ ನೇಮಕ ಪ್ರಕ್ರಿಯೆ ನಡೆಸಿತು. ಸಹಜವಾಗಿ ರಾಜಕೀಯ ಮೌಲ್ಯಗಳನ್ನೇ ಮರೆತಿರುವ ಇಂದಿನ ರಾಜಕೀಯ ಪ್ರಭಾವದಲ್ಲಿದ್ದವರು ಕೂಡಾ 50 ಸಾವಿರದವರೆಗೂ ಲಂಚಗಳನ್ನು


ಪುಟ 15 ಕೆ



ಬೆಂಗಳೂರಿನಲ್ಲಿ ಅಂಗನವಾಡಿ ಕಾರ್ಯಕರ್ತೆಯರ ಪ್ರತಿಭಟನೆ




ಕೆ. ನೀಲಾ



ಡಿಗ್ರಿಯ ಅಂತಿಮ ಘಟ್ಟಕ್ಕೆ ಬರುವ ಮುನ್ನ ಪರಿಚಯದ ಹುಡುಗನೊಬ್ಬ ಇವಳ ಮನಸ್ಸಿಗೆ ತಟ್ಟಿದ. ಓದು ಮುಗಿದ ಮೇಲೆ ಮದುವೆಯಾಗುವ ಮಾತು ಆಡಿದರು. ಅದು ಹೇಗೋ ಮನೆಯ ಜನಕೆ ಈ ಸುದ್ದಿ ಮುಟ್ಟಿತು.

ಮನೆಯೆಂಬುದೊಂದು ರಣರಂಗವಾಯಿತು. ಜಾತಿ ಬೇರೆ. ಹುಚ್ಚಾಟ ಕೈ ಬಿಡುವ ಅಂದರು. ಒಪ್ಪಲಿಲ್ಲ ಈಕೆ. ಸರಿ ಹೆತ್ತವರೂ ಹಠ ಹಿಡಿದರು. ಹಠದ ಜಾರಿ ಇಷ್ಟು ಕ್ರೂರವೇ? ಅದೂ ಹೆತ್ತ ಕರುಳಿನಿಂದ..?

# 'ಕರುಳ ಒಳಗಿನ ಕತ್ತರಿ'

"ಬಂಡವಾಳದ ಹರಿವಿನ ಅಸಮಾನತೆ ಹೆಚ್ಚಾದಂತೆ, ಶ್ರೀಮಂತ ಮತ್ತು ಬಡವರ ನಡುವಿನ ಅಂತರ ಹೆಚ್ಚಾದಂತೆ ಸಮಾಜದಲ್ಲಿನ ಮಾನವೀಯ ಮೌಲ್ಯಗಳು ಕ್ರಮೇಣ ಅಧಃಪತನದ ಅಂಚಿಗೆ ತಳ್ಳಲ್ಪಡುತ್ತವೆ"

ನನ್ನವ್ವ ಕೌದಿ ಹೊಲಿಯುತ್ತ ಹಲವು ಬಾರಿ ಒಂದು ಮಾತು ಹೇಳುತ್ತಿದ್ದಳು. "ಅಂಗಾಲಿಗೆ ಹೇಸಿಗಿಲ್ಲ. ಕರುಳಿಗೆ ನಾಚಿಕಿಲ್ಲ. ಏಟಾದ್ರೂ ರಕ್ತ ಸಂಬಂಧ ದೊಡ್ಡದು..." ಅಂತ. ಕೌದಿಯ ಒಡಲಲ್ಲಿ ಗಂಗಿ ಗೌರಿಯರು ಕೈ ಕೈ ಹಿಡಿದ ಚಿತ್ತಾರ ಬಿಡಿಸುತ್ತಾ ಅವ್ವ ಹೇಳಿದ ಮಾತುಗಳು ಮೊದಲೆಲ್ಲ ಹಾಗೆ ಹಾಗೆಯೇ ಹೃದಯದಾಳಕ್ಕಿಳಿದು ಕೌಟುಂಬಿಕ ಐಕ್ಯತೆಯ ಕಂಪನ ಹುಟ್ಟಿಸುತ್ತಿದ್ದವು. ಖರೆ ಅನ್ನಿಸುತಿತ್ತು. ಅದೊಂದು ದಿನ ಕೌದಿಯ ಹೊಲಿಗೆ ಪೂರ್ತಿ ಮುಗಿಸಿ ನಾಲ್ಕೂ ಅಂಚಿನ ತುದಿಗೆ ಕರಿ ಕಟ್ಟುವ ಹೊತ್ತಲ್ಲಿಯೇ ಅವ್ವ ಕಣ್ಣ ತುಂಬ ನೀರು ತಂದು,"ನಾವು ಇದ್ದ ಸಾವ್ಕಾರರು ಇಲ್ಲ ಅಂತ ನಿಮ್ಮುತ್ಯಾ (ಅವ್ವನ ಅಪ್ಪ) ನಾವಿದ್ದ ತನ್ನ ಮನ್ಯಾಂದು ನಿಲಾನಿಸ್ತಾ ಹೊರಗ ಹಾಕ್ದ. ಅದೇ ಸಣ್ಣ ಮಗಳ ಗಂಡನ ಮನೇವು ಇದ್ದವರಂತ ಆಕೆಗೆ ಹಬ್ಬಾ ಹುಣ್ಣಿಗ್ಗಿ ಕರದು ಮರ್ಯಾದಿ ಮಾಡ್ತಾನ..." ಹೇಳಿದ್ದಳು. ನಾನಾಗ ಪ್ರಶ್ನೆಗಳನ್ನು ಒಡ್ಡಿಕೊಂಡು ಉತ್ತರ ಕಂಡುಕೊಳ್ಳಲು ಹೆಣಗಾಡಿದ್ದೆ. ಮನೆಯ ಬಾಗಿಲಿಗೆ ಬರುವ 'ಸೋವಿಯತ್ ನಾರಿ' ಪತ್ರಿಕೆಗಳು. ಕಮ್ಯುನಿಸಂ ಶಬ್ದ ಚೆಲ್ಲಾಡುವ ಅಪ್ಪ, ಅಂಗಡಿಯಲ್ಲಿ ಹರಿದಾಡುವ ರಿಕ್ಷಾ ಯೂನಿಯನ್, ರೈತರು, ಕಾರ್ಮಿಕರು, ರಷ್ಯಾ, ವಿಯೆಟ್ನಾಂ ಮಾತುಗಳು. ದಿನಗಳು ಪ್ರಶ್ನೆಯ ಮೈತುಂಬಿ ಹೊರಳಾಡಿ ಜಾರುತ್ತಿದ್ದವು. ಒಳಗಣ್ಣ ದಿಟ್ಟಿ ನಿಚ್ಚಳವಾಗುತ್ತಿತ್ತು. ಹೊರ ಜಗತ್ತಿನ ಪಾಳೇಗಾರಿ ಜಮೀನ್ದಾರಿ ಮೌಲ್ಯಗಳ ಪ್ರತಿನಿಧಿಯಂತೆ ನಡೆಯುವ ಕುಟುಂಬದ ವ್ಯವಹಾರಗಳು ನನ್ನೊಳಗಿನ ನಂಬಿಕೆಯ ಬುಡ ಅಲ್ಲಾಡಿಸತೊಡಗಿದವು.

ಮಾತ ಮೀರಿದ್ರ.....

ನಾನು ಜೀವನ ಸಂಗಾತಿಯನ್ನು ಆರಿಸಿಕೊಂಡ ಸಮಯುವದು. ಮನೆಯೊಂದು ಧಗಾ ಧಗಾ ಪ್ರಜ್ವಲಿಸುವ ಅಗ್ನಿಕುಂಡ. ಮೌಲ್ಯಗಳ ಸಂಘರ್ಷ. ಕಾಳ ಕತ್ತಲೆಯ ರಾತ್ರಿ. "ನಾನೇ ಹುಟ್ಟಿಸಿದ ಮಕ್ಕಳು, ನನ್ನ ಮಾತ ಮೀರಿದ್ರ ಈ ನೆಲ ಅಗದು ಅದರೊಳಗ ಹುಗದು ಹುಟ್ಟಿಲ್ಲಾ ಅನಸ್ತೀನಿ...' ಕಿವಿಗೆ ಅಪ್ಪಳಿಸಿದ ಶಬ್ದಗಳು ಭಯ ತರಲಿಲ್ಲ. ತೀವ್ರ ನೋವಿನ ಅಲೆ ಈಟಿಯಂತೆ ಇರಿಯುತ್ತಿತ್ತು. ಏಕೆಂದರೆ ಅವು ಹೆತ್ತ ಕರುಳ ಮಾತುಗಳಾಗಿದ್ದವು. ನನ್ನ ಜೀವನದ ಜೊತೆ ಬರುವ ಸಂಗಾತಿಯ ಜಾತಿಯೇ ನನಗೆ ಗೊತ್ತಿರಲಿಲ್ಲ. ಮನೆಯಲ್ಲಿ ಜಾತಿಯೇ ಪ್ರಮುಖವಾಗಿತ್ತು. ಎಲ್ಲಕ್ಕೂ ಮಿಗಿಲಾಗಿ 'ಯಕಶ್ಚಿತ್ ಹೆಣ್ಣಾಗಿ' ನಾನೇ ನನ್ನ ಬಾಳ ಸಂಗಾತಿಯನ್ನು ಆರಿಸಿಕೊಂಡಿದ್ದೇನೆಂದು ಆ ಮೂಲಕ ನನ್ನ ಹಕ್ಕು ಪ್ರತಿಪಾದಿಸಿದ್ದ ಧಾರ್ಷ್ಟ್ಯ ತೋರಿದ್ದೇನೆಂದು ಮತ್ತು ಮನೆತನದ ಪ್ರತಿಷ್ಠೆಗೆ ಧಕ್ಕೆ ತಂದಿರುವೆನೆಂದು ನನ್ನ ಮೇಲೆ ಆರೋಪವಿತ್ತು. ಬಾರದ ನಿದ್ರೆ, ಮುಚ್ಚಿದ್ದ ಕಣ್‌ರೆಪ್ಪೆ, ಸುತ್ತಲೂ ಹರಿದಾಡುವ ಸಣ್ಣ ದೊಡ್ಡ ಕರುಳುಗಳು. ಹೆಡೆಯೆತ್ತಿ ಬುಸುಗುಟ್ಟಿದಂತೆ. ಇಪ್ಪತ್ತು ವರ್ಷಗಳ ತರುವಾಯ ಈಗಲೂ ಅನ್ನಿಸುತ್ತದೆ. 'ಅವರೆಲ್ಲ ವ್ಯವಸ್ಥೆಯ ಕೂಸುಗಳು. ಬೇಕೆಂದೇ ದ್ವೇಷಿಸಿಲ್ಲ' ಎಂದು. ಹೌದು, ಚಳುವಳಿಗಳೇ ಇಲ್ಲದ ನಾಡಲ್ಲಿ ವೈಯಕ್ತಿಕ ಬದಲಾವಣೆಯಾದರೂ ಹೇಗಾಗಲು ಸಾಧ್ಯ...? ಸಮಗ್ರ ಬದಲಾವಣೆಗೆ ಬೇಕಾದ ರಾಜಕೀಯ ಗುರಿಯಿರುವ ಸಾಮೂಹಿಕ ಚಳುವಳಿಗಳಲ್ಲಿ ಜನತೆಯನ್ನು ಅಣಿನೆರೆಸದೆ ಯಾವುದೇ ಬದಲಾವಣೆ ಹೇಗೆ ನಿರೀಕ್ಷಿಸುವುದು...?

ಸಿಪಿಐ(ಎಂ) ಪಕ್ಷದ ಮಹಾಧೀವೇಶನದ ಕರಡು ವರದಿ ಓದಿ ಮುಗಿಸುವ ಒಂದು ವಾರದ ಮೊದಲೇ ಎದೆ ನಡುಗಿಸುವ ಮೂರು ಘಟನೆಗಳು ನಡೆದವು. ಬಿ.ಎ., ದ್ವಿತೀಯದಲ್ಲಿ ಓದುವ ಹರೆಯದ ಹುಡುಗಿಯೊಬ್ಬಳು ನೇಣಿಗೆ ಶರಣಾಗಿದ್ದಳು.

## ಯಾಕ ಸತ್ತಳು ಹುಡುಗಿ:

ನೇಣಿಗೆ ಕೊರಳೊಡ್ಡಿದ್ದ ಹುಡುಗಿಯ ಮನೆ ಪಕ್ಕದ ಗೆಳೆಯರೊಬ್ಬರು ಮನೆಗೆ ಬಂದರು. ನಾನು ಅನುಮಾನಿಸುತ್ತಲೇ ಕೇಳಿದೆ. "ಯಾಕ ಸತ್ತಳು ಹುಡುಗಿ?" ಅವರ ಹಣೆಯ ಮೇಲೂ ಆತಂಕದ ಗೆರೆಗಳು ಮೂಡಿದವು. "ಹ್ಯಾಂಗ ಹೇಳಬೇಕು. ಹುಡುಗಿ ಬದುಕಿದ್ದಾಗ ನಮಗೇನೂ ಗೊತ್ತಾಗಲಿಲ್ಲ. ಯಾರ ಜತಿಗನೂ ಮಾತಾಡ್ತಿರಲಿಲ್ಲ. ಕಾಲೇಜಿಗೆ ಹೋಗಾದು ಖುದ್ ತಾಯಿ-ತಂದಿನೇ ಬಿಡಿಸಿದ್ರಂತೆ. ಎರಡ ತಿಂಗಳಲಿಂದ ಮನ್ಯಾಗೇ ಇದ್ದಳು...' ಅವರು ಹೇಳುತ್ತಿದ್ದರು. ನಾನು ಒಂದೇ ಒಂದು ಮಾತಾಡದೆ ಎಲ್ಲ ಮಾತುಗಳಿಗೂ ಕಿವಿಯಾದೆ.

"ಪ್ರೇಮಾ ಮಧ್ಯಮವರ್ಗದ ಮೇಲ್ಜಾತಿಯ (?) ತಾಯಿ ತಂದೆಗೆ ಎರಡನೆಯ ಮಗಳು. ಕಾಲೇಜು ಪ್ರವೇಶ ಪಡೆವಾಗ ಪಾದರಸದಂತೆ ಹರಿದಾಡುವ ಅದ್ಭುತ ಚಟುವಟಿಕೆಯ ಕ್ರಿಯಾಶೀಲ ಸ್ನೇಹಮಯಿ. ಡಿಗ್ರಿಯ ಅಂತಿಮ ಘಟ್ಟಕ್ಕೆ ಬರುವ ಮುನ್ನ ಪರಿಚಯದ ಹುಡುಗನೊಬ್ಬ ಇವಳ ಮನಸ್ಸಿಗೆ ತಟ್ಟಿದ. ಓದು ಮುಗಿದ ಮೇಲೆ ಮದುವೆಯಾಗುವ ಮಾತು ಆಡಿದರು. ಅದು ಹೇಗೋ ಮನೆಯ ಜನಕೆ ಈ ಸುದ್ದಿ ಮುಟ್ಟಿತು. ಮನೆಯೆಂಬುದೊಂದು ರಣರಂಗವಾಯಿತು. ಜಾತಿ ಬೇರೆ. ಹುಚ್ಚಾಟ ಕೈ ಬಿಡುವ ಅಂದರು. ಒಪ್ಪಲಿಲ್ಲ ಈಕೆ. ಸರಿ ಹೆತ್ತವರೂ ಹಠ ಹಿಡಿದರು. ಹಠದ ಜಾರಿ ಇಷ್ಟು ಕ್ರೂರವೇ? ಅದೂ ಹೆತ್ತ ಕರುಳಿನಿಂದ..? ಹೌದು, ಪ್ರತಿಷ್ಠೆಗೆ, ಹಿಡಿತಕ್ಕೆ ಅಡ್ಡಿ ಬಂದವರು ಕರುಳ ಕುಡಿಯಾದರೇನು? ಯಾರಾದರೇನು?.....

'ಪೋರಿಗೆ ಬಾಳ ಹಿಂಸಾ ಮಾಡ್ತಿದ್ದರಂತ. ಫೋನ್ ಕೊಡ್ತಿರಲಿಲ್ಲ, ಹೊರಗ ಬಿಡ್ತಿರಲಿಲ್ಲ. ಮನಿ ಅಂಬಾದು ಜೈಲು ಮಾಡಿದ್ರು. ಹೇಳಿದ ಮಾತ ಕೇಳಿಲ್ಲಾಂತ ಕ್ರೋಧದಿಂದ ಮಗಳಿಗೆ ಹೊಡದದ್ದು ಒಬ್ಬಳು ಬೆಂಕಿ ಹಚ್ಚಿಕೊಂಡಿದ್ದಳು. ಇನ್ನೊಬ್ಬಳೂ ಹೀಗೆ... ಅವಿವಾಹಿತೆಯರು. ಪ್ರಕರಣಗಳು ಹೆತ್ತವ್ವವರ ಮನೆಯಲ್ಲಿಯೇ ನಡೆದವುಗಳು.

ಕರಡು ವರದಿಯ ಪುಟ ತಿರುವಿ ಓದಿನತ್ತ ಚಿತ್ತ ಏಕತ್ರಗೊಳಿಸಲು ಪ್ರಯತ್ನಿಸಿದೆ. 'ಮಹಿಳೆಯರು ಪ್ರಸಕ್ತ ಆರ್ಥಿಕ ನೀತಿಗಳ ಬಲಿಪಶುವಾಗಿದ್ದಾರೆ. ನವ ಉದಾರವಾದಿ ನೀತಿಗಳು ಜಮೀನ್ದಾರಿ ಮೌಲ್ಯಗಳನ್ನು ಗಟ್ಟಿಗೊಳಿಸುವುದರೊಂದಿಗೆ ಕೊಳ್ಳುಬಾಕ ಅಂಧ ಗ್ರಾಹಕ ಸಂಸ್ಕೃತಿಯನ್ನು ಹುಟ್ಟು ಹಾಕುತ್ತಿದೆ. ಪರಿಣಾಮವಾಗಿ ಸ್ತ್ರೀ ಹತ್ಯೆ, ಸ್ತ್ರೀ ಭ್ರೂಣ ಹತ್ಯೆಗಳು ಜರುಗುತ್ತಿವೆ. ಮರ್ಯಾದಾ ಹತ್ಯೆಗಳು ಹೆಚ್ಚುತ್ತಿವೆ. ತನ್ನ ಜೀವನ ಸಂಗಾತಿಯನ್ನು ಆಯ್ಕೆ ಮಾಡಿಕೊಳ್ಳುವ ಹಕ್ಕಿನೊಂದಿಗೆ ಮತ್ತಿತರ ಹಕ್ಕುಗಳನ್ನು ಮಹಿಳೆಯರಿಗೆ ನಿರಾಕರಿಸಲಾಗುತ್ತಿದೆ.' 'ವ್ಯಾಪಕವಾದ ಸಮಾಜ ಸುಧಾರಣಾ ಆಂದೋಲನಗಳನ್ನು ಕಟ್ಟುವ ಜರೂರಿ ಇದೆ'

ಮಂದಿಗೆ ಗೊತ್ತಾಗಬಾರದಂತ ಬಾಯ್ಯಾಗ ಬಟ್ಟೆಕೊಟ್ಟು ಹೊಡಿತಿದ್ರಂತ...' "ಮಗಳು ತಮ್ಮ ಘನ ಮರ್ಯಾದೆಗೆ ಧಕ್ಕೆ ತಂದಳೆಂಬ ಗಾಢ ಚಿಂತೆಯಲ್ಲಿ ತಾಯಿ-ತಂದೆ ಮಗಳೊಂದಿಗೆ ಆತ್ಮೀಯ ಸಂವಾದವೇ ನಿಲ್ಲಿಸಿದರಂತೆ. ಮಾತು ಮಾತಿಗೂ ತಿರಸ್ಕಾರ, ಬಯ್ಗಳ, ಅನೇಕ ಬಾರಿ ಶಾರೀರಿಕ ಹಲ್ಲೆ... ಹುಡುಗಿ ಸತ್ತು ಹೋಗುವ ಒಂದು ವಾರದಿಂದ ಏನೇನೂ ತಿನ್ನಲಿಲ್ಲ... ಕಡೆಗೆ ಹೆತ್ತವರ ಮನೆಯಲ್ಲೇ ಹೆಣವಾದಳು... ನಿಮ್ಮ ಕರುಳೂ ಚುರ್ರನ್ನುವುದಲ್ಲ? ತಾವೇ ಜನ್ಮ ಕೊಟ್ಟ ಕೂಸಿನೊಂದಿಗೆ ಮುಕ್ತವಾಗಿ ಮನಬಿಚ್ಚಿ ಮಾತಾಡಲು, ಸರಿಯಾದ ದಿಕ್ಕಿನಲ್ಲಿ ಸಲಹೆ ಕೊಡಲು ಎದೆಗಪ್ಪಿಕೊಂಡು ವಿಶ್ವಾಸ ಮೂಡಿಸಲು ಸಾಧ್ಯವಾಗಬಾರದೇಕೆ? ಕುಟುಂಬದೊಳಗೆ ಅಂತಸ್ತು-ಜಾತಿಯ ಪ್ರಶ್ನೆ. ಸಮಾಜದೊಳಗೆ.....?

## ಇನ್ನೊಂದು ಭಯಾನಕ ರೂಪ

ಇನ್ನೊಂದು ಭಯಾನಕ ರೂಪ! ಜನವಾದಿಯ ಪತ್ರಿಕಾಗೋಷ್ಠಿಯಲ್ಲಿ ವರದಿಗಾರ್ತಿಯೊಬ್ಬಳು ಕರಾವಳಿ- ಮಲೆನಾಡಿನಲ್ಲಿ ಅವತರಿಸಿದ ಕೋಮುವಾದಿಗಳ ಕ್ರೌರ್ಯ ತಾಂಡವ ವಿವರಿಸಿದಳು. ಬೀಚಿನಲ್ಲಿ, ರಸ್ತೆಯ ಮೇಲೆ ಕಾಲೇಜಿನ ಗ್ರೌಂಡಿನಲ್ಲಿ ಭಿನ್ನ ಧರ್ಮದ ಹುಡುಗ-ಹುಡುಗಿಯರು ಮಾತಾಡಲೂ ಬಿಡದಂತೆ ಸಂಘ ಪರಿವಾರಗಳ ಕಾವಲಂತೆ. ಮುಸ್ಲಿಂ ಹುಡುಗ-ಹಿಂದೂ ಹುಡುಗಿಯೊಂದಿಗೆ ಮಾತಾಡುತ್ತಿದ್ದರೆ ಹುಡುಗನ ಮೇಲೆ ಹಲ್ಲೆ ಗ್ಯಾರಂಟಿ... ಹುಡುಗಿಗೆ ಛೀಮಾರಿ.

ರಾಜಸ್ಥಾನದ ದಲಿತ ಹುಡುಗ ಮೇಲ್ಜಾತಿ ಹುಡುಗಿಯನ್ನು ವರಿಸಿದ್ದಕ್ಕಾಗಿ ವಿಷ ಕುಡಿಸಿ ಸಾಯಿಸಲಾಯಿತು. ಕೆಲವು ವರ್ಷಗಳ ಹಿಂದೆ, ಗಂಗಾವತಿಯಲ್ಲಿ ನಡೆದ ಘಟನೆ. ದಲಿತನನ್ನು ಮದುವೆಯಾದ ಮಗಳು ಐದು ತಿಂಗಳ ಗರ್ಭಿಣಿಯಿದ್ದಾಗ ಮನೆಗೆ ಮಾತಾಡಿಸಲು ಹೋದ ತಂದೆ ಪೆಟ್ರೋಲ್ ಸುರುವಿ ಜೀವಂತ ಸುಟ್ಟು ಹಾಕಿದ ಹೃದಯವಿದ್ರಾವಕ ಘಟನೆ ಮರೆಯಲು ಸಾಧ್ಯವೇ ಇಲ್ಲ.

ಮರ್ಯಾದಾ-ಹಿಂಸೆ, ಹಲ್ಲೆ, ಹತ್ಯೆಗಳು ಜಾಗತೀಕರಣ, ಉದಾರೀಕರಣ, ಖಾಸಗೀಕರಣದ ಈ ಹೊತ್ತಲ್ಲಿ ಮತ್ತಷ್ಟು ಕ್ರೂರ ಸ್ವರೂಪ ಪಡೆಯುತ್ತಿವೆ. ಕರುಳಿನೊಳಗಿನ ಕತ್ತರಿಯಾಗುತ್ತಿವೆ. ಹೆತ್ತವರ ಹಾಲಲ್ಲೇ ನಂಜಿನ ಹನಿಯಾಗುತ್ತಿದೆ... ಪಕ್ಷದ ಮಹಾಧಿವೇಶನದ ಕರಡು ವರದಿಯ ಪುಟ ತಿರುವ ತೊಡಗಿದೆ. ಕಡೆಯ ಮೂರು ಲೈನುಗಳು ಬೆಳಕ ಕಿರಣಗಳಂತೆ ಬೆಳಗಿದವು.

ಐಕ್ಯ ಮತ್ತು ಜಾತ್ಯಾತೀತ ಭಾರತವನ್ನು
ಕಟ್ಟುವ, ಹೋರಾಟದಲ್ಲಿ ಸೇರಿರಿ.
ವರ್ಗಶೋಷಣೆ ಮತ್ತು ಸಾಮಾಜಿಕ
ದಮನದ ವಿರುದ್ಧ ಹೋರಾಡಿರಿ
ಸಾಮಾಜಿಕ ನ್ಯಾಯ ಮತ್ತು ಎಲ್ಲರ
ಪ್ರಗತಿಯನ್ನು ಖಾತರಿಗೊಳಿಸಲು
ಮುಂದಾಗಿ.

# ...ವಿಮಾನ ನಿಲ್ದಾಣ ಮುಚ್ಚುವ ಹುನ್ನಾರ

ಪುಟ 7 ರಿಂದ

15ರಂದು ಉದ್ಘಾಟನೆ ಗೊಳ್ಳುತ್ತಿರುವುದರಿಂದ ಈ ಬಗ್ಗೆ ಕೂಡಲೇ ಸರ್ಕಾರ ಅಲ್ಲಿಯ ನೌಕರರಿಗೆ ಪರ್ಯಾಯ ವ್ಯವಸ್ಥೆ ಕಲ್ಪಿಸಬೇಕೆಂದು ಅಧ್ಯಕ್ಷರಾದ ಸೀತಾರಾಂ ಯೆಚೂರಿ ಒತ್ತಾಯಿಸಿ ಈ ಬಗ್ಗೆ ತ್ರಿಪಕ್ಷೀಯ ಸಭೆಯನ್ನು ಕೂಡಲೇ ನಡೆಸಿ ಈ ಎರಡೂ ನಿಲ್ದಾಣಗಳ ನೌಕರರ ಸಮಸ್ಯೆ ಇತ್ಯರ್ಥಪಡಿಸಲು ಅವರು ಆಗ್ರಹಪಡಿಸಿದ್ದಾರೆ.

ಈ ಅಂತರಾಷ್ಟ್ರೀಯ ವಿಮಾನ ನಿಲ್ದಾಣಗಳ ಹಣಕಾಸಿನ ನಿರ್ವಹಣೆ ಕುರಿತು ಸರ್ಕಾರ ಕೇವಲ ಖಾಸಗಿಯವರಿಗೆ ಸಂಪೂರ್ಣ ವಹಿಸದೆ ಭಾರತ ಸರ್ಕಾರದ ವಿಮಾನ ನಿಲ್ದಾಣ ಪ್ರಾಧಿಕಾರ ಒಳಗೊಳ್ಳುವಂತಹ ನಿಯಮ ರೂಪಿಸಬೇಕು. ಈ ಹಿಂದೆ ದೆಹಲಿ ಮತ್ತು ಮುಂಬೈ ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಆರಂಭಗೊಂಡ ಸಂದರ್ಭದಲ್ಲಿ ಸರ್ಕಾರ. ಈ ಪ್ರಾಧಿಕಾರ, ಟೆಂಡರ್ ಪ್ರಕ್ರಿಯೆಯಲ್ಲೂ ಭಾಗವಹಿಸದಂತೆ ತಡೆಗಟ್ಟಿ ಆ ಮೂಲಕ ಖಾಸಗಿ ಕಂಪನಿಗಳಿಗೆ ಅವಕಾಶ ನೀಡಿದ್ದನ್ನು ಸಮಿತಿ ಟೀಕಿಸಿದೆ.

ಭಾರತ ಸರ್ಕಾರ ಸದ್ಯದ ವಿಮಾನ ನಿಲ್ದಾಣ ಪ್ರಾಧಿಕಾರಕ್ಕೆ ಲಾಭದ ಆದಾಯ ಬರುವುದೇ 4 ಪ್ರಮುಖ ಅಂತರಾಷ್ಟ್ರೀಯ ವಿಮಾನ ನಿಲ್ದಾಣಗಳಿಂದ. ಇದರಿಂದಾಗಿ ಅದು ಇತರೆ ವಿಮಾನ ನಿಲ್ದಾಣಗಳಿಗೂ ಸಹಾಯಧನ ನೀಡಿ ನಿರ್ವಹಣೆ ಮಾಡುತ್ತಿದೆ. ಇದೀಗ ಸರ್ಕಾರ ಈ ನೂತನ ವಿಮಾನ ನಿಲ್ದಾಣಗಳಿಂದ ಪ್ರಾಧಿಕಾರವನ್ನು ಹೊರಗಿಟ್ಟು ಅದು ನಷ್ಟ ಅನುಭವಿಸುವಂತೆ ಸರ್ಕಾರ ಪ್ರಯತ್ನಿಸುತ್ತಿದೆ. ಹಾಗಾಗಿ ಈ ಖಾಸಗೀಕರಣ ನೀತಿಯನ್ನು ಸರ್ಕಾರ ಪುನರ್ ಪರಿಶೀಲನೆಗೊಳಪಡಿಸಲು ಯೆಚೂರಿ ಒತ್ತಾಯಿಸಿದ್ದಾರೆ. ಮಾತ್ರವಲ್ಲ ಸರ್ಕಾರ ವಿಮಾನ ನಿಲ್ದಾಣ ಪ್ರಾಧಿಕಾರವು ಆರ್ಥಿಕವಾಗಿ ಸದೃಢವಾಗುವಂತಹ ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸಿದ್ದಾರೆ.

ಹಾಗಾಗಿ ಸರ್ಕಾರ ವಿಮಾನಯಾನಕ್ಕೆ ಸಂಬಂಧಿಸಿ ಸಂಸತ್ತಿನ ಸ್ಥಾಯಿ ಸಮಿತಿ ನೀಡಿರುವ ಎಲ್ಲಾ ಶಿಫಾರಸ್ಸುಗಳನ್ನು ಜಾರಿಗೊಳಿಸಲು ಮುಂದಾಗಬೇಕು. ಇಲ್ಲದಿದ್ದರೆ ಈ ವಿಚಾರದಲ್ಲಿ ನೌಕರರ ಹೋರಾಟಕ್ಕೆ ರಾಜಕೀಯ ಪ್ರಕ್ರಿಯೆಗೆ ಅವಕಾಶ ನೀಡಬಾರದೆಂದು ಅವರು ಸರ್ಕಾರವನ್ನು ಒತ್ತಾಯಿಸಿದ್ದಾರೆ.



ಒಬ್ಬ ವಿಜ್ಞಾನಿಯಾಗಿ ಸಿ.ವಿ.ರಾಮನ್‌ರವರು ಭಾರತದ ವೈಜ್ಞಾನಿಕ ಬೆಳವಣಿಗೆಗೆ ನೀಡಿದ ಕೊಡುಗೆ ಅಮೋಘವಾದುದು

# ಸರ್ ಸಿ.ವಿ. ರಾಮನ್‌ರ ಅಮೋಘ ಕೊಡುಗೆಯ ಸ್ಮರಣೆ

ಫೆಬ್ರವರಿ 28 "ರಾಷ್ಟ್ರೀಯ ವಿಜ್ಞಾನ ದಿನಾಚರಣೆ"

ಈ ದೇಶಕ್ಕೆ, ಈ ದೇಶದ ಜನತೆಗೆ "ರಾಷ್ಟ್ರೀಯ ವಿಜ್ಞಾನ ದಿನಾಚರಣೆ" ಈ ಮೂರು ಅಂಶಗಳಲ್ಲಿ ಮಹತ್ತರವಾದುದು.

ಮೊದಲನೆಯದಾಗಿ ವಿಶ್ವಭೂಪಟದಲ್ಲಿ ಈ ದೇಶಕ್ಕೆ ಪ್ರಮುಖ ಸ್ಥಾನಮಾನ ನೀಡಿದಂತಹ ದಿನ, ಇಂಗ್ಲೆಂಡು, ಅಮೇರಿಕ, ರಷ್ಯಾ ದೇಶಗಳ ಸಾಲಿನಲ್ಲಿ ತಲೆಯೆತ್ತಿ ನಿಲ್ಲಿಸಿದ ದಿನ, ಹೆಚ್ಚಾಗಿ ಬಂಡವಾಳ ಶಾಹಿ ರಾಷ್ಟ್ರಗಳಿಗೇ ಮಾತ್ರ ಸೀಮಿತವಾಗಿದ್ದ ವಿಜ್ಞಾನದ ಫಲಶೃತಿ, ಸಾಧನೆ, ಬಹುಮಾನ ಇವೆಲ್ಲವನ್ನು ಮೊದಲ ಬಾರಿಗೆ ತೃತೀಯ ಜಗತ್ತಿನ ರಾಷ್ಟ್ರವೊಂದು ತನ್ನದಾಗಿಸಿಕೊಂಡ ದಿನ...

**ವೈಜ್ಞಾನಿಕ ವೈಚಾರಿಕ ನೆಲೆ :**

1930 ಫೆಬ್ರವರಿ 28 ಈ ದೇಶಕ್ಕೆ ನೊಬೆಲ್ ಪಾರಿತೋಷಕ ತಂದುಕೊಟ್ಟ ದಿನ. ಎರಡನೆಯ ದಾಗಿ ಕಳೆದ ಐವತ್ತು ವರ್ಷಗಳಲ್ಲಿ ಹಲವು ಬಾರಿ ಈ ದೇಶ ರಾಜಕೀಯ ಅಸ್ಥಿರತೆ ಅನುಭವಿಸಿದ್ದರೂ, ಮಿಲಿಟರಿಯ ತೆಕ್ಕೆಗೆ ಬೀಳದಿರಲು ಕಾರಣ ಈ ರಾಷ್ಟ್ರದ ಪ್ರಜಾಸತ್ತೆಯ ತಳಹದಿ ವೈಜ್ಞಾನಿಕ ಮನೋ ಧರ್ಮದ್ದು. ಅಂತಹ ವೈಜ್ಞಾನಿಕ ಮನೋಧರ್ಮ ವನ್ನು ಅಂದಿನ ನಮ್ಮ ಸ್ವಾತಂತ್ರ್ಯ ಹೋರಾಟ ಗಾರರಿಗೆ, ಅದರ ನೇತಾರರಿಗೆ ಅಚ್ಚೊತ್ತಿಸಿ ವೈಜ್ಞಾನಿಕ ಮನೋಭಾವ ಬೆಳೆಸಿ ಕೊಳ್ಳುವುದು ಮೂಲಭೂತ ಕರ್ತವ್ಯ ಎಂದು ಸಂವಿಧಾನದ ಪುಟಗಳಲ್ಲಿ ಸೇರಿಸಲು ಪ್ರೇರಣೆ ನೀಡಿದ ದಿನ.

**'ರಾಷ್ಟ್ರಪ್ರೇಮ'ದ ದಿನ**

ಮೂರನೆಯದಾಗಿ, ಈ ದೇಶದ ಎಲ್ಲಾ ಮೂಲಭೂತ ಸೌಕರ್ಯಗಳನ್ನು ಬಳಸಿಕೊಂಡು ಪದವಿ, ಪಿ.ಎಚ್.ಡಿ. ಪಡೆದು ಸಧೃಡ ಕಾಯ ಬೆಳೆಸಿಕೊಂಡು ಈ ದೇಶದಲ್ಲಿ ಏನೂ ಇಲ್ಲ, ಇಲ್ಲೇ ಇದ್ದರೆ ಏನೂ ಸಾಧನೆ ಮಾಡಲಿಕ್ಕಾಗುವುದಿಲ್ಲ ಎಂದು ಸಾಗರೋಲ್ಲಂಗನ ಮಾಡುವ ಪ್ರತಿಭಾವಂತರಿಗೆ ನಾಚಿಸುವ ದಿನ, ರಾಷ್ಟ್ರಪ್ರೇಮ ಎತ್ತಿ ತೋರುವ ದಿನ ರಾಮನ್ ಎಂದರೆ ಯಾರು, ಏನು ಎಂದು ತೋರುವ ದಿನ.

ರಾಷ್ಟ್ರ ಪ್ರೇಮ ಅನ್ನುವ ಗುಣಾತ್ಮಕತೆ ನಾಲಿಗೆ ತುದಿಯಲ್ಲಿ ಬೆಳೆಯದೆ ಹೃದಯಾಂತರಾಳದಲ್ಲಿ ಅರಳಿದಾಗ ಮಾತ್ರ ಈ ಮೂರು 'ಕೃಷ್ಣರಂಧ್ರ'ಗಳಿಗೆ ಪರಿಹಾರ ಹುಡುಕಲು ಸಾಧ್ಯ. ಆಲ್ ಇಂಡಿಯಾ ಪೀಪಲ್ಸ್ ಸೈನ್ಸ್ ನೆಟ್‌ವರ್ಕ್ ನ್ಯಾಷನಲ್ ಲಿಟರಸಿ ಮಿಷನ್ ವಿಜ್ಞಾನ ಪರಿಷತ್, ವಿಜ್ಞಾನ ಕೇಂದ್ರಗಳು ಪ್ರತಿ-ಸಂಘ ಸಂಸ್ಥೆಗಳು ಹಾಗು ಶಾಲಾ ಕಾಲೇಜುಗಳು ವಿಜ್ಞಾನವನ್ನು ಪ್ರಚಾರ ಮಾಡಿ ಅವರ ನಿತ್ಯ ಜೀವನದಲ್ಲಿ ಅಳವಡಿಸುವಂತೆ ಪ್ರೇರೇಪಿಸಬೇಕು ಅನ್ನೋ ಉದ್ದೇಶದಿಂದ ಸರ್.ಸಿ.ವಿ.ರಾಮನ್‌ರ ಜನ್ಮ ಶತಾಬ್ದಿ ವರ್ಷವಾದ 1988ರಲ್ಲಿ ಈ ದೇಶಕ್ಕೆ ರಾಮನ್ನರು ನೊಬೆಲ್ ಪಾರಿತೋಷಕ ತಂದುಕೊಟ್ಟ ದಿನವಾದ ಫೆ.28ರಿಂದ ಮೊದಲ್ಗೊಂಡು "ರಾಷ್ಟ್ರೀಯ ವಿಜ್ಞಾನ ದಿನಾಚರಣೆ ಆಚರಿಸಲು ತೀರ್ಮಾನಿಸಿ ಪ್ರಾರಂಭಿಸಿದವು. ಅಂದಿನಿಂದ ಪ್ರತಿ ವರ್ಷದ ಫೆಬ್ರವರಿ 28ರಂದು 'ರಾಷ್ಟ್ರೀಯ ವಿಜ್ಞಾನ ದಿನಾಚರಣೆ" ಆಚರಿಸಲಾಗುತ್ತಿದೆ. ಆದರೆ ವಿಜ್ಞಾನ ದಿನಾಚರಣೆಯನ್ನು ಇನ್ನೂ ತುಂಬಾ ಜನಪ್ರಿಯಗೊಳಿಸಬೇಕಾದ ಅಗತ್ಯವಿದೆ.

**'ನೊಬೆಲ್' ರಾಮನ್ ಕೊಡುಗೆ**

"ರಾಷ್ಟ್ರೀಯ ವಿಜ್ಞಾನ ದಿನ" ರಾಮನ್ನರನ್ನು ನೆನಪಿಸಿಕೊಳ್ಳದೆ, ಅವರ ಪರಿಚಯ ಮಾಡಿಕೊಳ್ಳದೆ, ಅವರ ಸಂಶೋಧನೆ ತಿಳಿದುಕೊಳ್ಳದೆ ಪೂರ್ಣವಾಗುವುದಿಲ್ಲ.

ಜಗತ್ತಿನ ಶ್ರೇಷ್ಠ ವಿಜ್ಞಾನಿಗಳ ಸಾಲಿನಲ್ಲಿ ಸೇರುವ ಕೆಲವೇ ವಿಜ್ಞಾನಿಗಳಲ್ಲಿ ಸಿ.ವಿ.ರಾಮನ್ ಒಬ್ಬರು ಏಕೆಂದರೆ ತನ್ನ ದೇಶದ ಪ್ರಜೆಯಾಗಿಯೇ ಇದ್ದುಕೊಂಡು, ಅದೇ ದೇಶದ ಸಲಕರಣೆಗಳನ್ನು ಬಳಸಿಕೊಂಡು, ಅದೇ ನೆಲದಲ್ಲಿ ಸಂಶೋಧನೆ ಕೈಗೊಂಡು ನೊಬೆಲ್ ಬಹುಮಾನ ಪಡೆದ ಮೊದಲ ಹಾಗೂ ಏಕೈಕ 'ಏಷ್ಯ'ದ ವಿಜ್ಞಾನಿ. ಇವರ ನಂತರ ಹಲವಾರು ವಿಜ್ಞಾನಿಗಳು ನೊಬೆಲ್ ಪಾರಿತೋಷಕ ಗಳಿಸಿದರೂ ಅವರು ವಿದೇಶಿ ಪ್ರಜೆಗಳಾಗಿ ಇಲ್ಲವೇ ವಿದೇಶಿ ನೆಲದಲ್ಲಿ ಒಂಟಿಯಾಗೋ ಸಂಶೋಧನೆ ನಡೆಸಿದ್ದಾರೆ.

ಬಹುಮುಖ ವ್ಯಕ್ತಿತ್ವದ ಚಂದ್ರಶೇಖರ ವೆಂಕಟರಾಮನ್ 1888ರ ನವೆಂಬರ್ 7ರಂದು ತಮಿಳುನಾಡಿನ ತಿರುಚನಾ ಪಳ್ಳಿಯಲ್ಲಿ ಅಧ್ಯಾಪಕರ ಮಗನಾಗಿ ಜನಿಸಿ, ಹದಿನಾರು ವರ್ಷ ತುಂಬುವುದರೊಳಗಾಗಿ ಬಿ.ಎ. ಪದವಿಯನ್ನು ಪ್ರಥಮ ಸ್ಥಾನದಲ್ಲಿ ಪಡೆದರು. ಹತ್ತೊಂಬತ್ತು ವರ್ಷ ತುಂಬುವುದರೊಳಗೆ ಒಂದು ಸಂಶೋಧನಾ ಪ್ರಬಂಧ ಬರೆದು ಲಂಡನ್ನಿನ ಫಿಲಾಸಫಿಕಲ್ ಮ್ಯಾಗಜಿನ್‌ನಲ್ಲಿ ಪ್ರಕಟಿಸಿದರು. ಎಫ್‌ಸಿಎಸ್‌ಸಿ (ಪೆನಾನ್ಷಿಯಲ್ ಸಿವಿಲ್ ಸರ್ವಿಸ್) ಪರೀಕ್ಷೆಯನ್ನು ಪ್ರಥಮ ದರ್ಜೆನಯಲ್ಲಿ ಪಾಸು ಮಾಡಿ 20 ವರ್ಷ (1905) ತುಂಬುವುದರೊಳಗೆ ಭಾರತ ಸರ್ಕಾರದ ಹಿರಿಯ ಅಧಿಕಾರಿಯಾದರು. ತಮ್ಮ ಈ ಕೆಲಸದ ನಡುವೆಯೇ ಸಂಶೋಧನಾ ಕೆಲಸ ಮುಂದುವರೆಸಿದ ರಾಮನ್ 1917ರಲ್ಲಿ ಕೋಲ್ಕತ್ತಾ ವಿಶ್ವವಿದ್ಯಾಲಯದ ಪ್ರಾಧ್ಯಾಪಕರಾಗಿ 1924ರಲ್ಲಿ ಇಂಗ್ಲೆಂಡಿನ ರಾಯಲ್ ಸೊಸೈಟಿಯ ಫೆಲೋ ಆಗಿ ಆಯ್ಕೆಯಾದರು. 1930ರಲ್ಲಿ ಬೆಳಕಿನ ಚದುರುವಿಕೆ ಕುರಿತ ಸಂಶೋಧನೆಗೆ ನೊಬೆಲ್ ಪಾರಿತೋಷಕದ ನಂತರ ಇಂಗ್ಲೆಂಡಿನ ರಾಯಲ್ ಸೊಸೈಟಿ "ಸರ್" ಪದವಿ ಹಾಗೂ ಭಾರತ ಸರ್ಕಾರದ ಉನ್ನತ ಪ್ರಶಸ್ತಿಯಾದ ಭಾರತ ರತ್ನಗಳು ಇವರ ಕೊರಳ ಬಳಸಿ ತಮ್ಮ ಗೌರವವನ್ನು ಹೆಚ್ಚಿಸಿಕೊಂಡವು.

1933ರಲ್ಲಿ ಬೆಂಗಳೂರಿಗೆ ಬಂದು ಭಾರತೀಯ ವಿಜ್ಞಾನ ಮಂದಿರ ಅಂದರೆ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ (ಐಐಎಸ್‌ಸಿ)ಗೆ ಸೇರಿ ತಾವು ಗತಿಸುವವರೆವಿಗೂ (1970) ಅದರ ಅಭಿವೃದ್ಧಿಯಲ್ಲಿ ತಮ್ಮ ಕಾಲ ಸವೆಸಿದರು.

**ಸ್ವಾಭಿಮಾನ, ಅಚಲ ವಿಶ್ವಾಸ**

ಅಚಲ ವಿಶ್ವಾಸವುಳ್ಳ ಅತ್ಯಂತ ಆತ್ಮವಿಶ್ವಾಸ ಬಲ ಹೊಂದಿದ್ದ, ತ್ಯಾಗ ಮತ್ತು ಪರಿಶ್ರಮದ ಚೇತನ ಆಗಿದ್ದರು ರಾಮನ್. ವಿದೇಶಕ್ಕೆ ಹೋಗಿ ನೆಲೆಸಲು ಆಮಂತ್ರಣ ಬಂದಾಗ ತಾವು ಹೋಗಲೊಪ್ಪದೆ ಇಲ್ಲಿಯೇ ಸ್ಥಳಪೂರಿ ಸಂಶೋಧನೆ ಆರಂಭಿಸಿದರು.

ರಾಮನ್ ಕಡಿಮೆ ಎಂದರೆ ನೂರು ಬಾರಿ ನನಗೆ ನೊಬೆಲ್ ಬಹುಮಾನ ಬಂದೇ ಬರುತ್ತದೆ ಎಂದು ಜಗಜ್ಜಾಹಿರು ಪಡಿಸಿದ್ದರು. ಆದರೆ ಈ ಮಾತಿಗೆ ಅವರ ಆಪ್ತರು ಅಪಹಾಸ್ಯ ಮಾಡುತ್ತಿದ್ದರು. ಅವರು ತಮ್ಮ ಸಂಶೋಧನೆಯನ್ನು ನಿರೂಪಿಸಲು ಹೊರಟಾಗ ನೊಬೆಲ್ ಬಹುಮಾನ ತರುತ್ತೇನೆಂದು ಹೇಳೀ ಹಡಗಿನಲ್ಲಿ ಪ್ರಯಾಣ ಬೆಳೆಸಿದ್ದರು. ಅಷ್ಟು ಆತ್ಮವಿಶ್ವಾಸವಿತ್ತು ಅವರಿಗೆ ಅವರ ಸಂಶೋಧನೆ ಯಲ್ಲ. ಆದರೆ ಆ ನೊಬೆಲ್ ಬಹುಮಾನವನ್ನು ಬ್ರಿಟಿಷ್ ಧ್ವಜದಡಿಯಲ್ಲಿ ಪಡೆಯಬೇಕಾಗಿ ಬಂದಂತಹ ಅನಿವಾರ್ಯತೆಗೆ ಅವರಲ್ಲಿ ವಿಷಾದ ಕೊನೆಯವರೆಗೂ ಇತ್ತು.

ರಾಮನ್ ಪ್ರಯೋಗಗಳಿಗೆ ಬಳಕೆ ಮಾಡಿದ ಉಪಕರಣಗಳನ್ನು ಬಹುತೇಕ ತಾವೇ ರೂಪಿಸಿ ಕೊಳ್ಳುತ್ತಿದ್ದರು ಹಾಗು ಅವು ಸರಳವಾಗಿಯೂ ಇರುತ್ತಿದ್ದವು. ಅದರ ಬೆಲೆಗಳು ಸಹ ಕೆಲವು ನೂರುಗಳು ಮಾತ್ರ. ಅವರು ತಮ್ಮ ಸಂಶೋಧನೆ ಗಳ ಮೇಲೆ ಪೇಟೆಂಟ್ ಪಡೆಯಲೇ ಇಲ್ಲ.

ರಾಮನ್ನರ ಸಂಶೋಧನೆ ಪ್ರಕಟಗೊಂಡ ಹತ್ತು ವರ್ಷಗಳೊಳಗೆ ರಾಮನ್ ಪರಿಣಾಮದ ಮೇಲೆ 2000 ಸಂಶೋಧನಾ ಪ್ರಬಂಧಗಳು ಪ್ರಕಟಗೊಂಡವು, ರಾಮನ್ ಗತಿಸುವ ವೇಳೆಗೆ ಆ ಸಂಖ್ಯೆ ಹತ್ತು ಸಾವಿರವನ್ನು ದಾಟಿತ್ತು.

ವಿಜ್ಞಾನ ಕ್ಷೇತ್ರಕ್ಕೆ ವಿಜ್ಞಾನಿಯೊಬ್ಬನ ಕೊಡುಗೆಯ ಮಾತು ಬಂದಾಗ ಆತನ ಸಂಶೋಧನೆ ಸೋದರ ವಿಜ್ಞಾನಿಗಳ ಮೇಲೆ ಹಾಗೂ ಪ್ರಪಂಚದ ಒಟ್ಟು ವೈಜ್ಞಾನಿಕ ಪ್ರಗತಿಯ ಮೇಲೆ ಆತ ಬೀರಿದ ಪ್ರಭಾವ ಏನು ಎಂಬುದಾಗಿರುತ್ತದೆ. ಈ ದಿಸೆಯಲ್ಲಿ ರಾಮನ್ ಕೊಡುಗೆ ರಾಮನ್ ಪರಿಣಾಮದಷ್ಟೇ ದೊಡ್ಡದು.

ಆಹಮದ್ ಹಗರೆ, ಕಾರ್ಯದರ್ಶಿ
ಭಾರತ ಜ್ಞಾನವಿಜ್ಞಾನ ಸಮಿತಿ, ಹಾಸನ

## ಮಹತ್ವದ ಸಂಶೋಧನೆ

ಬೆಳಗಿನ ಬಿಸಿಲು ಕೋಲಿನಲ್ಲಿ ಧೂಳು ಕಣಗಳು ಮಿನುಗುತ್ತಾ ತೇಲಾಡುತ್ತಿರುವುದು ಕಾಣಿಸುತ್ತದೆ. ಅಂದರೆ, ಧೂಲಿನ ಕಣಗಳು ಬೆಳಕನ್ನು ಚದುರಿಸುತ್ತವೆ ಹಾಗೆ ಚದುರಿದ ಬೆಳಕು ನಮ್ಮ ಕಣ್ಣನ್ನು ತಲುಪುವುದರಿಂದ ಕಣಗಳು ನಮಗೆ ಕಾಣಿಸುತ್ತವೆ.

ನಮ್ಮ ವಾತಾವರಣದಲ್ಲಿ ಅಸಂಖ್ಯ ಧೂಳಿನ ಕಣಗಳು ಸೂಕ್ಷ್ಮಾತಿಸೂಕ್ಷ್ಮ ಆಕ್ಸಿಜನ್, ನೈಟ್ರೋಜನ್, ಸಲ್ಫರ್‌ನ ಕಣಗಳು ಇವೆ. ಇವುಗಳ ಮೇಲೆ ಸೂರ್ಯನ ಶ್ವೇತಕಿರಣ ಬಿದ್ದಾಗ ಆ ಕಿರಣಗಳನ್ನು ಚದುರಿಸುತ್ತವೆ. ಆಗ ಆ ಕಿರಣದೊಳಗೆ ಹುದುಗಿದ್ದ ಏಳು ಬಣಗಳು ಪಲ್ಲಟವಾಗುತ್ತವೆ. ಅದರಲ್ಲಿನ ಕೆಂಪು ಹಾಗೂ ಕಿತ್ತಳೆ ಕಿರಣಗಳು ಅತಿ ಕಡಿಮೆ ಚದುರುತ್ತವೆ. ನೇರಳೆ ಹಾಗು ನೀಲಿ ಕಿರಣಗಳು ಅತಿ ಹೆಚ್ಚು ಚದುರುತ್ತವೆ. ಇದಕ್ಕಾಗಿಯೇ ಆಕಾಶ ನಮಗೆ ನೀಲಿಯಾಗಿ ಕಾಣಿಸುವುದು. ವಾತಾವರಣ ದಾಟಿ ಹೊರಹೋದಾಗ ಅಥವಾ ಚಂದ್ರನಲ್ಲಿ ನಿಂತು ನೋಡಿದರೆ ಆಕಾಶ ಕಪ್ಪು ಕಾಣುತ್ತದೆ.

ಬೆಳಕು ಹೆಚ್ಚಾಗಿ ಚಿದುರಲಿ ಅಥವ ಕಡಿಮೆ ಚದುರಲಿ ಈ ಎರಡೂ ಸಂದರ್ಭಗಳಲ್ಲೂ ಚದುರಿದ ಬೆಳಕಿನ ಬಣ್ಣ ಬದಲಾಯಿಸುವುದಿಲ್ಲ. ಚದರಿ ಬಂದ ಬೆಳಕು ಅದೇ ಬಣ್ಣದ್ದಾಗಿರುತ್ತದೆ. ಈ ಬಗೆಯ ಚದುರುವಿಕೆಯನ್ನು ಬ್ರಿಟಿಷ್ ವಿಜ್ಞಾನಿ 'ರ‍್ಯಾಲೆ' ಅಧ್ಯಯನ ಮಾಡಿದ್ದರಿಂದ ಇದಕ್ಕೆ ರ‍್ಯಾಲೆಚದರಿಕೆ ಎಂದು ಹೆಸರು.

ಅನಿಲದ ಅಥವ ದ್ರಾವಣದ ಅಣುಗಳ ಮೇಲೆ ಬೀಳುವ ಬೆಳಕಿನ ಬಹುಭಾಗ ರ‍್ಯಾಲೆ ಚದರಿಕೆಗೆ ಒಳಗಾಗುವುದಾದರೂ ಅದರ ಸ್ವಲ್ಪ ಭಾಗ ಮಾತ್ರ ಬೇರೊಂದು ಬಗೆಯ ಚಿದುರಿಕೆಗೆ ಒಳಗಾಗುತ್ತದೆ. ಆಗ ಚದುರಿದ ಬೆಳಕು ಬಣ್ಣವನ್ನು ಬದಲಾಯಿಸುತ್ತೆ. ಆ ಬೆಳಕು ಮಸಕಾಗಿರುವುದರಿಂದ ಕಾಣಿಸುವುದಿಲ್ಲ. ಅದನ್ನು ನೋಡಲು ತಕ್ಕ ಸಲಕರಣೆಗಳು ಬೇಕು. 1928ರಲ್ಲಿ ಮೊದಲ ಬಾರಿಗೆ ತಕ್ಕ ಸಲಕರಣೆಗಳನ್ನು ತಯಾರಿಸಿ ರಾಮನ್ ಈ ಬೆಳಕು ಬದಲಾಗುವುದನ್ನು ತೋರಿಸಿದರು. ಈ ಬಗೆಯ ಚದುರುವಿಕೆಗೆ "ರಾಮನ್ ಚದರಿಕೆ", ಇದರ ಪರಿಣಾಮವಾಗಿ ಬೆಳಕಿನ ಬಣ್ಣ ಬದಲಾಯಿಸುವುದಕ್ಕೆ ರಾಮನ್ ಪರಿಣಾಮ ಎಂದು ಕರೆಯುತ್ತಾರೆ. ಈ ಸಶೋಧನೆ "ಬೆಳಕಿನ ಕಿರಣಗಳ ಚಲನೆಗೆ ಕ್ರಿಶ್ಚಿಯನ್ ಹಯ್ಗನ್ಸ್' (ನ್ಯೂಟನ್) ಪ್ಲಾಂಕ್‌ರ ನಡುವೆ ತಿಕ್ಕಾಟ ನಡೆಯುತ್ತಿದ್ದಾಗ ಸಹಾಯಕ್ಕೆ ಬಂತು. ಅದೇನೆಂದರೆ

ಬೆಳಕಿನ ಕಿರಣ ಅನ್ನೋದು ಕಣಗಳು ವೇಗವಾಗಿ ಚಲಿಸುತ್ತಿರುವ ಪ್ರವಾಹ ಎಂದು ನ್ಯೂಟನ್ ಅಭಿಪ್ರಾಯಪಟ್ಟ. ಆದರೆ ಆತನ ಸಮಕಾಲೀನ ಡಚ್ ವಿಜ್ಞಾನಿ ಕ್ರಿಶ್ಚಿಯನ್ ಹಯ್ಗನ್ಸ್, ಈ ವಾದ ಒಪ್ಪಲಿಲ್ಲ. ಬೆಳಕು ಅಲೆಯ ಸ್ವರೂಪದ ಎಂದು ಈತ ವಾದಿಸಿದ. ಬಹುಕಾಲ ಕಣ ಸಿದ್ಧಾಂತ, ಅಲೆ ಸಿದ್ಧಾಂತಗಳ ನಡುವೆ ತಿಕ್ಕಾಟ ಏರ್ಪಟ್ಟು 19ನೇ ಶತಮಾನದಂಚಿನ ಹೊತ್ತಿಗೆ ಬಹುಪಾಲು ವಿಜ್ಞಾನಿಗಳು ಹಯ್ಗನ್ಸ್‌ನ ಅಭಿಪ್ರಾಯವನ್ನೇ ಎತ್ತಿಹಿಡಿದರು.

ಒಂದು ಕೊಳಕ್ಕೆ ಕಲ್ಲೆಸೆದರೆ ಅದರಿಂದ ಉಂಟಾಗುವ ಅಲೆಗಳು ಚಲಿಸುವಾಗ ಅವರ ಹಾದಿಗೆ ಏನಾದರೂ ಅಡ್ಡ ಬಂದರೆ ಆ ಅಡಚಣೆಯ ಆಚೆ ಹಾಗೂ ಈಚೆ ಎರಡೂ ಬದಿಗಳಲ್ಲಿ ಅಲೆ ಬಾಗಿ ಮುಂದುವರೆಯುವುದನ್ನು ನೋಡಬಹುದು. ಶಬ್ಧದ ಅಲೆಗಳೂ ಹಾಗೆ ಅಡಚಣೆಯ ಅಂಚುಗಳಲ್ಲಿ ಬಾಗಿ ಮುಂದುವರೆಯುವುದರಿಂದ ಗೋಡೆಯ ಆಚೆ ನಿಂತು ಮಾತನಾಡುವವರ ಧ್ವನಿ ನಮಗೆ ಕೇಳಿಸುವುದು. ಬೆಳಕೂ ಕೂಡ ಇದೇ ಲಕ್ಷಣವನ್ನು ತೋರಿದ್ದರಿಂದ "ಅಲೆ ಸಿದ್ಧಾಂತ"ವನ್ನು ಒಪ್ಪಿಕೊಂಡರು.

ಆದರೆ ಜರ್ಮನ್ ವಿಜ್ಞಾನಿ ಮಾಕ್ಸ್‌ಪ್ಲಾಂಕ್ 20ನೇ ಶತಮಾನದ ಆರಂಭದ ವೇಳೆಗೆ ಈ ಎರಡೂ ಸಿದ್ಧಾಂತಗಳು ಸತ್ಯ. ಆದರೆ ಪೂರ್ಣ ಸತ್ಯವಲ್ಲ ಎಂದು ಅಬಿಪ್ರಾಯ ಪಟ್ಟು ಸೂರ್ಯನಿಂದ 'ಶಕ್ತಿ' ಶಾಖ ಹಾಗೂ ಬೆಳಕಿನ ರೂಪದ ... ಹೊರಸೂಸು ... ಹೊರಸೂಸುವುದಿಲ್ಲ. ಬಿಡಿ ಬಿಡಿಯಾದ ಪೊಟ್ಟಣಗಳಾಗಿ ಹೊರಸೂಸುವುದೆಂದು ತಿಳಿಸಿದ. ಶಕ್ತಿಯ ಅಂತಹ ಪೊಟ್ಟಣಗಳನ್ನು "ಕ್ವಾಂಟಮ್" ಎಂದು ಕರೆದ. ಈ ಸಿದ್ಧಾಂತ ನಿರೂಪಿಸಲು ಕಷ್ಟ ಪಡುತ್ತಿದ್ದಾಗ ರಾಮನ್ನರ ಪರಿಣಾಮ ಸಹಾಯಕ್ಕೆ ಬಂತು. ಅಲೆರೂಪದ ಬೆಳಕು ಕ್ವಾಂಟಮ್ ರೂಪದಲ್ಲಿ ಬರಲು ಬೆಳಕಿನ ರಶ್ಮಿ ಅಣುವಿನ ಮೇಲೆರಗಿ ಚದುರಿದಾಗ ಬಣ್ಣ ಬದಲಾಯಿಸುವುದಕ್ಕೆ ಕಾರಣ ಅದರ ತರಂಗಾಂತರ ಬದಲಾಗುತ್ತಿದೆ ಎಂದರ್ಥ. ಆ ತರಂಗದೂರ ಕಡಿಮೆಯಾದಷ್ಟು ಕ್ವಾಂಟಮ್‌ನಲ್ಲಿಯ ಶಕ್ತಿಯ ಪ್ರಮಾಣ ಹೆಚ್ಚು ಎಂದು ನಿರೂಪಿಸಿದ.

ಈ ಮೂರು ಸಿದ್ಧಾಂತ ಒಂದಕ್ಕೊಂದು ಪೂರಕ ಎಂದು ಅಂತಿಮವಾಗಿ 'ಕ್ವಾಂಟಮ್ ಸಿದ್ಧಾಂತ' ಬೆಳಕು ಕಂಡು ಬೌತ ಪ್ರಪಂಚಕ್ಕೆ ಕ್ರಾಂತಿಕಾರಿ ತಿರುವುದು ಕೊಡಲು "ರಾಮನ್ ಪರಿಣಾಮ" ಮಹತ್ತರ ಪಾತ್ರ ವಹಿಸಿತು. ಅಣುವಿನ ಆಂತರಿಕ ರಚನೆ ಕುರಿತ ಮಾಹಿತಿ ಕ್ವಾಂಟಮ್ ಹಾಗೂ ರಾಮನ್ ಪರಿಣಾಮದ ಮೂಲಕ ನಮಗೆ ದೊರಕುತ್ತದೆ. ರಸಾಯನ ವಿಜ್ಞಾನಕ್ಕೆ ಇದರಿಂದ ಮಹದುಪಕಾರವಾಗಿದೆ. ಯಾವುದೇ ಕೃತಕ ಪದಾರ್ಥ ತಯಾರಿಸುವಾಗ, ಜೀವವಿಜ್ಞಾನದ 'ಕ್ಲೋನಿಂಗ್' ಕ್ರಿಯೆಯಲ್ಲಿ ಈ ಎರಡೂ ಸಿದ್ಧಾಂತಗಳು ಬೇಕೇ ಬೇಕು.

ಕನ್ನಡಿ



ಕೆ.ಎಸ್.ವಿಮಲ

# ಕಾನೂನೆಂಬ ಕನ್ನಡಿ....

**ಕಾನೂನೇ ಎಲ್ಲವನ್ನೂ ಸರಿಪಡಿಸಿಕೊಟ್ಟು ಬಿಡುವುದೆಂಬ ಭಾವನೆಯೂ ಇದೆ. ಬಹಳ ಸಾರಿ ಇದು ಹುಸಿಯಾಗಿದ್ದುದು ಅನುಭವ. ಆದರೂ ಕಾನೂನು-ಅದರ ಬಳಕೆ, ಅದರ ಅಗತ್ಯ ಇವೆಲ್ಲವೂ ಈ ನೆಲದ ಪ್ರತಿಕ್ಷಣದ ಅವಶ್ಯಕತೆಗಳೇ.**

ಕನ್ನಡಿಯಲ್ಲಿ ಕಾಣುವುದು ಪ್ರತಿಬಿಂಬ, ಸಹಜವಾಗಿಯೇ ಪ್ರತಿಬಿಂಬದ ಆಕೃತಿ ಗನುಗುಣವಾಗಿಯೇ ಇರಬೇಕಾಗುತ್ತದೆ. ಒಟ್ಟು ಸಮಾಜದ ಓರೆ-ಕೋರೆಗಳನ್ನೆಲ್ಲ ಕಾನೂನೆಂಬ ಕನ್ನಡಿ ನೋಡಲು ಸಾಧ್ಯವಾಗಬೇಕು ಮತ್ತು ಕಣ್ಣು ಕಟ್ಟಿದ ತಕ್ಕಡಿ ನ್ಯಾಯದ ಪರವಾಗಿಯೇ ತೂಗಬೇಕು. ಇದು ಎಲ್ಲರ ನಿರೀಕ್ಷೆ. ಕಾನೂನೇ ಎಲ್ಲವನ್ನೂ ಸರಿಪಡಿಸಿಕೊಟ್ಟು ಬಿಡುವುದೆಂಬ ಭಾವನೆಯೂ ಇದೆ. ಬಹಳ ಸಾರಿ ಇದು ಹುಸಿಯಾಗಿದ್ದುದು ಅನುಭವ.

ಆದರೂ ಕಾನೂನು-ಅದರ ಬಳಕೆ, ಅದರ ಅಗತ್ಯ ಇವೆಲ್ಲವೂ ಈ ನೆಲದ ಪ್ರತಿಕ್ಷಣದ ಅವಶ್ಯಕತೆಗಳೇ. ನೆಲದ ಪರಿಸ್ಥಿತಿಗೆ ಅನುಗುಣವಾಗಿಯೇ ಹಲವಾರು ಕಾನೂನುಗಳು ಚಾಲ್ತಿಯಲ್ಲಿವೆ. ಅದು ಬಂದಿದ್ದೂ ಹೋರಾಟದಿಂದಲೇ. ಪ್ರತಿ ಹಂತದ ಬದಲಾವಣೆಗೆ ಅನುಗುಣವಾಗಿ ಕಾನೂನಿಗೆ ತಿದ್ದುಪಡಿಗಳು ಆಗುತ್ತಿವೆ.

**ಹರವು ವಿಸ್ತಾರ**

ಇತ್ತೀಚಿನ ದಶಕಗಳಲ್ಲಿ ಮಹಿಳಾ ಪರ ಅಥವಾ ಮಹಿಳೆಯರ ಕುರಿತ ಚರ್ಚೆಗಳ ಹರಹು ವಿಸ್ತಾರಗೊಳ್ಳುತ್ತಿದೆ. ಮಹಿಳಾ ಸಂಘಟನೆಗಳು ಮತ್ತು ಮಹಿಳಾ ಪರ ಚಿಂತನೆ ಮಾಡುವ ಪ್ರಜಾಪ್ರಭುತ್ವ ಶಕ್ತಿ, ವ್ಯಕ್ತಿಗಳ ನಿರಂತರ ಪ್ರಯತ್ನದ ಫಲವಾಗಿಯೇ ಮಹಿಳಾ ಪರ ವಿಚಾರಗಳು ಇಂದು ಮುಖ್ಯ ಸ್ಥಾನಕ್ಕೆ ಬಂದು ನಿಲ್ಲಲು ಸಾಧ್ಯವಾಗಿದೆ. ಅಂತೆಯೇ ಮಹಿಳಾ ಪರ ಕಾನೂನುಗಳು ಕೂಡ. ಹಿಂದೆಲ್ಲ ಒಟ್ಟು ಅಪರಾಧಗಳ ಭಾಗವಾಗಿಯೇ ಮಹಿಳೆಯರ ಮೇಲಿನ ದೌರ್ಜನ್ಯಗಳನ್ನು ಪರಿಗಣಿಸಿ. ಸಿ.ಆರ್.ಸಿ.ಪಿ., ಐ.ಪಿ.ಸಿ.,ಗಳ ಅಡಿಯಲ್ಲಿಗೆ ಗಮನಿಸಲಾಗುತ್ತಿತ್ತು. ಒಟ್ಟು ಸಮಾಜದ ಸಮಸ್ಯೆಗಳ ಭಾಗವಾಗಿಯೇ ಮಹಿಳೆಯರ ಸಮಸ್ಯೆಗಳನ್ನು ನೋಡಬೇಕೆಂಬುದನ್ನು ಗಟ್ಟಿಯಾಗಿ ಪ್ರತಿಪಾದಿಸುತ್ತಲೇ ಮಹಿಳೆಯರಿಗಾಗಿಯೇ ಕೆಲವು ನಿರ್ದಿಷ್ಟ ಕ್ರಮಗಳು ಜಾರಿಯಾಗಬೇಕೆನ್ನುವ ಒತ್ತಾಯದ ಫಲವಾಗಿ ಕೌಟುಂಬಿಕ ದೌರ್ಜನ್ಯ ತಡೆ ಕಾಯ್ದೆಯಂತಹ ನಾಗರೀಕ ಕಾನೂನುಗಳು ಜಾರಿಗೆ ಬರಲು ಸಾಧ್ಯವಾಗಿದೆ. ಲೈಂಗಿಕ ಕಿರುಕುಳ ತಡೆ, ದುಡಿಯುವ ಪ್ರದೇಶದಲ್ಲಿ ಲೈಂಗಿಕ ದೌರ್ಜನ್ಯ ತಡೆ ಮುಂತಾದವುಗಳ ಕುರಿತ ಕಾನೂನುಗಳು ಜಾರಿಯಾಗಲು ಪಾರ್ಲಿಮೆಂಟಿನ ಬಾಗಿಲಲ್ಲಿ ಕುಳಿತು ಕಾಯುತ್ತಿವೆ. ಇವುಗಳ ಸಾಲಿಗೆ ಸೇರಲು ಮತ್ತೊಂದು ಅತ್ಯಗತ್ಯ ಮತ್ತು ತುರ್ತಿನ ಆ್ಯಸಿಡ್ ಧಾಳಿಯ ಕುರಿತಾದ ಕಾನೂನೊಂದು ರಾಷ್ಟ್ರೀಯ ಮಹಿಳಾ ಆಯೋಗದ ಮೂಲಕ ಮಂಡಿತವಾಗಿದೆ. ಈಗಾಗಲೇ ಇರುವ ವರದಕ್ಷಿಣೆ ವಿರೋಧಿ ಕಾನೂನು, ಸ್ತ್ರೀ ಭ್ರೂಣ ಹತ್ಯೆ ನಿಷೇಧ ಕಾನೂನು (ಗರ್ಭ ಪೂರ್ವ ಮತ್ತು ಪ್ರಸವ ಪೂರ್ವ ಲಿಂಗ ಪತ್ತೆ ನಿಷೇಧ ಕಾನೂನು)ಮಹಿಳೆಯರನ್ನು ಅಸಭ್ಯವಾಗಿ ಚಿತ್ರಿಸುವುದನ್ನು ನಿಷೇಧಿಸುವ ಕಾನೂನು, ಕೌಟುಂಬಿಕ ದೌರ್ಜನ್ಯ ತಡೆ ಕಾನೂನು ಮುಂತಾಗಿ ಮಹಿಳೆಯರ ಮೇಲೆ ನಡೆಯುವ ದೌರ್ಜನ್ಯಗಳನ್ನು ನಿಲ್ಲಿಸಲೆಂದೇ ಬಂದು ಹಲವಾರು ಕಾನೂನುಗಳಿವೆ. ಈ ಎಲ್ಲಾ ಕಾನೂನುಗಳ ಕುರಿತು ಸಾಮಾನ್ಯ ಜನರಿಗೂ ಕನಿಷ್ಠ ತಿಳುವಳಿಕೆ ನೀಡಲು ಒಂದಿಷ್ಟು ಪ್ರಯತ್ನದ ಅಗತ್ಯವಿದೆ. ಕಾನೂನೇ ಎಲ್ಲವನ್ನೂ ಕೊಡಲಾರದು. ನ್ಯಾಯಾಲಯದಲ್ಲಿ ಎಲ್ಲರಿಗೂ ನ್ಯಾಯವೇ ಸಿಗದಿರಬಹುದಾದರೂ ನ್ಯಾಯಕ್ಕಾಗಿ ಹೋರಾಡುವ ಎಲ್ಲರೂ ನ್ಯಾಯದ ಹಾದಿಯಲ್ಲಿ ಇರುವ ತೊಂದರೆಗಳನ್ನು ನಿವಾರಿಸಲು ಪ್ರಯತ್ನಿಸಬೇಕು.

**ಸೂಕ್ಷ್ಮತೆಗಳು**

ಈ ವ್ಯವಸ್ಥೆಯ ಭಾಗವಾಗಿರುವ ಹಲವು ಮಜಲುಗಳನ್ನು ದಾಟಿಯೇ ಪ್ರಕರಣವೊಂದು ನ್ಯಾಯಾಲಯದ ಮೆಟ್ಟಿಲು ಹತ್ತುತ್ತದೆ. ನ್ಯಾಯದ ಕದ ತಟ್ಟುವಾಗ ಒದಗಿಸಬೇಕಾದ ಸಾಕ್ಷಿ, ಪುರಾವೆಗಳು, ಅದಕ್ಕಾಗಿ ನಡೆಸಬೇಕಾದ ಪ್ರಯತ್ನ ಪರಿಶ್ರಮ. ಅದಕ್ಕಾಗಿ ಕೆಲಸ ಮಾಡುವ ವ್ಯಕ್ತಿಗಳು, ಸಂಸ್ಥೆಗಳು ಹೊಂದಿರಬೇಕಾದ ಸೂಕ್ಷ್ಮ ಗ್ರಹಿಕೆಗಳು, ಸಂವೇದನೆಗಳು ಇವೆಲ್ಲವೂ ಅತ್ಯಂತ ಅಗತ್ಯ ಪರಿಕರಗಳಾಗಿ ಮಾರ್ಪಡುತ್ತವೆ. ಒಂದಕ್ಕೊಂದು ಕೊಂಡಿಯಂತೆ ಬೆಸೆದು ಕೊಳ್ಳಬೇಕಾದ ಈ ಅಂಶಗಳಲ್ಲಿ ಒಂದು ಸಣ್ಣ ಕೊರತೆಯೂ ಅಪರಾಧ ಎಸಗಿದ ವ್ಯಕ್ತಿಗೆ ದೊಡ್ಡ ಕೊಡುಗೆಯಾಗಿ ಮಾರ್ಪಡಬಹುದು. ಮತ್ತು ಆಗಲೇ ಅನ್ಯಾಯಕ್ಕೊಳಗಾದವರಿಗೆ ನ್ಯಾಯದ ದಾರಿ ಇನ್ನಷ್ಟು ಜಟಿಲವಾಗಿ ಬಿಡಬಹುದು. ಹಾಗಾದ ಹಲವು ಉದಾಹರಣೆಗಳು ನಮ್ಮ ಮುಂದಿವೆ. ಕಣ್ಣಿಗೆ ಎದ್ದು ಕಾಣುವ ದೌರ್ಜನ್ಯದ ಕುರುಹುಗಳನ್ನೂ ಎದುರಿಟ್ಟುಕೊಂಡೇ ಸಾಕ್ಷಿ-ಆಧಾರಗಳಿಲ್ಲವೆಂಬ ಕಾರಣಕ್ಕಾಗಿ ನ್ಯಾಯ ದೂರ ನಿಂತು ಬಿಟ್ಟ ಹಲವಾರು ಘಟನೆಗಳು ನಮ್ಮ ಮುಂದಿವೆ. ಬೆಂಗಳೂರಿನಲ್ಲಿಯೇ ನಡೆದ ಒಂದು ಆ್ಯಸಿಡ್ ದಾಳಿಯ ಪ್ರಕರಣ-ದಾಳಿಗೆ ಒಳಗಾದ ವ್ಯಕ್ತಿಗೆ ಮಾರಣಾಂತಿಕ ಗಾಯಗಳಾಗಿಲ್ಲವೆಂಬಂತಹ ಭಾವದಿಂದ ಅಥವಾ ಅವಳು ಜೀವನ ನಿರ್ವಹಿಸದಂತಹ ಸಂದರ್ಭ ನಿರ್ಮಾಣವಾಗಿಲ್ಲ ಎಂಬ ಕಾರಣದಿಂದ ಧಾಳಿ ಎಸಗಿದ ವ್ಯಕ್ತಿಗೆ ಅವರ ಎಸಗಿದ ಅಪರಾಧಕ್ಕೆ ಸರಿಯಾದ ಶಿಕ್ಷೆಯಾಗಲಿಲ್ಲ. ನ್ಯಾಯದ ಕಣ್ಣಿಗೆ ಕಟ್ಟಿದ ಬಟ್ಟೆ ಇಲ್ಲಿ ನೊಂದವರಿಗೆ ವರವೋ ಶಾಪವೋ? ಹಾಗೆಯೇ ಹಲವಾರು ಅತ್ಯಾಚಾರದಂತಹ ಪ್ರಕರಣಗಳಲ್ಲಿ ನಾಳೆ ತನಗೆ ನ್ಯಾಯಬೇಕೆಂದರೆ ಈಗ ತನ್ನ ಮೇಲಾದ ಹೀನಕೃತ್ಯದ ಕುರುಹುಗಳನ್ನು ಕಾಪಾಡಬೇಕೆಂಬ ಅರಿವಿನಲ್ಲಿಯೇ ದೌರ್ಜನ್ಯಕ್ಕೆ ಒಳಗಾದ ವ್ಯಕ್ತಿ ವ್ಯವಹರಿಸಬೇಕೆಂಬುದು ಈ ನೆಲದ ನಿರೀಕ್ಷೆ. ಯಾವುದೋ ಕಾರಣದಿಂದ ಇದು ಸಾಧ್ಯವಾಗದಿದ್ದರೂ ಆಕೆಗೆ ನ್ಯಾಯ ಗಾವುದ ದೂರ. ಇಲ್ಲಿ ಥಟ್ಟನೆ ನೆನಪಿಗೆ ಬರುವುದು ಬಾಂವ್ರಿ ದೇವಿಯ ಪ್ರಕರಣ. ಇಂದು ವಿವಿಧ ಕಛೇರಿಗಳಲ್ಲಿ ಶಿಕ್ಷಣ ಸಂಸ್ಥೆಗಳಲ್ಲಿ ಕೆಲಸ ಮಾಡುವ ಮಹಿಳೆಯರ ಮೇಲೆ ಲೈಂಗಿಕ ದೌರ್ಜನ್ಯಗಳಾಗದಂತೆ ತಡೆಯುವ ಕಾನೂನಾಗಲು ಕಾಯುತ್ತ ಕುಳಿತಿರುವ ಪ್ರಸಕ್ತ ಸುಪ್ರಿಂಕೋರ್ಟ್‌ನ ಆದೇಶವಾಗಿ ಜಾರಿಯಲ್ಲಿರುವ ಮಸೂದೆಯ ಅಡಿಪಾಯ ಈ ಪ್ರಕರಣ. ಆದರೆ ಅದು ಈ ಹಂತ ತಲುಪುವಂತಾಗುವ ಮುನ್ನ ಭಾಂವ್ರಿದೇವಿ ಎದುರಿಸಿದ ಸಮಸ್ಯೆಗಳು ನೂರು. ಸರ್ಕಾರಿ ಕಛೇರಿಗಳು, ಪೋಲೀಸ್ ಠಾಣೆಗಳು ಮತ್ತಿತರ ನ್ಯಾಯ ನೀಡುವ ಸಂಸ್ಥೆಗಳು ಬಾಂವ್ರಿಯ ಪಾಲಿಗೆ ರಕ್ಷಕರಾಗಿ ಬಾರದದಿದ್ದುದು. ಈಗ ಇತಿಹಾಸ' -ಹಾಗೆಂದೇ ಕಾನೂನು ಎಷ್ಟೇ ಶಕ್ತಿಯುತವಾಗಿದ್ದರೂ ಅದರ ಜಾರಿ ಮಾಡುವ ವ್ಯಕ್ತಿಗಳು, ಶಕ್ತಿಗಳು ಎಷ್ಟು ಸಂವೇದನಾಶೀಲತೆ ಹೊಂದಿರುತ್ತಾರೆಂಬುದರ ಮೇಲೆ ನ್ಯಾಯದ ತಕ್ಕಡಿಯೂ ತಾಗುತ್ತದೆ. ಆದ್ದರಿಂದಲೇ ಕಾನೂನು ರಚನೆಗೆ ನಡೆಸಿದ ಪ್ರಯತ್ನ, ಸಮರ್ಪಕ ಜಾರಿಗಾಗಿಯೂ ಮುಂದುವರೆಯಲೇ ಬೇಕಾಗುತ್ತದೆ. ಇಲ್ಲದಿದ್ದಲ್ಲಿ ನ್ಯಾಯದ ಕಣ್ಣು ಕುರುಡೇ.....

# ಅಕ್ರಮ ದಂಧೆಗಳ ತಾಣ ಹಾಸನ....

ಪುಟ 8 ರಿಂದ

ಅವ್ಯಾಹತವಾಗಿ ನಡೆಯುತ್ತಿದ್ದು ಇದರ ಹಿಂದಿರುವ ರಾಜಕೀಯ ಶಕ್ತಿಗಳನ್ನು ಮಟ್ಟಹಾಕುವಲ್ಲಿ ಇಲಾಖಾ ಅಧಿಕಾರಿಗಳು ವಿಫಲರಾಗಿದ್ದಾರೆ. ಕಾಡು ಉತ್ಪನ್ನಗಳ ಲೂಟಿ, ಮರಗಳ್ಳತನ, ಕಾಡುಪ್ರಾಣಿಗಳ ಅವ್ಯಾಹತ ಬೇಟೆಯಿಂದಾಗಿ ಕಾಡುಪ್ರಾಣಿಗಳ ಚರ್ಮಗಳು, ಗುಂಡುದಾಳಿಯ ಕುರುಹುಗಳು, ಕಾಡಿನ ಒಳಗೆ ಕಾಣಸಿಗುತ್ತವೆ. ವರ್ಷಪೂರ್ತಿ ಕಾಡಿನ ಒಳಗೆ ನಡೆಯುತ್ತಿರುವ ಅಕ್ರಮ ಚಟುವಟಿಕೆ ಹೊರ ಪ್ರಪಂಚಕ್ಕೆ ತಿಳಿಯುವುದೇ ಇಲ್ಲ. ಈ ಬಗ್ಗೆ ತಿಳಿದುಕೊಳ್ಳಬೇಕಾದ ಅರಣ್ಯ ಇಲಾಖಾ ಸಿಬ್ಬಂದಿಗಳು ಈ ದಟ್ಟ ಕಾಡಿನೊಳಗೆ ಮಾಯವಾಗಿದ್ದಾರೆಯೇ ಎನ್ನುವುದು ಜಿಲ್ಲೆಯ ನಾಗರಿಕರ ಪ್ರಶ್ನೆ.

**ಮರಳು ಮಾಫಿಯಾ**

ಇವೆಲ್ಲಾ ದಂಧೆಗಳ ಮಧ್ಯೆ ಇತ್ತೀಚೆಗೆ ಶರವೇಗದಲ್ಲಿ ಬೆಳೆದಿರುವುದೆಂದರೆ ಮರಳು ವ್ಯವಹಾರ ಈಗ ಮಾಫಿಯಾ ಆಗಿ ಮಾರ್ಪಟ್ಟಿರುವುದು. ದಿನನಿತ್ಯ ಅಗತ್ಯ ಪರವಾನಗಿಯಲ್ಲಿ ಹತ್ತು ಲೋಡ್ ಮರಳು ಹೊರಗೆ ಹೋದರೆ ನೂರಾರು ಲೋಡ್ ಮರಳು ಅಕ್ರಮವಾಗಿ ಹೊರಸಾಗುತ್ತಿದೆ ಇದೇನು ಗುಟ್ಟಾಗಿ ಉಳಿದಿಲ್ಲ. ಆದರೆ ಎಚ್ಚೆತ್ತುಕೊಳ್ಳಬೇಕಾದವರು ಮೌನ ವಹಿಸಿರುವುದು ಸಹ ಅಧಿಕಾರಿಗಳ ವೈಫಲ್ಯದ ಸರಮಾಲೆಗೆ ಒಂದು 'ಕೊಂಡಿ' ಅಷ್ಟೆ.

ನಗರದ ಜನತೆಯ ನೆಮ್ಮದಿ ಕೆಡಿಸಿದ ನಗರದ ಹೊರವಲಯದ ಮತ್ತು ರಾಮನಾಥಪುರ ಪೆಟ್ರೋಲ್ ಬಂಕ್‌ನಲ್ಲಿ ನಡೆದ ದರೋಡೆ ಮತ್ತು ಭೀಕರ ಹತ್ಯೆ ಇನ್ನು ಜನರ ಮನಸ್ಸಿನಿಂದ ಮಾಸಿಲ್ಲ. ಸುದೀರ್ಘ ದಿನಗಳ ನಂತರ ಒಂದಿಬ್ಬರು ದರೋಡೆಕೋರರು ಸಿಕ್ಕಿಬಿದ್ದರೂ, ಕೃತ್ಯದ ಬಗ್ಗೆ ಸರಿಯಾದ ತನಿಖೆ ಇಲ್ಲದೆ ರಾತ್ರಿ ಪಾಳೆಯದಲ್ಲಿ ಬಂಕ್‌ನಲ್ಲಿ ಕೆಲಸ ಮಾಡುತ್ತಿರುವ ಕಾರ್ಮಿಕರು ತಮ್ಮ ಹೊಟ್ಟೆಪಾಡಿಗಾಗಿ ಭಯದಿಂದ ಕೆಲಸ ಮಾಡಬೇಕಾಗಿರುವುದು ಅನಿವಾರ್ಯವಾಗಿದೆ.

**'ಶಿ...ರಾಡಿ' ಘಾಟ್**

ಜಿಲ್ಲೆಯ ಗಡಿಭಾಗವಾಗಿದ್ದು ಅಗಾಧ ಪ್ರಕೃತಿ ಸೌಂದರ್ಯವನ್ನು ಹೊಂದಿರುವ ಶಿರಾಡಿಘಾಟ್, ಈಗ ಕೊಲೆ ಮಾಡಿದ ಶವಗಳನ್ನು ಹಾಕುವ ಸ್ಥಳವಾಗಿ ಮಾರ್ಪಟ್ಟಿದೆ. ಬೆಂಗಳೂರು ಸೇರಿದಂತೆ ಜಿಲ್ಲೆಯ ಸುತ್ತಮುತ್ತಲಿನ ಜಿಲ್ಲೆಯಲ್ಲಿ ನಡೆದಿರುವ ಹತ್ಯೆ ಕೃತ್ಯಗಳ ಶವಗಳನ್ನು ರಾತ್ರೋರಾತ್ರಿ ಶಿರಾಡಿ ಘಾಟ್‌ಗೆ ತಂದಿರುವ ಪ್ರಕರಣಗಳು ಹಲವಾರು ಇವೆ. ಕಳೆದೆರಡು ವರ್ಷಗಳ ಹಿಂದೆ ಮೈಸೂರು ದಿವಾನರ ಮೊಮ್ಮಗಳನ್ನು ಬೆಂಗಳೂರಿನಲ್ಲಿ ಕೊಲೆ ಮಾಡಿ ಶವವನ್ನು ಇದೇ ಸ್ಥಳಕ್ಕೆ ಹಾಕಿದ್ದಾಗ ರಾಜ್ಯಾದ್ಯಂತ ಶಿರಾಡಿಘಾಟ್ ಹೆಸರು ಪ್ರಚಾರದಲ್ಲಿತ್ತು. ಇದಲ್ಲದೆ ಕಳೆದ ವರ್ಷ ಕಾಲ್ ಸೆಂಟರ್ ಉದ್ಯೋಗಿ ತಾನಿಯಾ ಬ್ಯಾನರ್ಜಿಯನ್ನು ರಾಜ್ಯದ ರಾಜಧಾನಿಯಲ್ಲಿ ಭೀಕರವಾಗಿ ಹತ್ಯೆ ಮಾಡಿ ಶವವನ್ನು ಈ ಸ್ಥಳದಲ್ಲಿ ಹಾಕಿರುವುದು ಕೆಲವು ದಿನಗಳ ನಂತರ ಬಹಿರಂಗವಾಗಿತ್ತು. ಇವೆಲ್ಲಾ ಶ್ರೀಮಂತರ ಮಕ್ಕಳು ಎನ್ನುವ ಕಾರಣಕ್ಕಾಗಿ ಪ್ರಚಾರವಾದರೆ ಇತರ ಕಾರಣಕ್ಕಾಗಿ ಕೊಲ್ಲಲ್ಪಟ್ಟ ಅಮಾಯಕರ ಎಷ್ಟು ಶವಗಳು ಇಲ್ಲಿ ಬಂದುಬಿದ್ದಿದೆ ಎನ್ನುವುದು ನಿಗೂಢವಾಗಿದೆ. ಒಂದು ತಿಂಗಳ ಹಿಂದೆ ಇಲ್ಲಿನ ಎತ್ತಿನಹಳ್ಳದ ರೈಲ್ವೆ ಹಳಿಯ ಮೇಲೆ ಸುಮಾರು 20ರಿಂದ 22 ವರ್ಷ ವಯಸ್ಸಿನ ಯುವತಿಯನ್ನು ಮುಖವನ್ನು ಸಂಪೂರ್ಣವಾಗಿ ಜಜ್ಜಿ ಇದೇ ಸ್ಥಳಕ್ಕೆ ತಂದು ಹಾಕಿದರೂ ಇಂದಿಗೂ ಆಕೆ ಯಾರು ಎಂದು ಗುರುತಿಸಲು ಸಾಧ್ಯವಾಗಿಲ್ಲ. ಇದೇ ರೀತಿ ಬೇರೆ ಜಿಲ್ಲೆಯಲ್ಲಿ ನಡೆದ ಹಲವಾರು ಕೊಲೆಯಾದ ಅದೆಷ್ಟೋ ಅಮಾಯಕರ ಶವಗಳು ಅನಾಥವಾಗಿ ಇಲ್ಲಿ ಬಿದ್ದಿರುವ ಬಗ್ಗೆ ಅನುಮಾನ ಉಳಿದಿಲ್ಲ. ಫಲವಾಗಿ ಶೋಧಿಸಿದಾಗ ಸಿಕ್ಕಿರುವುದು ಕೇವಲ ಅವಶೇಷಗಳ ರೂಪದ ಮೂಳೆಗಳು ಮಾತ್ರ. ಅಪರಾಧಿಗಳು ಕೃತ್ಯವೆಸಗಿ ಪರ ಜಿಲ್ಲೆಯಿಂದ ಈ ಜಿಲ್ಲೆಗೆ ಶವಗಳನ್ನು ಸಾಗಿಸುವಾಗ ಜಿಲ್ಲೆಯ ಗಡಿಭಾಗದಲ್ಲಿರುವ ತಪಾಸಣಾ ಕೇಂದ್ರದ ಪೊಲೀಸರು ಮತ್ತು ಹೆದ್ದಾರಿ ಗಸ್ತು ಪೊಲೀಸರು ಯಾವ "ಘನ ಕಾರ್ಯ"ದಲ್ಲಿದ್ದರು ಎನ್ನುವ ಬಗ್ಗೆ ಇಲಾಖೆಯೇ ಉತ್ತರ ನೀಡಬೇಕಾಗಿದೆ.

ಜಿಲ್ಲೆಯಲ್ಲಿ ಇಂತಹ ಅಪರಾಧ ಪ್ರಕರಣಗಳು ಅಧಿಕಾರಿಗಳ ವೈಫಲ್ಯದಿಂದ ನಡೆದಿದ್ದರೂ ಕೆಲವೊಂದು ರಾಜಕೀಯ ಒತ್ತಡವೂ ಕಾರಣವಿದ್ದಿರಬಹುದು. ಆದರೆ ಪ್ರಕರಣದ ಭೀಕರತೆಯನ್ನು ಕಡಿಮೆ ಮಾಡುವಲ್ಲಿ ಮತ್ತು ಮಟ್ಟಹಾಕುವಲ್ಲಿ ಪೊಲೀಸ್ ಅಧಿಕಾರಿಗಳ ವೈಫಲ್ಯ ಎದ್ದು ಕಾಣುತ್ತಿದೆ. ಇಂತಹ ಹಲವಾರು ಸವಾಲುಗಳನ್ನು ಎದುರಿಸಿ, ಇಲಾಖೆಯ ಕಿರಿಯ ಅಧಿಕಾರಿಗಳ ಜಡ್ಡುತನವನ್ನು ಹೋಗಲಾಡಿಸಿ ಚುರುಕುಗೊಳಿಸಬೇಕಾದ ಬಹುಮುಖ್ಯ ಅನಿವಾರ್ಯತೆ ನೂತನವಾಗಿ ಆಗಮಿಸಿರುವ ಪೊಲೀಸ್ ಮುಖ್ಯಾಧಿಕಾರಿಯಾದ ಶರತ್ ಚಂದ್ರರವರಿಗಿದೆ ಮತ್ತು ಜಿಲ್ಲಾಡಳಿತಕ್ಕಿದೆ.

ರಾಜ್ಯದಲ್ಲಿ ರಾಷ್ಟ್ರಪತಿ ಆಡಳಿತವಿದ್ದರೂ ಜಿಲ್ಲಾಡಳಿತ ರಾಜಕೀಯ ಕಪಿಮುಷ್ಠಿಯಿಂದ ಹೊರಬಂದಹಾಗಿಲ್ಲ. ಜಿಲ್ಲಾಡಳಿತ ಸಂಪೂರ್ಣವಾಗಿ ರಾಜಕೀಯ ಹಿಡಿತದಿಂದ ಹೊರಬಂದರೆ ಮಾತ್ರ ಜಿಲ್ಲೆಯ ಜನತೆ ನೆಮ್ಮದಿಯಿಂದಿರಲು ಸಾಧ್ಯ. ಅದೇ ರೀತಿ ನಿರಾತಂಕವಾಗಿ ನಡೆಯುತ್ತಿರುವ ಅಕ್ರಮ ದಂಧೆಗಳಿಗೆ ಬೆಂಬಲ ನೀಡಿ ಕೈ 'ಬಿಸಿ' ಮಾಡಿಕೊಳ್ಳುತ್ತಿರುವ ಪೊಲೀಸರ ಬಗ್ಗೆ ಮಾಹಿತಿ ಸಂಗ್ರಹಿಸಿ ಜಡ್ಡುಗಟ್ಟಿದ ಪೊಲೀಸ್ ವ್ಯವಸ್ಥೆಗೆ ಮತ್ತು ಅಕ್ರಮ ದಂಧೆ ನಡೆಸುತ್ತಿರುವ ದಂಧೆಕೋರರಿಗೆ ಸರಿಯಾದ 'ಬಿಸಿ' ಮುಟ್ಟಿಸಬೇಕಾದ ಕೆಲಸ ನೂತನ ಎಸ್.ಪಿ.ಯವರಿಂದ ಆಗಬೇಕಾಗಿದ್ದು ಈ ಬಗ್ಗೆ ಜಿಲ್ಲೆಯ ಜನತೆ ಕಾದುನೋಡುತ್ತಿದ್ದಾರೆ.

## ಕೊಡಗು

**ಕೊಡಗಿನ ವಿರಾಜಪೇಟೆಯಲ್ಲಿ ರವಿರಾಜ್ ಗ್ಯಾಸ್ ಏಜೆನ್ಸಿಯವರು ಅಡುಗೆ ಅನಿಲ ವಿತರಣೆಯಲ್ಲಿ ನಡೆಸುತ್ತಿರುವ ವ್ಯಾಪಕ ಭ್ರಷ್ಟಾಚಾರ ಅಕ್ರಮಗಳನ್ನು ಪತ್ತೆ ಮಾಡಿರುವ ಈ ವಿಧಾನ ಇತರೆ ಹಲವು ಜಿಲ್ಲೆಗಳಿಗೂ 'ಮಾದರಿ' ಆಗಬಹುದು.**

# ಅಡುಗೆ ಅನಿಲ ಕೊರತೆಯೂ ವಿತರಣೆ ಹೆಸರಿನ ಭ್ರಷ್ಟ ಜಾಲವೂ

**ಡಾ. ದುರ್ಗಾಪ್ರಸಾದ್**

ಅಡುಗೆ ಅನಿಲ ಒಂದು ಅಗತ್ಯ ಸರಕೆಂದು ಅಂಗೀಕರಿಸಿರುವ ಕೇಂದ್ರ ಸರ್ಕಾರ ಅದಕ್ಕೆ ಸಬ್ಸಿಡಿ ಕೊಟ್ಟು ತಾನು ನೇಮಿಸಿದ ಏಜೆನ್ಸಿಗಳ ಮೂಲಕ ವಿತರಿಸುತ್ತಿದೆ. ಈ ಮೊದಲು ಇಪ್ಪತ್ತೊಂದು ದಿನಕ್ಕೆ ಒಂದು ಸಿಲಿಂಡರ್ ಗ್ರಾಹಕನಿಗೆ ಸಿಗುತ್ತಿತ್ತು. ಆದರೆ ಈಗ ಮೂವತ್ತು ದಿನಕ್ಕೆ ಒಂದು ಸಿಲಿಂಡರ್ ಗ್ರಾಹಕನಿಗೆ ಕೊಡಲಾಗುತ್ತಿದೆ.

ಸಹಾಯಧನ ಕೊಡುವುದರಿಂದ ಸರ್ಕಾರಕ್ಕೆ ಅಪಾರ ಹೊರೆಯಾಗುತ್ತಿದೆ ಎಂದು ಸರ್ಕಾರ ಹೇಳಿಕೊಳ್ಳುತ್ತಿದೆ. ಸರಬರಾಜನ್ನು ನಿಭಾಯಿಸಲು ಸಿಲಿಂಡರ್‌ಗಳನ್ನು ರಫ್ತು ಮಾಡಿ ಕೊಳ್ಳಲಾಗುತ್ತಿದೆ. ಹಾಗಿದ್ದರೂ ಈಗ ಗ್ರಾಹಕರಿಗೆ ಇಪ್ಪತ್ತೊಂದು ದಿನಕ್ಕೆ ಕೊಡಬೇಕಾದ ಸಿಲಿಂಡರ್‌ನ್ನು ಮೂವತ್ತು ದಿನಕ್ಕೆ ಒಂದರಂತೆ ಕೊಡಲಾಗುತ್ತಿದೆ. ಅದನ್ನು ಏಜೆನ್ಸಿಯವರು ಮೂವತ್ತು ದಿನಕ್ಕೆ ಬುಕ್ ಮಾಡಿಸಿ ಅನಂತರ ಎಂಟರಿಂದ ಹದಿನೈದು ದಿನ ತಡ ಮಾಡಿಯೇ ಕೊಡುತ್ತಿದ್ದಾರೆ.

**ಕಾಳಸಂತೆ**

ಇಂದಿನ ಈ ಬಿಕ್ಕಟ್ಟಿಗೆ ಸಿಲಿಂಡರ್ ಕಾಳ ಸಂತೆಯಲ್ಲಿ ವ್ಯಾಪಕವಾಗಿ ಮಾರಾಟವಾಗುತ್ತಿರುವುದೇ ಕಾರಣವಾಗಿದೆ ಎಂದು ಎಲ್ಲರೂ ಹೇಳುತ್ತಾರೆ. ಆದರೆ ಈ ಕಾಳ ಸಂತೆ ದಂಧೆ ಮತ್ತು ಅದರ ಪರಿಣಾಮವಾಗಿ ಸೃಷ್ಟಿಯಾಗಿರುವ ಬಿಕ್ಕಟ್ಟಿನ ಪ್ರಮುಖ ಖಳ ನಾಯಕ ಏಜೆನ್ಸಿಯವರೇ ಆಗಿದ್ದಾರೆ. ಇದನ್ನು ತಿಳಿದುಕೊಳ್ಳುವುದಕ್ಕೆ ಸಹಾಯಕವಾದ ಒಂದು ನಿರ್ದಿಷ್ಟ ಉದಾಹರಣೆಯನ್ನು ಈ ಕೆಳಗೆ ವಿವರಿಸಲಾಗುತ್ತಿದೆ. ಕೊಡಗು ಜಿಲ್ಲೆಯ ವಿರಾಜಪೇಟೆಯಲ್ಲಿ ಒಂದು ಗ್ಯಾಸ್ ಏಜೆನ್ಸಿ ಇದೆ. ಅವರು ತಮಗೆ ಹನ್ನೆರಡು ಸಾವಿರಕ್ಕಿಂತಲೂ ಹೆಚ್ಚು ಗ್ರಾಹಕರಿದ್ದಾರೆಂದು ಹೇಳಿಕೊಳ್ಳುತ್ತಾರೆ. (ಅವರಿಗೆ ಇಪ್ಪತ್ತು ಸಾವಿರ ಗ್ರಾಹಕರಿದ್ದಾರೆಂದು ಸ್ಥಳೀಯ ಪತ್ರಿಕೆಯೊಂದರಲ್ಲಿ ಇತ್ತೀಚೆಗೆ ಬರೆಯಲಾಗಿತ್ತು).

ಅವರು ದಿನ ನಿತ್ಯ ನೂರಕ್ಕೂ ಹೆಚ್ಚು ಸಿಲಿಂಡರ್‌ಗಳನ್ನು ವಿರಾಜಪೇಟೆಯಿಂದ ಹತ್ತು ಕಿ.ಮೀ. ದೂರವಿರುವ ಗೋಣಿ ಕೊಪ್ಪಲಿಗೂ, ಅಷ್ಟೇ ದೂರವಿರುವ ಸಿದ್ದಾಪುರಕ್ಕೂ ಕೊಂಡೊಯ್ಯುತ್ತಿದ್ದಾರೆ. ಅವರನ್ನು ಕೇಳಿದರೆ ತಮಗೆ ಗೋಣಿ ಕೊಪ್ಪಲಿನಲ್ಲಿ, ಸಿದ್ದಾಪುರದಲ್ಲಿ ಹಳೆಯ ಕಾಲದ ಗ್ರಾಹಕರಿದ್ದಾರೆಂದೂ ಅವರಿಗೆ ತಮ್ಮಿಂದಲೇ ಸಿಲಿಂಡರ್ ಬೇಕೆಂದು ಆಸೆ ಎಂದೂ ಅವರ ಅಗತ್ಯವನ್ನು ಪೂರೈಸಲು ತಾವು ಕೊಂಡೊಯ್ಯುತ್ತಿರುವುದಾಗಿಯೂ ಸತ್ಯ ಹರಿಶ್ಚಂದ್ರನಂತೆ ವಾದಿಸುತ್ತಾರೆ.

ಆದರೆ ಗೋಣಿಕೊಪ್ಪಲು, ಭಾಗಕ್ಕೂ ಸಿದ್ದಾಪುರ ಪ್ರದೇಶಕ್ಕೂ ಅವರ ಗ್ರಾಹಕ ಪಟ್ಟಿ ದೊರೆತು ಅದನ್ನು ಅವಲೋಕಿಸಿದಾಗ ಅದರಲ್ಲಿ ಏಜೆನ್ಸಿಯವರ ವಂಚನೆ ಬಯಲಾಗುತ್ತಿದೆ.

ಇವರ ಪಟ್ಟಿಯ ಪ್ರಕಾರ ಗೋಣಿಕೊಪ್ಪಲು ಮತ್ತು ಸಿದ್ದಾಪುರ ಪ್ರದೇಶಗಳಲ್ಲಿ ಅವರಿಗಿರುವ ಗ್ರಾಹಕರ ಸಂಖ್ಯೆ ಈ ರೀತಿ ಇದೆ. ಗೋಣಿಕೊಪ್ಪಲು 542, ಪೊನ್ನಂಪೇಟೆ 143, ಶ್ರೀಮಂಗಲ 55, ಸಿದ್ದಾಪುರ 275. ಅಂದರೆ ಈ ಪ್ರದೇಶದಲ್ಲಿ ಅವರಿಗಿರುವ ಒಟ್ಟು ಗ್ರಾಹಕರ ಸಂಖ್ಯೆ 1015. 30 ದಿನಗಳಿಗೊಂದರಂತೆ ತಮ್ಮ ಗ್ರಾಹಕರಿಗೆ ಸಿಲಿಂಡರ್ ಕೊಡಲು ಅವರು ಒಂದು ದಿನಕ್ಕೆ 34 ಸಿಲಿಂಡರ್‌ಗಳನ್ನು ಒಯ್ದರೆ ಸಾಕು.

ಆದರೆ ಅವರೇ ಕೊಟ್ಟ ಪಟ್ಟಿಯ ಒಳಹೊಕ್ಕರೆ ಕೆಲವು ಗಮನಾರ್ಹವಾದ ಅಂಶಗಳು ಕಂಡುಬರುತ್ತದೆ. ಗೋಣಿಕೊಪ್ಪಲಿನ ಗ್ರಾಹಕರ ಪಟ್ಟಿಯಲ್ಲಿ ಸುಮಾರು 22 ವಿಳಾಸಗಳು ವಿರಾಜಪೇಟೆ ಪಟ್ಟಣದ ವಿಳಾಸಗಳು ಸಿದ್ದಾಪುರದ ಗ್ರಾಹಕರ ಪಟ್ಟಿಯಲ್ಲಿ 54 ವಿಳಾಸಗಳು ವಿರಾಜಪೇಟೆಯವುಗಳು.

ಈ 76 (22-54) ವಿಳಾಸಗಳನ್ನು ಕಳೆದರೆ (1015-76) 939 ವಿಳಾಸಗಳು ಉಳಿಯುತ್ತವೆ. ಈ ಪಟ್ಟಿಯಿಂದ ಕಮರ್ಷಿಯಲ್ ಸಿಲಿಂಡರ್‌ಗಳ ಸಂಖ್ಯೆಯನ್ನು ಕಳೆಯಬೇಕು. ಸತ್ಯದಲ್ಲಿ ಏಜೆನ್ಸಿಯವರಿಗೆ ಗೋಣಿ ಕೊಪ್ಪಲು ಪ್ರದೇಶದಲ್ಲಿರುವ ಗ್ರಾಹಕರ ಸಂಖ್ಯೆ ಈ ರೀತಿ ಇದೆ. ಗೋಣಿಕೊಪ್ಪಲು 121, ಪೋಲಿಬೆಟ್ಟ 26, ದೇವರಪುರ 7, ಟಿ. ಶೆಟ್ಟಿಗೇರಿ 15, ನಾಗರಹೊಳೆ 23, ತಿತಿಮತ್ತಿ 22, ಹುದಿಕೇರಿ 13, ಬಾಳೆಲೆ 20, ಕಾನೂರು 2, ಇದರೊಂದಿಗೆ ಶ್ರೀಮಂಗಲದಲ್ಲಿ 47, ಪೊನ್ನಂಪೇಟೆಯಲ್ಲಿ 96 ಗ್ರಾಹಕರು ಇವರಿಗಿದ್ದಾರೆ. ಹೀಗೆ ಅವರಿಗೆ ಗೋಣಿಕೊಪ್ಪಲು ಭಾಗದಲ್ಲಿರುವ ಗ್ರಾಹಕರ ಒಟ್ಟು ಸಂಖ್ಯೆ 392. ಇರಲಿ 475 ಎಂದೇ ಇಟ್ಟು ಕೊಳ್ಳೋಣ. 30 ದಿನಕ್ಕೆ ಒಂದರಂತೆ ಸಿಲಿಂಡರ್ ಕೊಡಲು ಇವರು ಒಂದು ದಿನಕ್ಕೆ 16 ಸಿಲಿಂಡರ್ ಕೊಂಡೊಯ್ದರೆ ಸಾಕು. ಆದರೆ ಅವರು ಇದು ಕೊಂಡೊಯ್ಯುತ್ತಿರುವುದು 200 ಕ್ಕಿಂತಲೂ ಹೆಚ್ಚು.

ಗೋಣಿಕೊಪ್ಪಲು ಟೌನಿನಲ್ಲಿ ಒಂದು ಏಜೆನ್ಸಿ ಇರುವುದರಿಂದ ತಾವು ಅಲ್ಲಿ ಹಂಚಬಾರದೆಂದು ಏಜೆನ್ಸಿಯವರೇ ಒಪ್ಪಿಕೊಂಡಿರುವರಾದರೂ ಅವರು ಗೋಣಿಕೊಪ್ಪಲು ಟೌನಿನಲ್ಲೇ 81 ಸಿಲಿಂಡರ್ ಹಂಚುತ್ತಿದ್ದಾರೆ.

**8ರ ಜಾಗದಲ್ಲಿ 50ಕ್ಕಿಂತ ಹೆಚ್ಚು**

ಗ್ರಾಹಕರಿದ್ದಾರೆಂದು ಸಿದ್ದಾಪುರ ಪ್ರದೇಶಕ್ಕೆ ದಿನವೂ 50ಕ್ಕಿಂತಲೂ ಹೆಚ್ಚು ಸಿಲಿಂಡರ್‌ಗಳನ್ನು ಒಯ್ಯಲಾಗುತ್ತಿದೆ. ಆದರೆ ಅವರ ಪಟ್ಟಿಯ ಪ್ರಕಾರವೇ ಅವರಿಗಿರುವ ಗ್ರಾಹಕರ ಸಂಖ್ಯೆ 275. ಇದರಲ್ಲೂ 54 ವಿಳಾಸಗಳು ವಿರಾಜಪೇಟೆಯವುಗಳು. ಅಂದರೆ ಸಿದ್ದಾಪುರದಲ್ಲಿ ಇವರಿಗಿರುವ ಅಧಿಕೃತ ಗ್ರಾಹಕರ ಸಂಖ್ಯೆ 275-54=221. 30 ದಿನಗಳಿಗೊಂದರಂತೆ 221 ಗ್ರಾಹಕರಿಗಾಗಿ ಏಜೆನ್ಸಿಯವರು ಒಂದು ದಿನಕ್ಕೆ 8



ಸಿಲಿಂಡರ್‌ಗಳನ್ನು ಸಿದ್ದಾಪುರಕ್ಕೆ ಒಯ್ದರೆ ಸಾಕು. ಆದರೆ ಅವರು ಕೊಂಡೊಯ್ಯುವುದು 50 ಕ್ಕಿಂತಲೂ ಹೆಚ್ಚು.

ಹೀಗೆ, ಅವರ ಪಟ್ಟಿಯ ಪ್ರಕಾರವೇ ಗೋಣಿಕೊಪ್ಪಲು ಮತ್ತು ಸಿದ್ದಾಪುರಗಳಲ್ಲಿ ಒಟ್ಟಾಗಿ ಅವರಿಗಿರುವ ಗ್ರಾಹಕರ ಸಂಖ್ಯೆ:475 221=696. ಇವರಿಗಾಗಿ ಒಂದು ದಿನಕ್ಕೆ 24 (16-8) ಸಿಲಿಂಡರ್‌ಗಳನ್ನು ಕೊಂಡೊಯ್ದರೆ ಸಾಕು. ಆದರೆ ಏಜೆನ್ಸಿಯವರು ಒಂದು ದಿನಕ್ಕೆ 200 ಕ್ಕಿಂತಲೂ ಹೆಚ್ಚು ಸಿಲಿಂಡರ್‌ಗಳನ್ನು ಒಯ್ಯುತ್ತಿದ್ದಾರೆ. ಈ ಹೆಚ್ಚುವರಿ ಸಿಲಿಂಡರ್‌ಗಳು ಕಾಳಸಂತೆಯಲ್ಲಿ ದುಬಾರಿ ಬೆಲೆಗೆ ಮಾರಲ್ಪಡುತ್ತಿವೆ ಎನ್ನುವುದೇ ಸತ್ಯ.

**ವಿಳಾಸಗಳ ಕೋಲಾಜ್!!**

ಏಜೆನ್ಸಿಯವರ ಪಟ್ಟಿ ಇಟ್ಟು ಪರಿಶೀಲಿಸಿದರೆ ಅಯೋಮಯವಾದ ವಿಳಾಸ. ಬೇರೆ ಬೇರೆ ಪ್ರದೇಶಗಳ 'ಕೋಲಾಜ್ ವಿಳಾಸ' ಗಳ ಪಟ್ಟಿ ದೊರೆಯುತ್ತದೆ!! ಒಂದು ದಿನಕ್ಕೆ 24 ಸಿಲಿಂಡರ್‌ಗಳನ್ನು ಕೊಂಡೊಯ್ದರೆ ಸಾಕಾಗ. ಬಹುದಾದಲ್ಲಿ ಇನ್ನೂರಕ್ಕೂ ಹೆಚ್ಚು ಸಿಲಿಂಡರ್‌ಗಳನ್ನು ಒಯ್ಯುತ್ತಾರೆ. ಹೆಚ್ಚುವರಿ ಸಿಲಿಂಡರ್‌ಗಳನ್ನು ಕಾಳಸಂತೆಯಲ್ಲಿ ಕನಿಷ್ಠ 200 ರೂ. ಹೆಚ್ಚಿಗೆ ದರದಲ್ಲಿ ಮಾರುತ್ತಾರೆ. ಒಂದು ಸಿಲಿಂಡರ್‌ನಲ್ಲಿ 200 ರಂತೆ 200 ಸಿಲಿಂಡರ್‌ನಿಂದ ಕನಿಷ್ಟ 4000 ರೂ. ಲಾಭ ಪಡೆಯುತ್ತಿದ್ದಾರೆ. ಒಂದು ದಿನಕ್ಕೆ ಕನಿಷ್ಠ ನಾಲ್ಕು ಸಾವಿರ ರೂ.ವಿನಂತೆ ಒಂದು ತಿಂಗಳಲ್ಲಿ ಕನಿಷ್ಠ 1,20,000 ರೂ. ಲಾಭ.

ಒಂದು ಸಾವಿರದ ಹದಿನೈದು ಸಿಲಿಂಡರ್‌ಗಳಿಂದ ಈ ಲಾಭ ಪಡೆಯುತ್ತಿದ್ದಾರೆಂದರೆ ಏಜೆನ್ಸಿಯವರು ಹೇಳಿಕೊಳ್ಳುತ್ತಿರುವ 12 ರಿಂದ 20 ಸಾವಿರ ಗ್ರಾಹಕರ ಪಟ್ಟಿಯನ್ನು ಅಧ್ಯಯನ ನಡೆಸಿದರೆ ನಡೆಯುತ್ತಿರುವ ಮೋಸದ ಲಾಭದ ಅಗಾಧತೆ ಇನ್ನಷ್ಟು ಸ್ಪಷ್ಟವಾಗುವುದು.

ಇಷ್ಟೇ ಅಲ್ಲದೆ ಇವರ ಗೋಡೌನಿಗೆ ಹೋಗಿ ಹೆಚ್ಚಿಗೆ ಹಣ ಕೊಟ್ಟರೆ ತಕ್ಷಣವೇ ಸಿಲಿಂಡರ್ ಸಿಗುವುದು. 300 ರೂಪಾಯಿಯ ಸಿಲಿಂಡರ್‌ಗೆ ಅಲ್ಲಿ 500 ರಿಂದ 600 ರೂ. ಕೊಡಬೇಕು. ಅಷ್ಟೇ.

ಇಷ್ಟೇ ಅಲ್ಲದೆ ಇವರ ಗೋಡೌನಿಗೆ ಹೋಗಿ ಹೆಚ್ಚಿಗೆ ಹಣ ಕೊಟ್ಟರೆ ತಕ್ಷಣವೇ ಸಿಲಿಂಡರ್ ಸಿಗುವುದು. 300 ರೂಪಾಯಿಯ ಸಿಲಿಂಡರ್‌ಗೆ ಅಲ್ಲಿ 500 ರಿಂದ 600 ರೂ. ಕೊಡಬೇಕು. ಅಷ್ಟೇ.

ಗೋಣಿಕೊಪ್ಪಲು ಮತ್ತು ಕುಟ್ಟದಲ್ಲಿ ಏಜೆನ್ಸಿ ಇರುವುದರಿಂದ ಈ ಏಜೆನ್ಸಿಯವರು ಆ ಪ್ರದೇಶಗಳಿಗೆ ಸಿಲಿಂಡರ್ ಒಯ್ಯುವುದು ನಿಯಮ ವಿರೋಧವಾಗಿದೆ ಎನ್ನುವ ಅಂಶವನ್ನೂ ಗಮನಿಸಬೇಕು.

**ಮಾಹಿತಿ ಹಕ್ಕಿಗೂ ಕಿಮ್ಮತ್ತಿಲ್ಲ**

ಏಜೆನ್ಸಿವರ ಆ ದಂಧೆ ರಾಜಾರೋಷವಾಗಿ ನಡೆಯುತ್ತಿದೆ. ಸಂಬಂಧಿಸಿದ ಅಧಿಕಾರಿಗಳಿಗೆ ಮಾಹಿತಿ ಕೊಟ್ಟರೂ ಪ್ರಯೋಜನ ವಿಲ್ಲದಾಗಿದೆ. ಈ ಅಕ್ರಮ ವ್ಯವಹಾರದಲ್ಲಿ ಅಧಿಕಾರಿಗಳು ಶಾಮೀಲಾಗಿರುವುದಕ್ಕೆ ಸಾಕ್ಷಿ ಇದೆ. ಈ ಏಜೆನ್ಸಿಗೆ ವಿರಾಜಪೇಟೆ ಪಟ್ಟಣದೊಳಗೆ ಇರುವ ಗ್ರಾಹಕ ಸಂಖ್ಯೆ ಮತ್ತು ಅವರ ಹೆಸರುಗಳ ಪಟ್ಟಿಯನ್ನು ಒದಗಿಸುವಂತೆ ವಿರಾಜಪೇಟೆ ನಾಗರೀಕ ಸಮಿತಿ ಮಾಹಿತಿ ಹಕ್ಕು ಕಾಯ್ದೆಯನ್ವಯ ತಹಶೀಲ್ದಾರರಿಗೆ ಅರ್ಜಿ ಸಲ್ಲಿಸಿತ್ತು. ಅದಕ್ಕೆ ಒಂದು ತಿಂಗಳ ನಂತರ ತಹಶೀಲ್ದಾರರು 'ನೀವು ಕೋರಿರುವ ಎಲ್ಲಾ ಮಾಹಿತಿಗಳು ಕಂಪ್ಯೂಟರ್‌ನಲ್ಲಿ ದಾಖಲೆಯಾಗಿದ್ದು ಈಗ ಕಂಪ್ಯೂಟರ್‌ಗೆ ಹೊಸ ಸಾಫ್ಟ್‌ವೇರ್ ಅಳವಡಿಸಲಾಗಿದ್ದು ಅದು ಈಗ ಲಾಕ್ ಆಗಿದ್ದು ತೆಗೆಯಲಾಗುವುದಿಲ್ಲ" ಎಂದು ಏಜೆನ್ಸಿಯವರು ತಿಳಿಸಿದ್ದಾರೆಂದು ಉತ್ತರಿಸಿದ್ದಾರೆ. ಅಡುಗೆ ಅನಿಲಕ್ಕೆ ಕೇಂದ್ರ ಸರ್ಕಾರ ಸಹಾಯಧನ ಕೊಡುತ್ತಿದ್ದು ಅದನ್ನು ಒಂದು ನಿತ್ಯಾವಶ್ಯಕ ಸರಕಾಗಿ ಪರಿಗಣಿಸಲಾಗುತ್ತಿದೆ. ಇದರ ಸರಬರಾಜಿನ ಬಗ್ಗೆ ಆಹಾರ ಮತ್ತು ನಾಗರೀಕ ಪೂರೈಕೆ ಖಾತೆಯವರಿಗೆ ಸಂಪೂರ್ಣ ಮಾಹಿತಿ ಇರುವುದು ಅತ್ಯಗತ್ಯವಿದೆ. ಮೇಲುದ್ಧರಿಸಿದ ಉತ್ತರದ ಮೂಲಕ ಸಂಬಂಧಿಸಿದ ಖಾತೆ ತನಗೇನೂ ಮಾಹಿತಿ ಇಲ್ಲ ಎಂಬಂತೆ ವರ್ತಿಸುತ್ತಿದೆ. ಮಾಹಿತಿಯನ್ನೇನಾದರೂ ಕೊಟ್ಟರೆ ಏಜೆನ್ಸಿಯ ಮೋಸದ ಅಗಾಧತೆಯನ್ನು ನಾಗರೀಕ ಸಮಿತಿ ಜನ ಸಮಕ್ಷ ಮಂಡಿಸುತ್ತಾರೆಂಬ ಭಯ ಅಧಿಕಾರಿಗಳಿಗಿದೆ. ಆದ್ದರಿಂದ ಏಜೆನ್ಸಿಯನ್ನು ರಕ್ಷಿಸಲು ಅಧಿಕಾರಿಗಳು ಇಂತಹ ಉತ್ತರ ಕೊಟ್ಟಿರುವರೆನ್ನುವುದು ಸುಸ್ಪಷ್ಟ.

ಅಧಿಕಾರಿಗಳ ಈ ಪರೋಕ್ಷ, ಪ್ರತ್ಯಕ್ಷ ಬೆಂಬಲವೇ ಈ ಏಜೆನ್ಸಿಗೆ ರಾಜಾರೋಷವಾಗಿ ನಿಯಮಗಳನ್ನು ಗಾಳಿಗೆ ತೂರಿ ಅಕ್ರಮ ವ್ಯವಹಾರ ನಡೆಸಲು ಪ್ರೋತ್ಸಾಹ ಕೊಡುತ್ತಿದೆ. ಹೀಗೆ ಕೇಂದ್ರ ಸರ್ಕಾರದ ಸಹಾಯಧನ ದೊಂದಿಗೆ ಬರುವ ಅಡುಗೆ ಅನಿಲ ಸಾಕಷ್ಟು ಪ್ರಮಾಣದಲ್ಲಿ ಏಜೆನ್ಸಿಯವರಿಗೆ ಕಾಳಸಂತೆಯಲ್ಲಿ ಅಪಾರ ಲಾಭಗಳಿಸುವ ಸರಕಾಗಿ ಪರಿವರ್ತನೆಯಾಗಿದೆ. ಕೇಂದ್ರ ಸರ್ಕಾರ ತಾನು ಸಬ್ಸಿಡಿ ಕೊಡುತ್ತಿರುವುದು ಒಂದು ಹೊರೆಯಾಗುತ್ತಿದೆ ಎಂದು ಹೇಳಿ ಗ್ರಾಹಕರಿಗೆ 21 ದಿನಕ್ಕೊಂದು ಸಿಲಿಂಡರ್ ಕೊಡ ಬಹುದಾದದ್ದನ್ನು 30 ದಿನಕ್ಕೊಂದೆಂದು ವಿಸ್ತರಿಸಿದೆ. ಏಜೆನ್ಸಿಯವರು ಅದನ್ನು ತಿರುಚಿ 30 ದಿನದ ನಂತರ ಬುಕ್ ಮಾಡಿಸಿ ಎಂಟು ಹತ್ತು ದಿನಗಳವರೆಗೂ ಗ್ರಾಹಕರಿಗೂ ಸತಾಯಿಸಿ ಸಿಲಿಂಡರ್ ಕೊಡುತ್ತಿದ್ದಾರೆ.

**ಹೋರಾಟವೊಂದೇ ಮಾರ್ಗ**

ಆದ್ದರಿಂದ ಸರ್ಕಾರ ಏಜೆನ್ಸಿಯ ಗ್ರಾಹಕರ ಪಟ್ಟಿಯನ್ನು ಕೂಲಂಕುಷವಾಗಿ ಪರಿಶೀಲಿಸಿದರೆ ಬೋಗಸ್ ವಿಳಾಸಗಳು ಹೊರಬರುತ್ತವೆ. ಇಷ್ಟೇ ಅಲ್ಲದೆ ನಿಯಮಗಳೆಲ್ಲವನ್ನೂ ಗಾಳಿಗೆ ತೂರಿರುವ ಏಜೆನ್ಸಿಯವರು ಸ್ಟೋವ್ ತೆಗೆದುಕೊಳ್ಳಬೇಕೆಂದು ನಿರ್ಬಂಧಿಸುತ್ತಾರೆ, ಹೊಸ ಸಂಪರ್ಕ ಕೊಡಲೂ ಸತಾಯಿಸುತ್ತಾರೆ. ಎರಡನೇ ಸಿಲಿಂಡರ್ ಕೊಡುವುದಕ್ಕೂ ವಂಚನೆ ನಡೆಸುತ್ತಾರೆ. ಏಜೆನ್ಸಿಯವರು ಕಾಳಸಂತೆಯಲ್ಲಿ ಗಳಿಸಿದ ಈ ಅಪಾರ ಹಣದಲ್ಲಿ ಸರ್ಕಾರಿ ಅಧಿಕಾರಿಗಳನ್ನು ಈಗಾಗಲೇ ಕೊಂಡು ಕೊಂಡಿರುವುದರಿಂದ ಅಧಿಕಾರಿಗಳೂ ಈ ಅವ್ಯವಹಾರದಲ್ಲಿ ಶಾಮೀಲಾಗಿದ್ದಾರೆ. ಈ ಪರಿಸ್ಥಿತಿಯಲ್ಲಿ ಸಂಘಟಿತ ಹೋರಾಟವಲ್ಲದೆ ಗ್ರಾಹಕರೆದುರು ಅನ್ಯ ಮಾರ್ಗವೇ ಇಲ್ಲವಾಗಿದೆ. ○

---

**ವಿಶ್ವಾಸವಿರಲಿ.... ಇನ್ನೂ ಹೆಚ್ಚು ಸಾಧಿಸಬಹುದು**

ಶೇ. 60 ರಷ್ಟು ಅಂಕ ತೆಗೆದುಕೊಂಡ ವಿದ್ಯಾರ್ಥಿಗಳಿಗೆ ಮಾತ್ರ ವಿದ್ಯಾರ್ಥಿ ವೇತನ (ಸ್ಕಾಲರ್‌ಶಿಪ್) ಎಂಬ ಫರ್ಮಾನನ್ನು ಕೇಂದ್ರ ಯುಪಿಎ ಸರ್ಕಾರ ಹೊರಡಿಸಿದ್ದು ನಿಮಗೆ ಗೊತ್ತೇ ಗೊತ್ತು. ಅದಕ್ಕೆ ದೇಶಾದ್ಯಂತ ತೀವ್ರ ವಿರೋಧ ವ್ಯಕ್ತವಾಗಿತ್ತು.


ವಿದ್ಯಾರ್ಥಿ ಸಂಘಟನೆ ಎಸ್.ಎಫ್.ಐ., ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷ ಸೇರಿದಂತೆ ಎಡ ಪಕ್ಷಗಳು ಇದನ್ನು ಖಂಡಿಸಿ ಪ್ರತಿಭಟಿಸಿದ್ದವು. ಆದೇಶ ವಾಪಸ್ಸಾಗಲಿ. ಹೋರಾಟದಲ್ಲಿ ವಿಶ್ವಾಸವಿರಲಿ ಇನ್ನೂ ದೊಡ್ಡದ್ದನ್ನು ಸಾಧಿಸಬಹುದು.

ಜಗದಗಲ

ಶರತ್‌ಚಂದ್ರ

# ‘ಏಕಮಾತ್ರ ಸೂಪರ್ ಪವರ್’ಗೆ ಸವಾಲು

ಕಳೆದ ಮೂರು ವರ್ಷಗಳ ಕಾಲ ಅಮೆರಿಕ ತಾನು ಏಕಮಾತ್ರ ಸೂಪರ್ ಪವರ್ ಎಂದು ಬೀಗುತ್ತಾ ಇಡೀ ಜಗತ್ತಿನ ಮೇಲೆ ತನ್ನ ಅಧಿಪತ್ಯವನ್ನು ಹೇರುವ ಪ್ರಯತ್ನದಲ್ಲಿದೆ. ಆದರೆ ಅದೇ ಅವಧಿಯಲ್ಲಿ ಸಾಮ್ರಾಜ್ಯಶಾಹಿ ಆಕ್ರಮಣಕ್ಕೆ ಮತ್ತು ಅಂತರ್‍ರಾಷ್ಟ್ರೀಯ ಹಣಕಾಸು ಬಂಡವಾಳದ ಆರ್ಥಿಕ ಆಣತಿಗಳಿಗೆ ಪ್ರತಿರೋಧ ಸಹ ಹೆಚ್ಚಿದೆ. ಇರಾಕಿನಲ್ಲಿ ಅಮೆರಿಕನ್ ಆಕ್ರಮಣಕ್ಕೆ ಸತತವಾದ ಮತ್ತು ವ್ಯಾಪಕ ಪ್ರತಿರೋಧ ಪಶ್ಚಿಮ ಏಶ್ಯಾಕ್ಕೆ ಬುಶ್ ಆಡಳಿತ ಹೊಂದಿದ್ದ ಒಟ್ಟಾರೆ ಯೋಜನೆಯನ್ನು ಹಾಳುಗೆಡವಿದೆ. ಲೆಬನಾನ್‌ನಲ್ಲಿ ಇಸ್ರೇಲಿ ಆಕ್ರಮಣಕ್ಕೆ ಹಿಝುಬೊಲ್ಲಾ ನೇತೃತ್ವದ ಧೀರ ಪ್ರತಿರೋಧ ಒಂದು ಮಹತ್ವದ ಘಟನೆ. ಅದು ಇಸ್ರೇಲಿ ಪಡೆಗಳು ಅಜೇಯವೇನಲ್ಲ ಎಂಬುದನ್ನು ತೋರಿಸಿಕೊಟ್ಟಿದೆ. ಪ್ಯಾಲೆಸ್ತೈನನ್ನು ಅರಾಫತ್ ನಾಯಕತ್ವದ ಫತೆಹ್ ಮತ್ತು ಮೂಲಭೂತವಾದಿ ಹಮಾಸ್ ನಡುವೆ ರಾಜಕೀಯವಾಗಿ ವಿಭಜಿಸಿ ತಮ್ಮ ಬೇಳೆ ಬೇಯಿಸಿಕೊಳ್ಳಲು ಅಮೆರಿಕ ಮತ್ತು ಅದರ ಭಂಟ ಇಸ್ರೇಲ್ ಪ್ರಯತ್ನಿಸಿದೆ. ಆದರೆ ಅದರಲ್ಲೂ ಸಫಲತೆ ಕಂಡಿಲ್ಲ.


ಬೃಹತ್ ರಾಜಕೀಯ ಶಕ್ತಿಯಾಗಿ ಬೆಳೆಯುತ್ತಿರುವ ಚೀನಾ

### ಎಡಪಂಥದ ಮುನ್ನಡೆ

ಎಡಪಂಥ ಲ್ಯಾಟಿನ್ ಅಮೆರಿಕಾದಲ್ಲಿ ಇನ್ನಷ್ಟು ಮುನ್ನಡೆದಿದೆ. ಕಳೆದ ಮೂರು ವರ್ಷಗಳಲ್ಲಿ ಬ್ರೆಝಿಲ್ ಮತ್ತು ವೆನೆಝುವೆಲಾದಲ್ಲಿ ಚುನಾವಣಾ ವಿಜಯಗಳಲ್ಲದೆ, ಎಡಶಕ್ತಿಗಳು ಬೊಲಿವಿಯಾ, ನಿಕರಗುವ ಮತ್ತು ಇಕ್ವೆಡೋರ್‌ನಲ್ಲಿ ಯಶಸ್ಸು ದಾಖಲಿಸಿವೆ. ಮೆಕ್ಸಿಕೊದಲ್ಲಿ ಎಡಪಂಥೀಯ ಅಭ್ಯರ್ಥಿಯನ್ನು ಕುತಂತ್ರದಿಂದ ಸೋಲಿಸಿದರೂ ಎಡಶಕ್ತಿ ದೊಡ್ಡ ಬೆಂಬಲ ಗಳಿಸಿದೆ. ಬೊಲಿವಿಯ ‘ಅಮೆರಿಕಾಗಳಿಗೆ ಬೊಲಿವೇರಿಯನ್ ಪರ್ಯಾಯ’ ಮುಂದಿಡುವಲ್ಲಿ ಕ್ಯೂಬ ಮತ್ತು ವೆನೆಝುವೆಲ ದೊಂದಿಗೆ ಸೇರಿಕೊಂಡಿದೆ. 2005ರ ಅಂತ್ಯದೊಳಗೆ ‘ಅಮೆರಿಕಾದ ಮುಕ್ತ ವ್ಯಾಪಾರ ಪ್ರದೇಶಗಳು’ (ಎಫ್‌ಟಿಎಎ) ಒಪ್ಪಂದವನ್ನು ಮಾಡಿಸಿ ಬಿಡುವ ಅಮೆರಿಕ ಸಂಯುಕ್ತ ಸಂಸ್ಥಾನದ ಗುರಿ ‘ಅಮೆರಿಕಾಗಳ ನಾಲ್ಕನೇ ಶೃಂಗ’ ಸಮ್ಮೇಳನದಲ್ಲಿ ವಿಫಲಗೊಂಡಿತು. ಅಲ್ಲಿ ಬ್ರೆಝಿಲ್, ವೆನೆಜುವೆಲ, ಪರಾಗ್ವೆ ಮತ್ತು ಉರುಗ್ವೆ ಒಪ್ಪಂದದ ಸಮಯಸೂಚಿ ಮತ್ತು ಅದರ ವಿಷಯಗಳನ್ನು ಒಪ್ಪಲು ನಿರಾಕರಿಸಿದವು. ಬ್ರೆಝಿಲ್, ವೆನೆಝುವೆಲ, ಅರ್ಜೆಂಟಿನ, ಉರುಗ್ವೆ, ಪರಾಗ್ವೆ, ಇಕ್ವೆಡೋರ್ ಮತ್ತು ಬೊಲಿವಿಯ ಈ ಏಳು ದೇಶಗಳು ಬಾಂಕೊ ಡೆಲ್ ಸುರ್ ಅಂದರೆ ದಕ್ಷಿಣದ ಬ್ಯಾಂಕ್ ರಚಿಸಿವೆ. ಈ ಬ್ಯಾಂಕ್ ಐಎಂಎಫ್- ವಿಶ್ವಬ್ಯಾಂಕ್ ವ್ಯವಸ್ಥೆಗೆ ಒಂದು ಪರ್ಯಾಯವಾಗಿ ಸೇವೆ ಸಲ್ಲಿಸುವ ಯೋಜನೆ ಹೊಂದಿದೆ.

ಬೊಲಿವಿಯದಲ್ಲಿ ಅಧ್ಯಕ್ಷ ಇವೊ ಮೊರಲೆಸ್ ತೀವ್ರಗಾಮಿ ಭೂಸುಧಾರಣೆಗಳನ್ನು ಆರಂಭಿಸಿದ್ದು, ಇದು ಸಾವಿರಾರು ಎಕ್ರೆಗಳನ್ನು ಭೂಹೀನ ರೈತರಿಗೆ ವರ್ಗಾಯಿಸುತ್ತದೆ. ಹ್ಯುಗೊ ಚವೇಜ್ ವೆನೆಜುವೆಲಾದಲ್ಲಿ ಡಿಸೆಂಬರ್ 2006ರಲ್ಲಿ ಅಧ್ಯಕ್ಷೀಯ ಚುನಾವಣೆಗಳನ್ನು 62.8 ಶೇಕಡಾ ಮತಗಳಿಂದ ಗೆದ್ದ ನಂತರ ಸಮಾಜವಾದದತ್ತ ಕ್ರಾಂತಿಕಾರಿ ಪ್ರಕ್ರಿಯೆಯನ್ನು ಒಯ್ಯಲಾಗುವುದು ಎಂದು ಪ್ರಕಟಿಸಿದರು. ಡಿಸೆಂಬರ್ 2007 ರ ಜನಮತಸಂಗ್ರಹಣೆಯಲ್ಲಿ ಸಮಾಜವಾದಿ ದಿಕ್ಕಿನಲ್ಲಿ ಸಾಗುವುದನ್ನು ಬಲಪಡಿಸುವ ಪ್ರಸ್ತಾವಗಳು ಸ್ವಲ್ಪದರಲ್ಲಿ ಸೋತುದ್ದು ಇಂತಹ ಕ್ರಮಗಳನ್ನು ತಡೆದು ನಿಲ್ಲಿಸ ಬಯಸುವ ವಿರೋಧಿ ಶಕ್ತಿಗಳ ಬೆಳೆಯುತ್ತಿರುವ ಕ್ರೋಢೀಕರಣವನ್ನು ತೋರಿಸುತ್ತದೆ. ಬೊಲಿವಿಯದಲ್ಲಿ ಹೊಸ ಸಂವಿಧಾನಕ್ಕೆ ತೀಕ್ಷ್ಣವಾದ ಬಲಪಂಥೀಯ ವಿರೋಧ ಸ್ವಲ್ಪ ಹೆಚ್ಚು ಶ್ರೀಮಂತ ಪ್ರಾಂತಗಳಲ್ಲಿ ಕೇಂದ್ರೀಕೃತವಾಗಿದೆ. ವೆನೆಜುವೆಲಾ ದಲ್ಲಿಯೂ, ಬೊಲಿವಿಯಾ ದಲ್ಲಿಯೂ ಪ್ರಜಾಸತ್ತಾತ್ಮಕ ವಿಧಾನದಲ್ಲಿ ಪ್ರಗತಿಪರ ಪರಿವರ್ತನೆಯ ಹಾದಿಯನ್ನು ಪ್ರತಿಗಾಮಿ ಶಕ್ತಿಗಳು ಉಗ್ರವಾಗಿ ವಿರೋಧಿಸುತ್ತಿವೆ.

> ಜಗತ್ತಿನ ಬೆಳವಣಿಗೆ ಅಮೆರಿಕಾ ಮತ್ತಿತರ ಸಾಮ್ರಾಜ್ಯಶಾಹಿ ಸುಲಿಗೆಕೋರರು ಬಯಸಿದಂತೆ ಆಗುತ್ತಿಲ್ಲ, ಅದಕ್ಕೆ ವಿರುದ್ಧ ದಿಕ್ಕಿನಲ್ಲಿ ಸಾಗುತ್ತಿವೆ.


### ಯುರೋಪಿನಲ್ಲಿ...

ಹಲವು ದಶಕಗಳ ಹೋರಾಟದ ನಂತರ ಪಡೆದ ಹಲವು ಸವಲತ್ತು ಮತ್ತು ಹಕ್ಕುಗಳ ಮೇಲಿನ ಧಾಳಿಗಳಿಗೆ ಮುಂದುವರೆದ ದೇಶಗಳಲ್ಲಿ ದುಡಿಯುವ ಜನಗಳಿಂದ ತೀವ್ರ ಪ್ರತಿರೋಧ ಬರುತ್ತಿದೆ. ಫ್ರಾನ್ಸ್ ಮತ್ತು ನೆದರ್ಲೆಂಡ್ಸ್‌ನಲ್ಲಿ ಜನಮತ ಸಂಗ್ರಹಣೆಯಲ್ಲಿ ಜನತೆ ಯುರೋಪಿಯನ್ ಒಕ್ಕೂಟದ ಸಂವಿಧಾನವನ್ನು ತಿರಸ್ಕರಿಸಿದ್ದಾರೆ. ಅದು ಕೇವಲ ಅಂತರ್‍ರಾಷ್ಟ್ರೀಯ ಹಣಕಾಸು ಬಂಡವಾಳ ಮತ್ತು ದೊಡ್ಡ ಕಂಪನಿಗಳ ಹಿತಗಳಿಗಾಗಿ ಮಾತ್ರ ಸಮಗ್ರೀಕರಣಕ್ಕಾಗಿ ಪ್ರಯತ್ನ ಎಂದು ಅವರ ಅನ್ನಿಸಿಕೆ. ಫ್ರಾನ್ಸಿನಲ್ಲಿ ಉದ್ಯೋಗಕ್ಕೆ ಹೊಸದಾಗಿ ಸೇರಿದವರ ಹೈರ್ ಅಂಡ್ ಫೈರ್(ಮನಬಂದಂತೆ ನೇಮಿಸಿಕೊಳ್ಳುವ, ತೆಗೆದು ಹಾಕುವ) ಧೋರಣೆಯ ಕಾನೂನನ್ನು ವಿದ್ಯಾರ್ಥಿಗಳು ಮತ್ತು ಅವರನ್ನು ಸೇರಿಕೊಂಡ ಕಾರ್ಮಿಕ ಸಂಘಗಳ ಒಂದು ದೊಡ್ಡ ಸಾಮೂಹಿಕ ಆಂದೋಲನದ ನಂತರ ರದ್ದು ಮಾಡಲಾಯಿತು. ಇಟಲಿ, ಫ್ರಾನ್ಸ್, ಜರ್ಮನಿ, ಪೋರ್ಚುಗಲ್ ಮತ್ತು ಗ್ರೀಸ್‌ನಲ್ಲಿ ಖಾಸಗೀಕರಣದ ವಿರುದ್ಧ, ಪೆನ್ಷನ್ ಗಳನ್ನು ರಕ್ಷಿಸಿಕೊಳ್ಳಲು ಮತ್ತು ಒಂದು ನ್ಯಾಯಯುತ ಕನಿಷ್ಟ ಕೂಲಿಗಾಗಿ ದೊಡ್ಡ ಮುಷ್ಕರಗಳು ನಡೆದಿವೆ. ಚಿಲಿಯಲ್ಲಿ ಸಾವಿರಾರು ವಿದ್ಯಾರ್ಥಿಗಳ ಒಂದು ಸಾಮೂಹಿಕ ಆಂದೋಲನ ಮಿಲಿಟರಿ ಆಳ್ವಿಕೆಯ ಕಾಲದಲ್ಲಿ ಹೇರಿದ್ದ ಶಿಕ್ಷಣದ ಖಾಸಗೀಕರಣಕ್ಕೆ ಅನುಕೂಲ ಮಾಡಿಕೊಡುವ ಒಂದು ಶಾಸನವನ್ನು ಸರಕಾರ ರದ್ದುಗೊಳಿಸುವಂತೆ ಮಾಡಿದೆ. ಸ್ಕಾಟ್ಲೆಂಡ್ ಮತ್ತು ಜರ್ಮನಿಯಲ್ಲಿ ಜಿ-8 ಶೃಂಗ ಸಭೆಗಳು ನಡೆದಾಗ ಅದನ್ನು ವಿರೋಧಿಸಲು ಸಾವಿರ-ಸಾವಿರ ಸಂಖ್ಯೆಯಲ್ಲಿ ಪ್ರತಿಭಟನಕಾರರು ಬಂದು ನವ ಉದಾರವಾದಿ ನೀತಿಗಳನ್ನು ಕೈಬಿಡಬೇಕು ಮತ್ತು ಬಡದೇಶಗಳ ಶೋಷಣೆಯನ್ನು ಕೊನೆಗೊಳಿಸಬೇಕು ಎಂದು ಆಗ್ರಹಿಸಿದರು.

### ರಷ್ಯಾದ ಚೇತರಿಕೆ

ಅಮೆರಿಕಾದ ಏಕಪಕ್ಷೀಯತೆಯನ್ನು ಮತ್ತು ಅದರ ಅಧಿಪತ್ಯ ಎಲ್ಲರ ಮೇಲೆ ಹೊರಿಸುವ ವಿಧಾನಗಳನ್ನು ಸೆಡ್ಡು ಹೊಡೆದು ಎದುರಿಸುವ ಪ್ರಮುಖ ಪ್ರವೃತ್ತಿಗಳು ಜಗತ್ತಿನಾದ್ಯಂತ ಕಂಡು ಬಂದಿದೆ. ರಷ್ಯಾ ತನ್ನ ಜಗತಿನ ಆಗು ಹೋಗುಗಳಲ್ಲಿ ಸ್ವತಂತ್ರ ಪಾತ್ರವನ್ನು ಮತ್ತು ಸಾರ್ವಭೌಮ ಹಕ್ಕುಗಳನ್ನು ಎತ್ತಿ ಹಿಡಿದಿದೆ. ಅಧ್ಯಕ್ಷ ಪುಟಿನ್ ಪೂರ್ವ ಯುರೋಪಿನಲ್ಲಿ ಕ್ಷಿಪಣಿಗಳನ್ನು ನೆಲೆಗೊಳಿಸುವುದರ ವಿರುದ್ಧ ಕಟು ಮಾತನ್ನಾಡಿದರು. ಅದು ಶಾಂತಿ ಮತ್ತು ಭದ್ರತೆಗೆ ಒಂದು ಬೆದರಿಕೆ ಎಂದು ಕರೆದರು. ಇಂದಿನ ಜಗತ್ತಿನಲ್ಲಿ ಒಂದು ಏಕಧ್ರುವೀಯ ಜಗತ್ತು “ಅಸ್ವೀಕಾರಾರ್ಹ ಮಾತ್ರವಲ್ಲ, ಅಸಾಧ್ಯ” ಕೂಡ ಎಂದು ಅವರು ಸಾರಿದರು. ಅಂತರ್‍ರಾಷ್ಟ್ರೀಯ ತೈಲ ಬೆಲೆಗಳಲ್ಲಿ ತೀವ್ರ ಏರಿಕೆಯಿಂದಾಗಿ ರಷ್ಯಾದ ಆರ್ಥಿಕ ಒಂದು ಬಲವಾದ ಕ್ರೋಢೀಕರಣ ಕಂಡಿದೆ. ರಶ್ಯಾದ ತೀವ್ರ ಪ್ರತಿರೋಧ ಈ ಹಿನ್ನೆಲೆಯಲ್ಲಿ ಬಂದಿದೆ. ರಷ್ಯ ಮಧ್ಯ ಏಶ್ಯಾದ ದೇಶಗಳೊಂದಿಗೆ ತನ್ನ ವ್ಯೂಹಾತ್ಮಕ ಸಂಬಂಧಗಳನ್ನು ಬಲಗೊಳಿಸಿಕೊಳ್ಳುತ್ತಿದೆ. ಅದು ಈ ಪ್ರದೇಶದಲ್ಲಿ ಒಂದು ಇಂಧನ ಜಾಲ ಆರಂಭಿಸುವ ಮುತುವರ್ಜಿಯನ್ನು ವಹಿಸಿದೆ. ಈ ಅವಧಿಯಲ್ಲಿ ರಷ್ಯಾ ಮತ್ತು ಚೀನಾದ ಸಂಬಂಧಗಳು ಆಳಗೊಂಡಿವೆ. ಷಾಂಘಾಯ್ ಸಹಕಾರ ಸಂಘಟನೆ (ಎಸ್‌ಸಿಒ) ತನ್ನ ಚಟುವಟಿಕೆಗಳನ್ನು ಕಳೆದ ಮೂರು ವರ್ಷಗಳಲ್ಲಿ ವಿಸ್ತಾರಗೊಳಿಸಿದೆ. ರಷ್ಯಾ ಮತ್ತು ಚೀನಾ ನಡುವೆ ಮೊದಲ ಜಂಟಿ ಕವಾಯತಿನ ನಂತರ ಎಸ್‌ಸಿಒ ದೇಶಗಳು 2007ರ ಮಧ್ಯಭಾಗದಲ್ಲಿ ತಮ್ಮ ಮೊದಲ ಜಂಟಿ ಮಿಲಿಟರಿ ಕವಾಯತು ನಡೆಸಿವೆ.

ಕರಡು ಯುರೋಪಿಯನ್ ಒಕ್ಕೂಟ ಸಂವಿಧಾನಕ್ಕೆ ಫ್ರಾನ್ಸ್ ಮತ್ತು ನೆದರ್ಲೆಂಡ್ಸ್ ಜನಮತಸಂಗ್ರಹಣೆಯಲ್ಲಿ ಬಂದ ತಿರಸ್ಕಾರ ದೊಡ್ಡ ಬಂಡವಾಳಿಗರು ಮತ್ತು ಹಣಕಾಸು ಬಂಡವಾಳದ ಹಿತಾಸಕ್ತಿಗಳನ್ನು ಆಧರಿಸಿದ ಯುರೋಪಿಯನ್ ಸಮಗ್ರೀಕರಣವನ್ನು ವಿರೋಧಿಸುವ ಶಕ್ತಿಗಳಿಗೊಂದು ವಿಜಯ. ಆದರೆ ಯುರೋಪಿಯನ್ ಸರಕಾರಗಳು ಕರಡು ಸಂವಿಧಾನದ ಮುಖ್ಯ ಅಂಶಗಳನ್ನು ಜನಮತ ಸಂಗ್ರಹಣೆಗಳ ಮೂಲಕ ಜನತೆಯ ಒಪ್ಪಿಗೆಯ ಅಗತ್ಯವನ್ನು ತಪ್ಪಿಸಿ ಜ್ಯಾರಿಗೆ ತರಲು ಯತ್ನಿಸುವ ಒಂದು ಲಿಸ್ಬನ್ ಸಂಧಿಗೆ ಸಹಿ ಹಾಕಿವೆ. ಅಮೆರಿಕಾ ಕ್ಷಿಪಣಿ ನಿರೋಧಕ ವ್ಯವಸ್ಥೆಯ ಪ್ರಶ್ನೆಯಲ್ಲಿ ರಷ್ಯಾ ಮತ್ತು ಯುರೋಪಿಯನ್ ದೇಶಗಳ ನಡುವಿನ ಸಂಬಂಧಗಳಲ್ಲಿ ಒಡಕುಗಳನ್ನು ನಿರ್ಮಿಸಲು ಪ್ರಯತ್ನ ನಡೆಸಿದೆ. ಅಮೆರಿಕಾ ಭಯೋತ್ಪಾದನೆಯ ವಿರುದ್ಧ ಹೋರಾಟ ಹಾಗೂ ಪ್ರಜಾಪ್ರಭುತ್ವವನ್ನು ಹರಡಿಸುವ ಅವಳಿ ಗುರಿಗಳನ್ನು ಎತ್ತಿ ಸಾಮ್ರಾಜ್ಯಶಾಹಿ ಬಣದ ನೇತೃತ್ವವನ್ನು ಗಟ್ಟಿಗೊಳಿಸಲು ಯತ್ನಿಸುತ್ತಿದೆ. ಜಪಾನ್ ತನ್ನ ಮಿಲಿಟರೀಕರಣದ ಕಾರ್ಯಕ್ರಮವನ್ನು ಹೆಚ್ಚಿಸುವಂತೆ ಮತ್ತು ಇರಾಕ್ ಹಾಗೂ ಅಫಘಾನಿಸ್ತಾನದಲ್ಲಿ ಯುದ್ಧ ಪ್ರಯತ್ನಗಳಲ್ಲಿ ಭಾಗವಹಿಸುವಂತೆ ಅಮೆರಿಕ ಪ್ರೋತ್ಸಾಹಿಸಿದೆ. ಅಮೆರಿಕಾ ಒಂದು ಶೀತಲ ಸಮರದ ನಂತರದ ಪಾಶ್ಚಿಮಾತ್ಯ ಮೈತ್ರಿಕೂಟವನ್ನು ಮತ್ತೆ ರಚಿಸಿ ಅದನ್ನು ವಿಶ್ವ ವ್ಯವಹಾರಗಳಲ್ಲಿ ತನ್ನ ಅಧಿಪತ್ಯವನ್ನು ರೂಪಿಸಲು ಒಂದು ವೇದಿಕೆಯಾಗಿಸುವ ಗುರಿಯಿಟ್ಟುಕೊಂಡಿದೆ. ಜರ್ಮನಿ ಮತ್ತು ಫ್ರಾನ್ಸಿನಲ್ಲಿ ಚುನಾವಣೆಗಳಿಂದ ಯುರೋಪಿನ ಎರಡು ಅತಿ ದೊಡ್ಡ ದೇಶಗಳಲ್ಲಿ ಬಲಪಂಥೀಯ ಮುಖಂಡರು ಅಧಿಕಾರ ವಹಿಸಿಕೊಳ್ಳುವಂತಾಗಿದೆ. ಜರ್ಮನ್ ಚಾನ್ಸಲರ್ ಮತ್ತು ಫ್ರೆಂಚ್ ಅಧ್ಯಕ್ಷ ಅಮೆರಿಕಾ ಪರವಾಗಿದ್ದು ಅಮೆರಿಕಾದೊಂದಿಗೆ ಯುರೋಪಿಯನ್ ಒಕ್ಕೂಟದ ಸಂಬಂಧಗಳು ಕಡಿಮೆ ಬಿಕ್ಕಟ್ಟುಮಯವಾಗಿವೆ. ಆದರೆ ಇದರ ಅರ್ಥ ಯಾವ ಭಿನ್ನಾಭಿಪ್ರಾಯಗಳೂ ಇರುವುದಿಲ್ಲ ಎಂದೇನಲ್ಲ. ಈಗಾಗಲೇ ಕ್ಷಿಪಣಿ ನಿರೋಧಕಗಳನ್ನು ನೆಲೆಗೊಳಿಸುವಲ್ಲಿ ಭಿನ್ನಾಭಿಪ್ರಾಯಗಳು ಮೂಡಿ ಬಂದಿವೆ. ಅಲ್ಲದೆ ಪಶ್ಚಿಮ ಯುರೋಪಿನ ಪ್ರಮುಖ ದೇಶಗಳಲ್ಲಿ ಜನಾಭಿಪ್ರಾಯ ಅಮೆರಿಕಾದ ಏಕಪಕ್ಷೀಯ ನಿಲುವಿಗೆ ವಿರುದ್ಧವಾಗಿದೆ. ರಷ್ಯಾ ತನ್ನ ರಾಷ್ಟ್ರೀಯ ಹಿತಾಸಕ್ತಿಗಳಿಗೆ ಹೆಚ್ಚೆಚ್ಚು ಒತ್ತು ಕೊಡುತ್ತಿರುವುದು ಸಾಮ್ರಾಜ್ಯಶಾಹಿಯೊಳಗಿನ ವೈರುಧ್ಯಗಳ ಮೇಲೆ ತನ್ನ ಪ್ರಭಾವ ಬೀರಲಿದೆ.


ವೆನೆಜುವೆಲಾ - ಸಾಮ್ರಾಜ್ಯಶಾಹಿ ಜಾಗತೀಕರಣ ವಿರೋಧಿ ಹೋರಾಟದ ಸ್ಫೂರ್ತಿ ಬಿಂದು

## ಸಮಾಜವಾದಿ ದೇಶಗಳಲ್ಲಿ ತೀವ್ರ ಪ್ರಗತಿ

ಕಳೆದ ಮೂರು ವರ್ಷಗಳಲ್ಲಿ ಸಮಾಜವಾದಿ ದೇಶಗಳಲ್ಲಿ ತೀವ್ರ ಪ್ರಗತಿ ಸಹ ಅಮೆರಿಕದ ತಾನು ಏಕಮಾತ್ರ ಸೂಪರ್ ಪವರ್ ಎಂಬ ಅಟಾಟೋಪಕ್ಕೆ ಕಡಿವಾಣ ಹಾಕಿದೆ. ಚೀನಾ ತ್ವರಿತ ಆರ್ಥಿಕ ಬೆಳವಣಿಗೆಯನ್ನು ಕಂಡಿದೆ. ಇದು ಅಭೂತಪೂರ್ವ. ಎರಡನೇ ಮಹಾಯುದ್ದದ ನಂತರ ಯಾವುದೇ ದೇಶ ಇಂತಹ ಅವಿರತ ತ್ವರಿತ ಆರ್ಥಿಕ ಬೆಳವಣಿಗೆಯನ್ನು ಕಂಡಿಲ್ಲ. ಒಂದು ದೊಡ್ಡ ಶಕ್ತಿಯಾಗಿ ಚೀನಾದ ಪ್ರಭಾವ ಏಶ್ಯಾ ಶಾಂತಸಾಗರ ಪ್ರದೇಶದಲ್ಲಿ ಅನುಭವಕ್ಕೆ ಬರುತ್ತಿದೆಯಷ್ಟೇ ಅಲ್ಲ, ಅದು ಆಫ್ರಿಕ ಮತ್ತು ಲ್ಯಾಟಿನ್ ಅಮೆರಿಕಾಕ್ಕೂ ವಿಸ್ತರಿಸುತ್ತದೆ. ಅದರ ಆರ್ಥಿಕವನ್ನು ತೆರೆದಿರುವುದು ಮತ್ತು ತ್ವರಿತ ಬೆಳವಣಿಗೆಯಿಂದಾಗಿ ಚೀನಾ ಆದಾಯವಾರು, ಪ್ರದೇಶವಾರು ಹಾಗೂ ನಗರ ಮತ್ತು ಗ್ರಾಮೀಣ ಪ್ರದೇಶಗಳ ನಡುವೆ ಹೆಚ್ಚುತ್ತಿರುವ ಅಸಮಾನತೆಗಳ ಸಮಸ್ಯೆಗಳನ್ನು ಕೂಡಾ ಅನುಭವಿಸುತ್ತಿದೆ. ಚೀನಾ ಕಮ್ಯುನಿಸ್ಟ್ ಪಕ್ಷದ 17ನೆ ಮಹಾಧಿವೇಶನ ಈ ಸಮಸ್ಯೆಗಳಿವೆ ಎಂದು ಒಪ್ಪಿಕೊಂಡಿದೆ ಹಾಗೂ ಅವುಗಳನ್ನು ಎದುರಿಸಲು ಕ್ರಮಗಳನ್ನು ಸೂಚಿಸಿದೆ. ಚೀನ ಮತ್ತು ವಿಯೆಟ್ನಾಮ್ ಗಳಲ್ಲಿ ತೀವ್ರ ಪ್ರಗತಿ ಸಹಿಸಲಾರದೆ ಆ ದೇಶಗಳಲ್ಲಿ ಮಾನವ ಹಕ್ಕುಗಳು, ಧಾರ್ಮಿಕ ಸ್ವಾತಂತ್ರ್ಯ ಮತ್ತು ಪ್ರಜಾಪ್ರಭುತ್ವದ ಬಗ್ಗೆ ಅದು ಅಪಪ್ರಚಾರ ಹರಡುವಲ್ಲಿ ತೊಡಗಿದೆ.

### ವಿಯೆಟ್ನಾಂ ಮುನ್ನಡೆ

ವಿಯೆಟ್ನಾಂ ಕೂಡ ಸತತ ಪ್ರಗತಿಯ ಹಾದಿಯಲ್ಲಿದೆ ಮತ್ತು ಬಡತನವನ್ನು ಕಡಿಮೆ ಮಾಡುವಲ್ಲಿ ಪರಿಣಾಮಕಾರೀ ದಾಮುಗಾಲುಗಳನ್ನಿಟ್ಟಿದೆ. ಆಸ್ಯಾನ್ ಸದಸ್ಯರಾಷ್ಟ್ರವಾಗಿ ಅದು ದಕ್ಷಿಣ-ಪೂರ್ವ ಏಶ್ಯಾದಲ್ಲಿ ಒಂದು ಮಹತ್ವದ ದೇಶವಾಗಿ ಮೂಡಿ ಬಂದಿದೆ. ಕ್ಯೂಬಾ ಅಮೆರಿಕಾದ ಆರ್ಥಿಕ ದಿಗ್ಬಂಧನಗಳು ಸೃಷ್ಟಿಸಿದ ಹಲವು ತೊಂದರೆಗಳನ್ನು ಮೀರಿ ನಿಂತಿದೆ. ಅದರ ಆರ್ಥಿಕ ಜಗದ್ವಿಖ್ಯಾತ ಸಾರ್ವಜನಿಕ ಶಿಕ್ಷಣ ಮತ್ತು ಆರೋಗ್ಯ ವ್ಯವಸ್ಥೆಗಳನ್ನು ಕಾಯ್ದುಕೊಳ್ಳುತ್ತಲೇ ಬೆಳವಣಿಗೆಯನ್ನು ದಾಖಲಿಸಿದೆ. ವೆನೆಜುವೆಲಾದೊಂದಿಗೆ ಅದರ ಮೈತ್ರಿ ಲ್ಯಾಟಿನ್ ಅಮೆರಿಕಾದಲ್ಲಿ ನವ ಉದಾರವಾದಿ ಮಾದರಿಗೆ ಒಂದು ಬದಲಿಯಲ್ಲಿ ಹೊಸ ಜೀವ ಮತ್ತು ಹುರುಪನ್ನು ತುಂಬಿದೆ. ಕೊರಿಯಾ ಪ್ರಜಾಸತ್ತಾತ್ಮಕ ಜನತಾ ಗಣರಾಜ್ಯ (ಡಿಪಿಆರ್‌ಕೆ) ‘ದುಷ್ಟ ಕೂಟ’ದ ದೇಶಗಳಲ್ಲಿ ಒಂದು ಎಂದು ಅಮೆರಿಕ ಗುರಿಯಿಟ್ಟಿತ್ತು. ಅದು ಪರಮಾಣು ಪ್ರಶ್ನೆಯ ಮೇಲೆ ಅಮೆರಿಕನ್ ಬೆದರಿಕೆಯನ್ನು ಯಶಸ್ವಿಯಾಗಿ ಪ್ರತಿರೋಧಿಸಿದೆ. ಆರು ರಾಷ್ಟ್ರಗಳ ಮಾತುಕತೆಗಳ ನಂತರ ಹಾಗೂ ಚೀನಾದ ನೆರವಿನೊಂದಿಗೆ ಪರಮಾಣು ಪ್ರಶ್ನೆಯ ಮೇಲೆ ಅಮೆರಿಕಾ ಒಂದು ಒಪ್ಪಂದಕ್ಕೆ ಬರಬೇಕಾಯಿತು. ಇದು ಉತ್ತರ ಕೊರಿಯಾವನ್ನು ಏಕಾಂಗಿ ಯಾಗಿಸುವಲ್ಲಿ ಅದು ವಿಫಲವಾಗಿರುವುದರ ಸಂಕೇತ. ಈ ನಡುವೆ ಉತ್ತರ ಮತ್ತು ದಕ್ಷಿಣ ಕೊರಿಯಾದ ನಡುವೆ ಸಂವಾದ ಮುಂದುವರೆಯುತ್ತಿದೆ.

# ಪ್ರಚಾರಾಂದೋಲನ....

ಪುಟ 5 ರಿಂದ

ಕೃಷಿ ಕಾರ್ಮಿಕರಿಗೆ ಸಾಮಾಜಿಕ ಭದ್ರತೆಯನ್ನು ಒದಗಿಸುವ ಸಮಗ್ರ ಕಾಯ್ದೆಯೊಂದನ್ನು ಅಂಗೀಕರಿಸಲು ಕೇಂದ್ರ ಸರ್ಕಾರ ಹಿಂದೇಟು ಹಾಕುತ್ತಾ ಬಂದಿದೆ. ಡಾ: ಅರ್ಜುನ್ ಸೇನ್ ಗುಪ್ತಾ ನೇತೃತ್ವದ ಅಸಂಘಟಿತ ವಲಯದ ಆಯೋಗ ನೀಡಿದ ಶಿಫಾರಸಿನಂತೆ ಅಸಂಘಟಿತ ವಲಯದ ಕಾರ್ಮಿಕರ ಮಸೂದೆಯನ್ನು ಪಾಸ್‌ಮಾಡುವ ಬದಲು ಭಾರತ ಸರ್ಕಾರ ಒಂದು ಕಲ್ಯಾಣ ಮಸೂದೆಯನ್ನು ತರಲು ಮುಂದಾಗಿದೆ. ಈಗ ಇರುವ ಬೀಡಿ ಕಾರ್ಮಿಕರ ಕಲ್ಯಾಣ ನಿಧಿಯಾಗಲಿ, ಕಟ್ಟಡ ಕಾರ್ಮಿಕರ ಕಲ್ಯಾಣ ಮಂಡಳಿಯಾಗಲಿ ಸಮರ್ಪಕವಾಗಿ ಕಾರ್ಯನಿರ್ವಹಿಸುತ್ತಿಲ್ಲ.

ಇಂತಹ ಕಾರ್ಮಿಕರಿಗೆ ಮುಖ್ಯವಾಗಿ ಬೇಕಾಗಿರುವುದು ಖಚಿತವಾದ ಕನಿಷ್ಠ ಕೂಲಿ, ಕೆಲಸದ ಸೌಲಭ್ಯಗಳು ಮತ್ತು ಸಾಮಾಜಿಕ ಭದ್ರತೆ. ಇವುಗಳನ್ನು ಒದಗಿಸುವುದು ಸರ್ಕಾರದ ಸಂವಿಧಾನದ ಬದ್ಧ ಜವಾಬ್ದಾರಿಯಾಗಿದೆ.

ಸಮರಶೀಲವಾದ ಚಳುವಳಿ ಇಲ್ಲದಿದ್ದರೆ ನಮ್ಮ ಹಕ್ಕುಗಳು ಸಂವಿಧಾನದ ಗ್ರಂಥದಲ್ಲಿ ಮಾತ್ರ ಉಳಿಯುತ್ತವೆ.

**ಗುತ್ತಿಗೆ ಕಾರ್ಮಿಕರು :** ಕಾಯಂ ಸ್ವರೂಪದ ಕೆಲಸಗಳ ಮೇಲೆ ಉದಾರೀಕರಣದ ದಾಳಿ ತೀವ್ರವಾಗುತ್ತಿದೆ. ಸರ್ಕಾರ ಕಾರ್ಖಾನೆಗಳಲ್ಲಿ, ಕಛೇರಿಗಳಲ್ಲಿ ಕಾಯಂ ಕಾರ್ಮಿಕರ/ನೌಕರರ ಸಂಖ್ಯೆಯನ್ನು ಕಡಿತ ಮಾಡಲು ಪ್ರೋತ್ಸಾಹ ನೀಡುತ್ತಿದೆ. ಕಾಯಂ ಸ್ವರೂಪದ ಕೆಲಸಗಳಿಗೆ ಗುತ್ತಿಗೆ ಕಾರ್ಮಿಕರ ನೇಮಕಕ್ಕೆ ಕುಮ್ಮಕ್ಕು ಕೊಡಲಾಗುತ್ತಿದೆ. ರಾಜ್ಯದಲ್ಲಿ ಗುತ್ತಿಗೆ ಕಾರ್ಮಿಕರ ಸಲಹಾಸಮಿತಿ ಸಭೆಯನ್ನು ಸರ್ಕಾರ ಉದ್ದೇಶ ಪೂರ್ವಕವಾಗಿ ಕರೆಯುತ್ತಿಲ್ಲ. ಗುತ್ತಿಗೆ ಕಾರ್ಮಿಕರನ್ನು ಕಾಯಂಗೊಳಿಸುವ, ಅವರಿಗೆ ಸಮಾನವೇತನ/ಸೌಲಭ್ಯಗಳನ್ನು ನೀಡುವ ಬೇಡಿಕೆಯನ್ನು ಕಡೆಗಣಿಸಲಾಗುತ್ತಿದೆ.

ಕಾರ್ಖಾನೆಗಳಲ್ಲಿ, ಕಛೇರಿಗಳಲ್ಲಿ, ಸಾರಿಗೆ, ವಿದ್ಯುತ್, ಪ್ರಸಾರ, ಮುನಿಸಿಪಾಲಿಟಿ, ಆಸ್ಪತ್ರೆ ಮೊದಲಾದ ಕಡೆ ದುಡಿಯುತ್ತಿರುವ ಗುತ್ತಿಗೆ ಕಾರ್ಮಿಕರ ಪ್ರಭಲವಾದ ಹೋರಾಟವಿಲ್ಲದೆ ಈ ದಾಳಿಯನ್ನು ತಪ್ಪಿಸಲಾಗದು

**ಮನೆ ನಿವೇಶನಗಳಿಗಾಗಿ :** ನಗರಗಳು ಬೆಳೆಯುತ್ತಿವೆ, ಹಳ್ಳಿಗಳು ಹಾಳಾಗುತ್ತಿವೆ. ಉದ್ಯೋಗ ಹುಡುಕಿಕೊಂಡು ಬೆಂಗಳೂರಿನಂತಹ ಮೆಟ್ರೊಪಾಲಿಟನ್ ನಗರಗಳಿಗೆ ಬರುವವರ ಸಂಖ್ಯೆ ಗಣನೀಯವಾಗಿ ಹೆಚ್ಚಾಗುತ್ತಿದೆ. ನಗರಗಳಲ್ಲಿ ವಸತಿಯ ಪ್ರಶ್ನೆ ಗಂಭೀರವಾಗುತ್ತಿದೆ. ದುಡಿದಿದ್ದೆಲ್ಲವೂ ಮನೆ ಬಾಡಿಗೆಗೆ ಹೋಗುತ್ತಿದೆ, ಆದರೆ ಇನ್ನೊಂದು ಕಡೆ ನಗರಗಳ ಆಸುಪಾಸಿನಲ್ಲಿದ್ದ ಸಾವಿರಾರು ಎಕರೆ ಸರ್ಕಾರಿ ಭೂಮಿಯನ್ನು ಕಬಳಿಸಿ ಬಳಸಿಕೊಳ್ಳಲು ಸರ್ಕಾರ ಆಳುವ ಪಕ್ಷಗಳ ರಾಜಕಾರಣಿಗಳಿಗೆ, ಅಧಿಕಾರಿಗಳಿಗೆ, ಮತ್ತಿತರ ಭೂಮಾಫಿಯಾಗಳಿಗೆ ಅವಕಾಶ ಮಾಡಿಕೊಟ್ಟಿದೆ. ಸ್ವಂತ ಮನೆ/ನಿವೇಶನ ಇಲ್ಲದ ಬಡವರಿಗೆ ಸಬ್ಸಿಡಿ ದರದಲ್ಲಿ ಅದನ್ನು ಒದಗಿಸಬೇಕಾದ್ದು ಸರ್ಕಾರದ ಜವಾಬ್ದಾರಿ, ಮನೆ/ನಿವೇಶನ ಒದಗಿಸುವ ಸರ್ಕಾರಿ ಯೋಜನೆಗಳು ನಿಜವಾದ ವಸತಿರಹಿತ ಬಡವರಿಗೆ ತಲುಪಿಲ್ಲ, ಗ್ರಾಮೀಣ ಪ್ರದೇಶಗಳಲ್ಲಿಯೂ ಸರ್ಕಾರಿ ಭೂಮಿಯಲ್ಲಿ ಗುಡಿಸಲು/ಮನೆಕಟ್ಟಿಕೊಂಡಿರುವ ಬಡವರಿಗೆ ಹಕ್ಕುಪತ್ರಗಳನ್ನು ನೀಡಲಾಗುತ್ತಿಲ್ಲ.

ಮನೆಇಲ್ಲದ ಬಡವರು ನಗರಗಳಲ್ಲಾಗಲಿ, ಹಳ್ಳಿಗಳಲ್ಲಾಗಲಿ, ಎಲ್ಲರೂ ಒಂದಾಗಿ ಬೇಡಿಕೆ ಈಡೇರುವವರೆಗೆ ಬಿಟ್ಟುಬಿಡದ ಹೋರಾಟಕ್ಕೆ ಸಜ್ಜಾಗಬೇಕಿದೆ.

**ಕೃಷಿ ಉತ್ಪನ್ನಗಳಿಗೆ ಬೆಂಬಲ ಬೆಲೆ**

ಸಾಲದ ಬಾಧೆಯಿಂದ ಆತ್ಮಹತ್ಯೆ ಮಾಡಿಕೊಂಡ ರೈತರ ಸಂಖ್ಯೆ 2 ಲಕ್ಷ ದಾಟಿದೆ. ಆ ಕುಟುಂಬಗಳಿಗೆ ಯಾವುದೇ ಪರಿಹಾರ ಸಿಕ್ಕಿಲ್ಲ. ಕೇಂದ್ರ ಸರ್ಕಾರ 2008-09 ರ ಬಜೆಟ್‌ನಲ್ಲಿ ದೇಶದ ಸಣ್ಣ ಮತ್ತು ಮಧ್ಯಮ ರೈತರ ಸಾಲ ಮನ್ನಾ ಮಾಡಲು ಪ್ಯಾಕೇಜ್ ಪ್ರಕಟಿಸಿರುವುದು ಸ್ವಾಗತಾರ್ಹವಾಗಿದೆ. ಆದರೆ 70 ಶೇ. ರಷ್ಟಿರುವ ರೈತರ ಖಾಸಗಿ ಸಾಲಕ್ಕೆ ಇದರಿಂದ ಪರಿಹಾರ ಸಿಗಲಾರದು. ಇನ್ನು ಮುಂದೆಯಾದರೂ ಎಲ್ಲಾ ರೈತರಿಗೆ/ಕೃಷಿಕೂಲಿಕಾರರಿಗೆ ಸಾಂಸ್ಥಿಕ ಸಾಲ ದೊರೆಯುವಂತೆ ಸರ್ಕಾರ ಕ್ರಮ ಕೈಗೊಳ್ಳವುದು ಅಗತ್ಯವಿದೆ ಮತ್ತು ಡಾ.ಸ್ವಾಮಿನಾಥನ್ ಆಯೋಗದ ಶಿಫಾರಸಿನಂತೆ 4 ಶೇ. ದರದಲ್ಲಿ ರೈತರಿಗೆ ಸಾಲ ಒದಗಿಸುವುದು ಆಗಬೇಕಾಗಿದೆ.

ಆದರೆ, ಕೃಷಿಯಲ್ಲಿ ಜಾರಿಯಾಗಿರುವ ಉದಾರೀಕರಣದಿಂದಾಗಿ ಉಂಟಾಗಿರುವ ಬಿಕ್ಕಟ್ಟು-ಇಷ್ಟಕ್ಕೇ ಇತ್ಯರ್ಥ ಆಗದು. ರೈತರ ಕೃಷಿ ಉತ್ಪನ್ನಗಳಿಗೆ ಯೋಗ್ಯ ಬೆಲೆ ಸಿಗಬೇಕಾದದ್ದು ಅತಿಮುಖ್ಯ, ಸಬ್ಸಿಡಿಗಳ ಕಡಿತ, ಬೇಸಾಯದ ವೆಚ್ಚಗಳು ದುಬಾರಿಯಾಗಿ ರೈತರು ತತ್ತರಿಸಿದ್ದಾರೆ. ರೈತರು ಕಬ್ಬು ಬೆಳೆಯುತ್ತಾರೆ. ಆದರೆ ಸಕ್ಕರೆ ಕಾರ್ಖಾನೆಗಳು ಕಬ್ಬನ್ನು ಅರೆಯುವುದಿಲ್ಲ. ಈ ಸಲ ಟನ್ ಒಂದಕ್ಕೆ ರೂ.1200 ಕೊಡಬೇಕೆಂದು ಒತ್ತಾಯಿಸಿ ಇಷ್ಟೊಂದು ಹೋರಾಟಗಳು ನಡೆದರೂ ಸರ್ಕಾರ ಒಂದು ಸರಿಯಾದ ಸಕ್ಕರೆ ನೀತಿಯನ್ನು ರೂಪಿಸಿ ಕಬ್ಬು ಬೆಳೆಗಾರರನ್ನು ಕಾಪಾಡಲು ಮುಂದೆ ಬರುತ್ತಿಲ್ಲ. ತೆಂಗು, ಅಡಿಕೆ, ಹತ್ತಿ, ತೊಗರಿ, ಮೆಣಸಿನಕಾಯಿ, ಭತ್ತ, ಜೋಳ, ರಾಗಿ, ಈರುಳ್ಳಿ, ಟೊಮೆಟೊ ಮೊದಲಾದ ಉತ್ಪನ್ನಗಳಿಗೂ ಯೋಗ್ಯ ಬೆಲೆ ಸಿಗದಿದ್ದರೆ ರಾಜ್ಯದಲ್ಲಿ ಕೃಷಿಯನ್ನು ಉಳಿಸಿಕೊಳ್ಳುವುದೇ ಸಾಧ್ಯವಾಗದು. ಸರ್ಕಾರ ವೈಜ್ಞಾನಿಕವಾಗಿ ಬೆಂಬಲ ಬೆಲೆ ಘೋಷಿಸಿ, ಮಾರುಕಟ್ಟೆಗೆ ಪ್ರವೇಶಮಾಡಿ ಕೃಷಿ ಉತ್ಪನ್ನ ಖರೀದಿ ಮಾಡಲು ಮುಂದಾಗಬೇಕು. ಕೃಷಿ ಉತ್ಪನ್ನಗಳ ಬೆಲೆ ಸ್ಥಿರೀಕರಣ ನಿಧಿಯನ್ನು ಸ್ಥಾಪಿಸಿ ಕೃಷಿಯನ್ನೂ, ಕೃಷಿಕರನ್ನೂ ಉಳಿಸಬೇಕಾಗಿದೆ.

ನಾಡಿನ ರೈತರು ಪಕ್ಷಾತೀತವಾಗಿ, ವಿಶಾಲವಾಗಿ ಒಂದುಗೂಡಿ ಹೋರಾಡಲು ಮುಂದಾಗಬೇಕಿದೆ. ಕಾರ್ಮಿಕ ವರ್ಗ ರೈತರ ಹೋರಾಟಕ್ಕೆ ಸಂಪೂರ್ಣ ಬೆಂಬಲ ನೀಡಬೇಕಿದೆ.

**ಉದ್ಯೋಗ ಖಾತ್ರಿ ಯೋಜನೆ ಸಮರ್ಪಕವಾಗಿ ಜಾರಿಯಾಗಬೇಕು**

ಎಡ ಪಕ್ಷಗಳು ಒತ್ತಡ ಹಾಕಿ ಮತ್ತು ಜನತೆಯನ್ನು ಅಣಿನೆರೆಸಿದ್ದರಿಂದ ಗ್ರಾಮೀಣ ಉದ್ಯೋಗ ಖಾತ್ರಿ ಮೂಲ ಮಸೂದೆಯನ್ನು ಇನ್ನಷ್ಟು ಉತ್ತಮ ಪಡಿಸಿ ಕಾಯ್ದೆಯಾಗಿ ಅಂಗೀಕರಿಸಲು ಸಾಧ್ಯವಾಯಿತು. ಇದು ಸಮರ್ಪಕವಾಗಿ ಜಾರಿಯಾದರೆ ಹಳ್ಳಿಗಳಿಂದ ನಗರಗಳಿಗೆ ವಲಸೆ ಹೋಗುತ್ತಿರುವ ಕೃಷಿ ಕಾರ್ಮಿಕರಿಗೆ ಮತ್ತು ಬಡ ರೈತರಿಗೆ ಅವರವರ ಗ್ರಾಮಗಳಲ್ಲೇ ವರ್ಷದಲ್ಲಿ ಕನಿಷ್ಠ 100 ದಿನಗಳ ಕೆಲಸ ಗ್ಯಾರಂಟಿಯಾಗಲಿದೆ. ಮಹಿಳೆಯರಿಗೂ ಪುರುಷರೊಂದಿಗೆ ಸಮಾನ ಕೂಲಿ ದೊರೆಯಲಿದೆ. ಕೂಲಿ ಹಣವನ್ನು ಬ್ಯಾಂಕ್ ಮೂಲಕ ಪಾವತಿ ಮಾಡುವುದರಿಂದ, ಮಧ್ಯವರ್ತಿಗಳ ವಂಚನೆಗೆ ಅವಕಾಶವಿಲ್ಲ. ಆದರೆ ಈ ಯೋಜನೆಯನ್ನು ಜಾರಿ ಮಾಡುವಲ್ಲಿ ರಾಜ್ಯ ಸರ್ಕಾರ, ಅಧಿಕಾರಿಗಳು ಅಷ್ಟೇನು ಆಸಕ್ತಿ ತೋರುತ್ತಿಲ್ಲ. ನಮ್ಮ ಒತ್ತಡ, ಹೋರಾಟವಿಲ್ಲದೆ ಇದು ಬಡ ಕೂಲಿಕಾರರಿಗೆ ತಲುಪದು. ಕೆಲಸ ಬಯಸುವ ಗ್ರಾಮೀಣ ಪುರುಷರು ಮತ್ತು ಮಹಿಳೆಯರು ಸ್ವಸಹಾಯ ಗುಂಪುಗಳ ಮಾದರಿಯಲ್ಲಿ ಸಂಘಟಿತರಾಗಿ ಉದ್ಯೋಗಕ್ಕಾಗಿ ಗ್ರಾಮಪಂಚಾಯಿತಿಗಳಲ್ಲಿ ಅರ್ಜಿಸಲ್ಲಿಸಬೇಕು. ಕೆಲಸಕ್ಕಾಗಿ, ಮಾಡಿದ ಕೆಲಸಕ್ಕೆ ಸಕಾಲದಲ್ಲಿ ಸರಿಯಾಗಿ ಕೂಲಿ ಪಾವತಿ ಮಾಡಲು, ಕೆಲಸ ಕೊಡದಿದ್ದಾಗ ನಿರುದ್ಯೋಗ ಪರಿಹಾರ ಪಡೆಯಲು ಸಂಘಟಿತ ಪ್ರಯತ್ನ ಅಗತ್ಯವಿದೆ. ಈಗ ನೀಡಲಾಗುತ್ತಿರುವ ದಿನಗೂಲಿಯನ್ನು ಕನಿಷ್ಠ ರೂ 125 ಕ್ಕೆ ಏರಿಸಲು ಸಂಘಟಿತ ಹೋರಾಟಕ್ಕೆ ಮುಂದಾಬೇಕಾಗಿದೆ.

ಉದ್ಯೋಗ ಖಾತ್ರಿ ಯೋಜನೆ ಸಮರ್ಪಕ ಜಾರಿಗಾಗಿ ಉದ್ಯೋಗ ಬಯಸುವ ಗ್ರಾಮೀಣ ಕೂಲಿಕಾರರ ಹೋರಾಟ ತೀವ್ರಗೊಳ್ಳಬೇಕಿದೆ.

**ದಲಿತರ ಹಕ್ಕುಗಳಿಗಾಗಿ**

ರಾಜ್ಯದ ಜನಸಂಖ್ಯೆಯ ಶೇ. 22.76 ರಷ್ಟಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಜನರ ಅಭಿವೃದ್ಧಿಯಾಗದೆ ನಮ್ಮ ರಾಜ್ಯದ ಅಭಿವೃದ್ಧಿ ಸಾಧ್ಯವಿಲ್ಲ. ಬಹುದೊಡ್ಡ ಸಂಖ್ಯೆಯಲ್ಲಿ ಅವರು ಭೂಮಿ, ಉದ್ಯೋಗ, ಶಿಕ್ಷಣದಂತಹ ಮೂಲಭೂತ ಹಕ್ಕುಗಳಿಂದ ವಂಚಿತರಾಗಿದ್ದಾರೆ. ಅದಕ್ಕಿಂತಲೂ ಹೆಚ್ಚಾಗಿ, ನಮ್ಮ ಸಮಾಜದಲ್ಲಿ ಇನ್ನೂ ಜಾರಿಯಲ್ಲಿರುವ ಅನೇಕ ರೀತಿಯ ಅಸ್ಪೃಶ್ಯತಾ ಆಚರಣೆಗಳಿಂದಾಗಿ ಅವರು, ಮುಖ್ಯವಾಗಿ ದಲಿತ ಯುವ ಪೀಳಿಗೆ ತೀವ್ರವಾದ ಮಾನಸಿಕ ಹಿಂಸೆಯನ್ನು ಅನುಭವಿಸುತ್ತಿದ್ದಾರೆ. ಜಾತಿ ಪದ್ಧತಿ, ಅಸ್ಪೃಶ್ಯತೆ ನಮ್ಮ ಸಮಾಜಕ್ಕೆ ಅಂಟಿಕೊಂಡಿರುವ ಒಂದು ದೊಡ್ಡ ಅನಿಷ್ಟ ಎಂದು ನಾವೆಲ್ಲರೂ ಒಪ್ಪಿಕೊಳ್ಳಬೇಕು. ದಲಿತರ ಮೇಲೆ ಆಗುತ್ತಿರುವ ದೌರ್ಜನ್ಯಗಳನ್ನು ತಡೆಗಟ್ಟಲು, ದೌರ್ಜನ್ಯವೆಸಗುವವರ ವಿರುದ್ಧ ಕಠಿಣ ಕಾನೂನು ಕ್ರಮ ಜರಗಿಸುವಂತೆ ಒತ್ತಾಯಿಸಲು ಸಮಾಜದ ಎಲ್ಲ ವಿಭಾಗದ ಜನಗಳು ಮುಂದಾಗಬೇಕಿದೆ.

ಸಾಮಾಜಿಕ ನ್ಯಾಯಕ್ಕಾಗಿ ನಡೆಯಬೇಕಾದ ಹೋರಾಟವು ವರ್ಗ ಹೋರಾಟದ ಅವಿಭಾಜ್ಯ ಅಂಗವಾಗಿದೆ.

**ಸಾಚಾರ್ ಸಮಿತಿಯ ಶಿಫಾರಸುಗಳ ಜಾರಿಗಾಗಿ**

ದೇಶದ ಜನಸಂಖ್ಯೆ ಶೇ. 13.4 ರಷ್ಟಿರುವ ಮುಸಲ್ಮಾನರು ಬಹುತೇಕ ಬಡವರಾಗಿದ್ದು ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಅವಕಾಶವಂಚಿತರಾಗಿದ್ದಾರೆ. ಶಿಕ್ಷಣ ಮತ್ತು ಉದ್ಯೋಗ ದೊರಕದೆ ಇರುವುದು ಮುಸ್ಲಿಂ ಯುವಜನರಲ್ಲಿ ಹತಾಶೆ ಬೆಳೆಯಲು ಮುಖ್ಯ ಕಾರಣವಾಗಿದೆ. ಹಿಂದೂ ಕೋಮುವಾದಿಗಳಿಂದ ನಿರಂತರವಾಗಿ ದಾಳಿಗೊಳಗಾಗುತ್ತಿರು ವುದರಿಂದ ಅವರು ತೀವ್ರ ಅಭದ್ರತೆಯನ್ನು ಎದುರಿಸುತ್ತಿದ್ದಾರೆ. ಅವರ ಆರ್ಥಿಕ-ಸಾಮಾಜಿಕ ಮತ್ತು ಶೈಕ್ಷಣಿಕ ಸ್ಥಿತಿಗತಿಗಳನ್ನು ಅಭ್ಯಸಿಸಿ ನ್ಯಾಯಮೂರ್ತಿ ಡಾ:ರಾಜೇಂದ್ರ ಸಾಚಾರ್ ಸಮಿತಿಯು ನೀಡಿದ ವರದಿಯು ಅವರ ವಾಸ್ತವ ಚಿತ್ರಣವನ್ನು ನೀಡಿದೆ. ಸಾಚಾರ್ ವರದಿಯ ಆಧಾರದಲ್ಲಿ ಈ ಸಲದ ಬಜೆಟ್‌ನಲ್ಲಿ ಕೆಲವು ಕ್ರಮಗಳನ್ನು ತೆಗೆದುಕೊಂಡದ್ದು ಸ್ವಾಗತಾರ್ಹವಾಗಿದೆ. ಆದರೆ ಅದು ಸಾಲದು. ಸಿಪಿಐ(ಎಂ) ಕೇಂದ್ರ ಸರ್ಕಾರದ ಮುಂದೆ ಇಟ್ಟಿರುವ ಹಲವಾರು ಕ್ರಮಗಳನ್ನು ಜಾರಿಗೆ ತರಬೇಕೆಂದು ಒತ್ತಾಯ ತರಬೇಕಿದೆ.

ಮುಸ್ಲಿಂ ಸಮುದಾಯ ಪ್ರಜಾಸತ್ತಾತ್ಮಕ ಚಳುವಳಿಯೊಂದಿಗೆ ಹೆಚ್ಚೆಚ್ಚು ಗುರುತಿಸಿ ಕೊಂಡು ಹೋಗುವುದರಲ್ಲೇ ಅವರ ಹಿತ ಅಡಗಿದೆ.

**ದುಡಿಯುವ ವರ್ಗದ ಐಕ್ಯತೆ ಮುರಿಯುವ ಯತ್ನ**

ಜನರ ಜೀವನದ ನಿಜವಾದ ಸಮಸ್ಯೆಗಳನ್ನು ಆಧರಿಸಿ ಪ್ರಾಮಾಣಿಕ ಹೋರಾಟವನ್ನೆಂದೂ ಮಾಡದ ಭಾರತೀಯ ಜನತಾ ಪಕ್ಷ (ಬಿಜೆಪಿ)ವು ಭಾವನಾತ್ಮಕವಾದ ಪ್ರಶ್ನೆಗಳು, ಕೋಮು ಗಲಭೆ, ಕೋಮುದ್ವೇಷವನ್ನು ಹರಡುತ್ತಾ ಜನರ ಐಕ್ಯತೆಯನ್ನು ಒಡೆಯುವ ಕೆಲಸವನ್ನು ನಿರಂತರವಾಗಿ ನಡೆಸುತ್ತಿದೆ.

ದುಡಿಯುವ ಜನರು ತಮ್ಮ ಜ್ವಲಂತ ಸಮಸ್ಯೆಗಳ ಪರಿಹಾರಕ್ಕಾಗಿ ಹೆಚ್ಚೆಚ್ಚು ಐಕ್ಯತೆಯಿಂದ ಒಂದಾಗಬೇಕಾದ ಮುಂದಾಗಬೇಕಾದ ಕಾಲದಲ್ಲಿ ಬಿಜೆಪಿಯು ಮತೀಯ ದ್ವೇಷದ ಆಧಾರದಲ್ಲಿ ದುಡಿಯುವ ಜನರ ಐಕ್ಯತೆಯನ್ನು ಮುರಿಯುವ ಕೆಲಸ ಮಾಡುತ್ತಿರುವುದು ಅತ್ಯಂತ ಅಪಾಯಕಾರಿಯಾಗಿದೆ. ಜಾತಿ, ಮತಗಳಂತಹ ಸಂಕುಚಿತ ಭಾವನೆಗಳನ್ನು ಮೀರಿದ ಐಕ್ಯ ಆಂದೋಲನವೊಂದೇ ತಮ್ಮ ಹಿತಾಸಕ್ತಿಗಳನ್ನು ಕಾಯುವ ದಾರಿ ಎಂಬುದನ್ನು ದುಡಿಯುವ ಜನತೆ ಹೆಚ್ಚೆಚ್ಚು ಮನದಟ್ಟು ಮಾಡಿಕೊಳ್ಳಬೇಕಿದೆ. ○

# ಅಂಗನವಾಡಿ ಕಾರ್ಯಕರ್ತೆಯರು ಕೆಲಸ ಕಳೆದುಕೊಳ್ಳಬೇಕೆ?...

ಪುಟ 9 ರಿಂದ

ಕೊಟ್ಟು ಆಯ್ಕೆಯಾಗಿರುವುದು. ಅದು ಕೂಡಾ ಆಯಾ ಕ್ಷೇತ್ರದ ಶಾಸಕರ ಪಕ್ಷದಲ್ಲಿರುವವರು. ಅದರಲ್ಲಿ ಹಲವೆಡೆ ನಿಯಮಾವಳಿಗಳನ್ನು ಮೀರಲಾಗಿದೆ. ಅಷ್ಟೇ ಅಲ್ಲ ಇಡೀ ಇಲಾಖೆಯೇ ಇದರ ಅಡಿಯಾಳಾಗಿ ಯಾವುದೇ ಕಾರ್ಯಕರ್ತೆ ವರ್ಗಾವಣೆ ಬಯಸಿದರೆ, ಯಾವುದೇ ಸಹಾಯಕಿ ಮುಂಬಡ್ತಿ ಕೇಳಿದರೆ ಅದಕ್ಕೂ ಲಂಚ, ಶಾಸಕರಿಂದ ಒಪ್ಪಿಗೆ ಪತ್ರ ತಂದರೆ ಮಾತ್ರ.

ಇಂತಹ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ಅಂಗನವಾಡಿ ನೌಕರರ ಸಂಘ (ಸಿಐಟಿಯು) ಹಲವಾರು ಹೋರಾಟಗಳನ್ನು ನಡೆಸಿ ಶಾಸಕರ ಕೆಂಗಣ್ಣಿಗೂ ಗುರಿಯಾಗಿ ಕೆಲವರಿಗೆ ನ್ಯಾಯವನ್ನು ಕೊಡಿಸಿದೆ. ಅಧಿಕಾರಿ ವರ್ಗವು ಯಾರಾದರೂ ಈ ವಿಚಾರದಲ್ಲಿ ಮಾತಾಡಲು ಹೋದರೆ ಅವರಿಂದ ಹಣ ವಸೂಲಿ ಎಷ್ಟೆಗಿತ್ತು ಎಂಬ ಲೆಕ್ಕಾಚಾರದ ಮೇಲೆಯೇ ಕೆಲಸ ಎಂಬ ಧೋರಣೆ ತೋರಿದ್ದು ಕೂಡಾ ಅಷ್ಟೇ ಸತ್ಯ.

ವರ್ಗಾವಣೆ ಸಿಗದಿದ್ದವರೂ ಕೋರ್ಟ್‌ಗೆ ಹೋದರೂ. ಜಿಲ್ಲಾ ಪಂಚಾಯಿತಿ ಸದಸ್ಯರು ಕೋರ್ಟ್‌ಗೆ ಹೋದರು. ಅರ್ಹತೆ ಇದ್ದು ಕೆಲಸ ಸಿಗದಿದ್ದವರು ಕೋರ್ಟ್‌ಗೆ ದೂರಿದರು. ಹೀಗೆ ಒಟ್ಟು 36 ಜನರು ಎಲ್ಲ ದೂರುಗಳು ಒಂದಾಗಿ ಅಂತಿಮ ಕೋರ್ಟ್‌ನ ನಿರ್ಣಯ ಶಾಸಕರ ಅಧ್ಯಕ್ಷತೆಯಲ್ಲಿ ಆಯ್ಕೆ ಮಾಡಬೇಕೆಂಬ ಸುತ್ತೋಲೆಯನ್ನು ಅನೂರ್ಜಿತಗೊಳಿಸಿ ಆದೇಶ ಹೊರಡಿಸಲಾಗಿದೆ. ಈ ಆದೇಶ ಮೇಲ್ನೋಟಕ್ಕೆ ಸರಿಯಿದ್ದರೂ ಇದರ ಗಂಭೀರ ಪರಿಣಾಮ ಇದ್ಯಾವುದರ ಪ್ರಜ್ಞೆಯಿಲ್ಲದ ಬಡ ಮಹಿಳೆಯರ ಮೇಲೆ ಆಗಿದೆ.

ಈಗಾಗಲೇ ಇವರು ಹಣವನ್ನು ಕಳೆದುಕೊಂಡು, ಕೆಲಸವನ್ನು ಕಳೆದುಕೊಳ್ಳಬೇಕಾದ ಪರಿಸ್ಥಿತಿ ಇದೆ. ಕೆಲವರು ಮಾನಸಿಕ ಧೈರ್ಯವನ್ನು ಕಳೆದುಕೊಳ್ಳುವ ಸಂದರ್ಭಗಳು ಇವೆ.

ಇಲಾಖೆಯ ಅಸಮರ್ಥತೆಯಿಂದ ಮತ್ತು ರಾಜಕಾರಣಿಗಳ ಅಧಿಕಾರದಾಸೆಗೆ ಬಲಿಯಾಗಿ 7194 ಅಂಗನವಾಡಿ ಕಾರ್ಯಕರ್ತೆಯರು ಕೆಲಸ ಕಳೆದು ಕೊಳ್ಳಬೇಕಾದ ಪರಿಸ್ಥಿತಿ ಬಂದಿದೆ.

ಈಗ ನಮ್ಮ ಮುಂದಿರುವ ಸವಾಲು ಇದೇ ಮಹಿಳೆಯರನ್ನು ಕೆಲಸದಲ್ಲಿ ಮುಂದುವರಿಬೇಕು. ಅದಕ್ಕಾಗಿ ವಿಶೇಷ ನಿರ್ದೇಶನವನ್ನು ಕೇಂದ್ರ ಸರ್ಕಾರದಿಂದಲೇ ಪಡೆದು ಇವರನ್ನು ಪುನ: ಅಂಗನವಾಡಿ ಕಾರ್ಯಕರ್ತೆಯರಾಗಿ ನೇಮಕಾತಿ ಮಾಡಬೇಕೆಂದೂ ಒತ್ತಾಯಿಸಿ ಮಾರ್ಚ್ 1ರಂದು ರಾಜ್ಯದಾದ್ಯಂತ ಎಲ್ಲೆಡೆ ಹೋರಾಟಗಳು ನಡೆದಿವೆ. ಈ ಹೋರಾಟಕ್ಕೆ ಜಯವಾಗಲೆಂದೂ ನೀವು ಹಾರೈಸುತ್ತಿರಲ್ಲವೆ!

ವಿಶೇಷ ಕಾನೂನು ರಚನೆಯ ಮೂಲಕ ಈ ಅಂಗನವಾಡಿ ನೌಕರರನ್ನು ಉದ್ಯೋಗದಲ್ಲಿ ಮುಂದುವರೆಸಲು ಅಗತ್ಯವಾದ ಕ್ರಮ ಕೈಗೊಳ್ಳಬೇಕೆಂದು ಹಾಗೂ ಅಂಗನವಾಡಿಗಳಲ್ಲಿ ಒದಗಿಸುವ ಊಟ ತಯಾರಿಸುವ ಕೆಲಸವನ್ನು ಖಾಸಗೀಕರಿಸಿ ಇಸ್ಕಾನ್‌ಗೆ ನೀಡುವ ಸರ್ಕಾರದ ಪ್ರಯುತ್ನವನ್ನು ವಿರೋಧಿಸಿ ಕರ್ನಾಟಕ ರಾಜ್ಯ ಅಂಗನವಾಡಿ ನೌಕರರ ಸಂಘ (ಸಿಐಟಿಯು) ರಾಜಧಾನಿ ಬೆಂಗಳೂರಿನಲ್ಲಿ ರಾಜ್ಯ ಮಟ್ಟದ ಅನಿರ್ಧಿಷ್ಟಾವಧಿ ಹೋರಾಟವನ್ನು ಇದೇ ಮಾರ್ಚ್ 18ರಿಂದ ಆರಂಭಿಸುತ್ತಿದೆ. ○

# ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ

## ಮಹಿಳೆಗೊಂದು ದಿನ ಯಾಕೆ?

### ಮಹಿಳೆಯ ಅಂದಿನ ಸ್ಥಿತಿ ಏನಿತ್ತು? ಇಂದು ಏನಿದೆ? ಒಂದು ಅವಲೋಕನ

ಯಮುನಾ ಗಾಂವ್ಕರ್

ಅಮರ್ತ್ಯ ಸೇನ್‌ರವರು ಹೇಳಿದಂತೆ ಬದುಕಿನ ಎಲ್ಲಾ ಮುಖಗಳಲ್ಲೂ ಅವರು ಒಂದೋ ಕಾಣೆಯಾಗಿದ್ದಾರೆ, ಕಳೆದುಹೋಗುತ್ತಿದ್ದಾರೆ, ಇಲ್ಲವಾಗುತ್ತಿದ್ದಾರೆ ಇಲ್ಲವೇ ದೈನೇಸಿ ಬದುಕು ಸಾಗಿಸುತ್ತಿದ್ದಾರೆ. ಹೆಣ್ಣು ಭ್ರೂಣವಾಗಿ ತಾಯಿಯ ಗರ್ಭ ಸೇರಿದಾಗಿನಿಂದ ಅಂತಿಮವಾಗಿ ಭೂಮಿಯ ಗರ್ಭ ಸೇರುವವರೆಗೆ ತಾರತಮ್ಯ, ಪಕ್ಷಪಾತ ಮತ್ತು ನಿರ್ಲಕ್ಷ್ಯಕ್ಕೆ ಒಳಗಾಗುತ್ತಿದ್ದಾಳೆ. ಪುರುಷಶಾಹಿಯು ವಿಜೃಂಭಿಸುವ ಈ ಸಮಾಜದಲ್ಲಿ ಅಭಿವೃದ್ಧಿಯು ಕೇವಲ ಏಕಲಿಂಗಿ ಪ್ರಕ್ರಿಯೆಯಾಗಿ ಚಿತ್ರಿಸಲ್ಪಡುತ್ತಿದೆ. ಮಹಿಳೆ ಮೂಲತಃ ಸ್ವತಃ ಉತ್ಪಾದಕಳು, ಅವಳ ದುಡಿಮೆಯ ಗಾತ್ರ ವಿಸ್ತಾರವಾದುದು, ದೇಶದ ಪ್ರಗತಿಗೆ ಬಹುದೊಡ್ಡ ಕೊಡುಗೆ ಮಹಿಳೆಯಿಂದ ಲಭಿಸುತ್ತಿದೆ ಎಂಬ ಸತ್ಯವನ್ನು ಒಪ್ಪದ ಆರ್ಥಿಕ ಅಭಿವೃದ್ಧಿ ಮೀಮಾಂಸಕರುಗಳಿಗೆ ಸೆಟೆದು ನಿಲ್ಲುವ ಸಮಯ - ಅಂತರ್ರಾಷ್ಟ್ರೀಯ ಮಹಿಳಾ ದಿನ.

ಅಂದು: 19ನೇ ಶತಮಾನದ ಆರಂಭದ ಕಾಲಘಟ್ಟದಲ್ಲಿ, ಔದ್ಯೋಗಿಕ ಬೆಳವಣಿಗೆಯ ವಿಸ್ತಾರದಿಂದಾಗಿ ಮಹಿಳೆಯರು ಕೂಡ ಪುರುಷರಿಗೆ ಸರಿಸಮವಾಗಿ ನಿಂತು, ದುಡಿಮೆಗೆ ತೆರೆದುಕೊಂಡರು. ಆದರೆ ಲಿಂಗತಾರತಮ್ಯ, ಕೂಲಿ ಕಡಿಮೆ, ರಾತ್ರಿ ಪಾಳಿ ಕೆಲಸದ ಒತ್ತಡ, ಹೆರಿಗೆ ಸೌಲಭ್ಯವಿಲ್ಲದಿರುವುದು, ವಿಶ್ರಾಂತಿರಹಿತ ದುಡಿತ, ಮತದಾನದ ಹಕ್ಕಿಲ್ಲದ ಹಂಗಿನ ಜೀವನ, ಸಾಮಾಜಿಕ ದಬ್ಬಾಳಿಕೆ, ಆರ್ಥಿಕವಾಗಿ ಕಂಗೆಟ್ಟ ನೂರಾರು ದರಿದ್ರ ಸ್ಥಿತಿಯಿಂದ ಪಾರಾಗಲು ಯೂರೋಪಿನಾದ್ಯಂತ ಹೋರಾಟದ ಕಣ ಸಿದ್ಧವಾಗತೊಡಗಿತು. ಇದಕ್ಕೆಲ್ಲ ಧ್ವನಿಯಾಗಿ ಜರ್ಮನಿಯ ಕ್ಲಾರಾ ಐಸ್ನರ್ ಜಟ್ಕಿನ್ ಪ್ಯಾರಿಸ್ ಕಮ್ಯೂನ್‌ನಿಂದ ಸ್ಫೂರ್ತಿ ಪಡೆದು ಅಂತರಾಷ್ಟ್ರೀಯ ವೇದಿಕೆಗಳಲ್ಲಿ ಪ್ರಚಾರಾಂದೋಲನಕ್ಕೆ ನೇತೃತ್ವ ನೀಡಿದರು. 1908ರ ಫೆಬ್ರವರಿ ಮತ್ತು ಮಾರ್ಚ್ 8ರಂದು ಅಮೆರಿಕಾದ ಗಾರ್ಮೆಂಟ್ಸ್ ಮಹಿಳೆಯರು 10 ಗಂಟೆ ಮಾತ್ರ ಕೆಲಸಕ್ಕಾಗಿ, ಲಿಂಗ ಮತ್ತು ಕೂಲಿ ತಾರತಮ್ಯದ ವಿರುದ್ಧ ಮತ್ತು ಮತದಾನದ ಹಕ್ಕಿಗಾಗಿ ಮ್ಯಾನ್‌ಹಟನ್ ಮತ್ತು ನ್ಯೂಯಾರ್ಕ್‌ನಲ್ಲಿ ಬೃಹತ್ ಪ್ರದರ್ಶನ ನಡೆಸಿದರು. ಇವರ ಮೇಲೆ ಆಳುವವರ ನಿರ್ದಯದ ದಾಳಿ ಎಸಗಲ್ಪಟ್ಟಿತು. ಹೊಸ ಬದುಕಿನ ಆಶಾಕಿರಣಕ್ಕಾಗಿ ನಡೆದ ಹೋರಾಟದ ಮಹತ್ವದ ನೆನಪಿನಲ್ಲಿ, ಕೊಪನ್ ಹೆಗನ್‌ನಲ್ಲಿ ಸೇರಿದ ಅಂತರ್ರಾಷ್ಟ್ರೀಯ ಸಮಾಜವಾದಿ ಮಹಿಳಾ ಅಧಿವೇಶನವು ಮಾರ್ಚ್ 8ರಂದು ಅಂತರ್ರಾಷ್ಟ್ರೀಯ ಮಹಿಳಾ ದಿನವೆಂದು ಘೋಷಿಸಿತು. ಇದು ಪ್ರಪಂಚದಾದ್ಯಂತ ಪ್ರತಿಧ್ವನಿಸಿತು.

ಇಂದು: ಜಾಗತಿಕ ಅಧಿಪತ್ಯಕ್ಕಾಗಿ ಹೊಸ ದಾಳಿಗಳು ನಡೆಯುತ್ತಿರುವ ಪ್ರಕ್ರಿಯೆಯಿಂದ ಮಹಿಳೆಯರ ಸ್ಥಿತಿ ಅತ್ಯಂತ ಘೋರವಾಗುತ್ತಿದೆ. ಯುದ್ಧ, ಹಿಂಸೆ, ಜನಾಂಗೀಯ ಮತ್ತು ಅಂತರ್‌ಧರ್ಮೀಯ ಕಲಹಗಳು- ಇವೆಲ್ಲದರಿಂದ ಕಂಗೆಟ್ಟ ಪರಿಸ್ಥಿತಿಯ ವಿರುದ್ಧ ಭಾರತವನ್ನು ಒಳಗೊಂಡು ಪ್ರಪಂಚದಾದ್ಯಂತ ವಿವಿಧ ಜನವಿಭಾಗದ ಚಳುವಳಿಯೊಂದಿಗೆ ಮಹಿಳೆಯರ ಚಳುವಳಿ ಸಾಗರೋಪಾದಿಯಲ್ಲಿ ಬೆಳೆಯುತ್ತಿದೆ. ಅಂದಿನ ಸಮಸ್ಯೆಗಳು ಇಂದು ಇನ್ನಷ್ಟು ಹರಿತವಾಗಿ ಮುಂದುವರೆದಿವೆ.

ನಮ್ಮ ದೇಶದಲ್ಲಿ ಸಂಘಟಿತ ಕ್ಷೇತ್ರಕ್ಕಿಂತ ಅಸಂಘಟಿತ ಕ್ಷೇತ್ರದಲ್ಲಿ ಅತ್ಯಂತ ಕೆಳಸ್ತರದ ಕೆಲಸಗಳಲ್ಲಿ ಹೆಚ್ಚು ಮಹಿಳೆಯರು ದುಡಿಯುವಂತಾಗಿದೆ. ದಿನವೊಂದಕ್ಕೆ 20 ರೂಪಾಯಿಗೂ ಕಡಿಮೆ ಕೂಲಿ, ಕನಿಷ್ಠ ಮೂಲಸೌಕರ್ಯಗಳಾದ ಶೌಚಾಲಯ, ಕುಡಿಯುವ ನೀರು, ಶಿಶುಪಾಲನಾ ಕೇಂದ್ರ, ಹೆರಿಗೆ ಸೌಲಭ್ಯ, ಕಾನೂನು ನಿಗದಿಪಡಿಸಿದ ಕನಿಷ್ಠ ಕೂಲಿ ಇಲ್ಲದೇ ಜೀವ ಹಿಡಿದಿಟ್ಟುಕೊಳ್ಳಲು ಅನಿವಾರ್ಯವಾಗಿ ತಮ್ಮ ಕುಟುಂಬ ನಿರ್ವಹಣೆಗಾಗಿ ಇಂಥ ಕೆಲಸ ಮಾಡಬೇಕಾಗಿದೆ. ಲೈಂಗಿಕ ಕಿರುಕುಳ, ಸಾಮಾಜಿಕ ಅಭದ್ರತೆಯ ತೂಗುಗತ್ತಿಯ ಭಯ ಸದಾ ಇದ್ದೇ ಇದೆ. ಜವಳಿ ಮತ್ತು ಸಿದ್ಧ ಉಡುಪು ಕಾರ್ಖಾನೆಗಳು, ಅಂಗನವಾಡಿ, ಬಿಸಿಯೂಟ, ಕಟ್ಟಡ ನಿರ್ಮಾಣ, ಹಮಾಲಿ ಕೆಲಸಗಳಲ್ಲಿ, ಬೀಡಿ, ಪ್ಲಾಂಟೇಷನ್, ಹಂಚು, ತೆಂಗಿನನಾರು, ಮೀನು, ಗೋಡಂಬಿ ಹಾಗೂ ಹೂಗಳ ಸಂಸ್ಕರಣಾ ಘಟಕಗಳಲ್ಲಿ ಲಕ್ಷಾಂತರ ಮಹಿಳಾ ಕಾರ್ಮಿಕರು ದುಡಿಯುತ್ತಿದ್ದಾರೆ. ಯುವತಿಯರನ್ನು ಆಕರ್ಷಣೆಯ ಸರಕಾಗಿ ಬಳಸುತ್ತಿರುವ ಕಾಲ್ ಸೆಂಟರ್‌ಗಳಲ್ಲಿ ಶೇ.40ಕ್ಕೂ ಹೆಚ್ಚು ಯುವತಿಯರು ದುಡಿಯುತ್ತಿದ್ದಾರೆ. ಹೊಲ ಗದ್ದೆಗಳಲ್ಲಿ 10-12 ತಾಸು




ದುಡಿಯುವ ರೈತ-ಕೃಷಿ ಕೂಲಿಕಾರ ಮಹಿಳೆಯರು, ಬರಗಾಲದ ಬವಣೆಯಿಂದ ಬೇಸತ್ತು ಹುಟ್ಟೂರಲ್ಲಿ ನೆಲೆ ನಿಲ್ಲಲಾಗದ ಅಸಂಖ್ಯಾತ ವಲಸೆ ಕಾರ್ಮಿಕರು, ಬೃಹತ್ ಬೆಂಗಳೂರಿನಲ್ಲಿ ಆಳುವವರ ಕಣ್ಣಿನ ಅಡಿಯಲ್ಲಿರುವ ಲಕ್ಷಾಂತರ ಮಹಿಳಾ ಕಾರ್ಮಿಕರು ಹೀಗೆ ಪಟ್ಟಿ ಬೆಳೆಯುತ್ತಲೇ ಹೋಗುತ್ತದೆ. ಎಲ್ಲಾ ವಿಭಾಗಗಳಲ್ಲಿ ದುಡಿಯುತ್ತಿರುವ ಮಹಿಳೆಯರಿಗೆ ಲೈಂಗಿಕ ಕಿರುಕುಳದ ವಿರುದ್ಧ ರಕ್ಷಣೆ ಪಡೆಯಲು ಸರ್ವೋಚ್ಚ ನ್ಯಾಯಾಲಯದ 1997ರ ತೀರ್ಪು ಇನ್ನೂ ಕಾನೂನಾಗಿ ಜಾರಿಯಾಗಿಲ್ಲ. ಮುಷ್ಕರದ ಹಕ್ಕು ಸಂವಿಧಾನಬದ್ಧಗೊಳ್ಳುತ್ತಿಲ್ಲ, ಜನಪರ ಕಾಯ್ದೆಗಳು ಜಾರಿಯಾಗುತ್ತಿಲ್ಲ, ರಾಜಕೀಯವಾಗಿ ಮಹಿಳಾ ಮೀಸಲಾತಿ ಕಾಯ್ದೆ ಅಂಗೀಕೃತವಾಗಿಲ್ಲ, ಕೌಟುಂಬಿಕ ದೌರ್ಜನ್ಯ ತಡೆ ಕಾಯ್ದೆ ಸಮರ್ಪಕವಾಗಿ ಜಾರಿಯಾಗಿಲ್ಲ, ಹೆಣ್ಣು ಭ್ರೂಣಹತ್ಯೆ ಅವ್ಯಾಹತವಾಗಿ ನಡೆದಿದೆ. ಇವೆಲ್ಲವೂ ಮಹಿಳೆಯನ್ನು ದುಡಿಯುವ ಮಹಿಳೆಯಾಗಿಯೂ ಇನ್ನಷ್ಟು ಶೋಷಣೆಯತ್ತ ನೂಕಿವೆ.

ಶೋಷಣೆ ಮತ್ತು ಲಿಂಗಾಧಾರಿತ ತಾರತಮ್ಯಗಳು ಸಂಘಟಿತ ಮತ್ತು ಅಸಂಘಟಿತ ವಲಯಗಳೆರಡರಲ್ಲೂ ವ್ಯಾಪಕವಾಗಿದೆ. ಒಟ್ಟಾರೆಯಾಗಿ ಮಹಿಳೆಯರ ಸಮಸ್ಯೆಗಳ ಅರಿವು ಮತ್ತು ಅವುಗಳ ನಿವಾರಣೆಯತ್ತ ಸರ್ಕಾರಕ್ಕೆ ದಿವ್ಯ ನಿರ್ಲಕ್ಷ್ಯವಿದೆ. ಮಹಿಳಾಪರ ಕಾನೂನುಗಳ ಜಾರಿಗೆ ರಾಜಕೀಯ ಇಚ್ಛಾಶಕ್ತಿಯ ಕೊರತೆಯಿದೆ..

ಈ ಎಲ್ಲ ವಿಭಾಗದ ದುಡಿಯುವ ಮಹಿಳೆಯರು ಸಂಘರ್ಷದ ಹಾದಿಯಲ್ಲಿ ನ್ಯಾಯಕ್ಕಾಗಿ ಕಾದಿದ್ದಾರೆ. ಆದರೆ ದುಡಿಯುವ ಕೈಗಳನ್ನು ವಿಭಾಗಿಸುವ ಕೋಮುವಾದಿಗಳು ವ್ರತಾಚರಣೆ, ಮೂಢನಂಬಿಕೆ, ಜಾತಿ-ಧರ್ಮ, ದ್ವೇಷ, ಕಂದಾಚಾರ ಬೆಳೆಸಲು ಮಹಿಳೆಯರನ್ನು ಅಸ್ತ್ರವಾಗಿಸುತ್ತಿದ್ದಾರೆ.

**ಅಂತಿಮವಾಗಿ, ಮಾಡ ಬೇಕಾದ್ದೇನು?**

ಭಾರತದ ಸಂಕೀರ್ಣ ಸಾಮಾಜಿಕ, ಸಾಂಸ್ಕೃತಿಕ ಬದುಕನ್ನು ಛಿದ್ರಗೊಳಿಸಲು ಹಾತೊರೆಯುತ್ತಿರುವ ಇಂದಿನ ಜಾಗತೀಕರಣ ನೀತಿಗಳು, ಹಲವಾರು ರಾಷ್ಟ್ರಗಳ ಆರ್ಥಿಕತೆ-ಆಡಳಿತವನ್ನು ದಿವಾಳಿಯೆಬ್ಬಿಸಿದ ಉದಾರೀಕರಣ ನೀತಿಗಳು, ಜನರನ್ನು ದೈತ್ಯ ಶ್ರೀಮಂತ, ಶ್ರೀಮಂತ, ಬಡವ, ಕಡುಬಡವ, ನಿರ್ಗತಿಕರೆಂದು ವಿಭಾಗಿಸುವ ಸ್ತ್ರೀ ಪುರುಷರ ಮಧ್ಯೆಯ ಅಸಮಾನತೆಯನ್ನು ಹೆಚ್ಚಿಸುವ ಖಾಸಗೀಕರಣ ನೀತಿಗಳ ವಿರುದ್ಧ ಸರ್ವ ಸಮಾನತೆಗಾಗಿ, ಸ್ವಾತಂತ್ರ್ಯಕ್ಕಾಗಿ ಮಾರ್ಚ್ 8ನ್ನು ದುಡಿಯುವ ಮಹಿಳೆಯರ ಹೋರಾಟದ ಮುನ್ನಡೆಯಾಗಿ ದುಡಿಯುವ ಮಹಿಳೆಯರ ಸಮನ್ವಯ ಸಮಿತಿ (ಸಿಐಟಿಯು), ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ(ಎಐಡಿಡಬ್ಲ್ಯೂಎ), ಮಹಿಳಾ ಉಪಸಮಿತಿ (ಐಸಿಇಯು), ಮಹಿಳಾ ಉಪಸಮಿತಿ (ಕೇಂದ್ರ ಸರ್ಕಾರಿ ನೌಕರರ ಸಮನ್ವಯ ಸಮಿತಿ), ಮಹಿಳಾ ಉಪಸಮಿತಿ (ಅಖಿಲ ಕರ್ನಾಟಕ ಗ್ರಾಮೀಣ ಬ್ಯಾಂಕ್ ನೌಕರರ ಒಕ್ಕೂಟ) ಜಂಟಿಯಾಗಿ ಆಚರಿಸುತ್ತಿವೆ.




## 'ತ್ರಿಪುರ ಸಂಭ್ರಮ' - ರಾಜ್ಯದೆಲ್ಲೆಡೆ ಗೆಲುವಿನ ಸಂತಸದ ಆಚರಣೆ

ತ್ರಿಪುರದಲ್ಲಿ ಸಿಪಿಐ(ಎಂ) ನೇತೃತ್ವದ ಎಡರಂಗ ವಿಜಯಯಾತ್ರೆ ಸಾಗುತ್ತಿದ್ದಂತೆ ರಾಜ್ಯದೆಲ್ಲೆಡೆ ಗೆಲುವಿನ ಸಂತಸದ ಆಚರಣೆಯನ್ನು ಕಾರ್ಯಕರ್ತರು ಹಮ್ಮಿಕೊಂಡಿದ್ದರು.

ಬೆಂಗಳೂರಿನಲ್ಲಿ ಪಕ್ಷದ ರಾಜ್ಯಸಮಿತಿ ಕಛೇರಿಯಿಂದ ಹೊರಟ ಸಿಪಿಐ(ಎಂ) ಕಾರ್ಯಕರ್ತರು ಕಾರ್ಪೋರೇಷನ್ ಕಚೇರಿ ಬಳಿಯ ವೃತ್ತದಲ್ಲಿ ಸಭೆ ನಡೆಸಿದರು. ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ [illegible] ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಕೆ.ಎನ್.ಉಮೇಶ್, ರಾಜ್ಯ ಸಮಿತಿ ಸದಸ್ಯರಾದ ಬಾಲಕೃಷ್ಣಶೆಟ್ಟಿ ಮೊದಲಾದವರು ಮಾತನಾಡಿ ಕರ್ನಾಟಕದಲ್ಲಿ ಎಡಪಕ್ಷಗಳನ್ನು ಅದರಲ್ಲೂ ಸಿಪಿಐ(ಎಂ)ನ್ನು ಬೆಳೆಸುವ ಅವಶ್ಯಕತೆಯನ್ನು ವಿವರಿಸಿದರು. ಜನರ ಐಕ್ಯತೆಯನ್ನು ಒಡೆಯುವ ಶ್ರೀಮಂತರ ಪರವಾಗಿರುವ ಕೋಮುವಾದಿ ಬಿಜೆಪಿಯನ್ನು ಮುಂದಿನ ಚುನಾವಣೆಯಲ್ಲಿ ಸೋಲಿಸಲು ಕರೆ ನೀಡಿದರು.

ಕೋಲಾರ ಜಿಲ್ಲೆಯ ಕೋಲಾರ, ಕೆಜಿಎಫ್, ಚಿಕ್ಕಬಳ್ಳಾಪುರ ಜಿಲ್ಲೆಯ ಬಾಗೇಪಲ್ಲಿ, ಬಳ್ಳಾರಿ ಜಿಲ್ಲೆಯ ಬಳ್ಳಾರಿ, ಹೊಸಪೇಟೆ, ರಾಯಚೂರು ಜಿಲ್ಲೆಯ ರಾಯಚೂರು [illegible] ಮತ್ತು ತುಮಕೂರು, ಮಂಗಳೂರು, ಗುಲ್ಬರ್ಗಾ, ಮೈಸೂರು ಮೊದಲಾದೆಡೆ [illegible] ಆಚರಣೆ ನಡೆದ ವರದಿಗಳು ಬಂದಿವೆ.

ಕೊಪ್ಪಳ ಜಿಲ್ಲೆಯ ಗಂಗಾವತಿ, ತಕ್ಕಲಕೋಟೆ, ಸಿರುಗುಪ್ಪ, [illegible]

JANASHAKTHI KANNADA VARA PATRIKE : Printed by G.N.NAGARAJ, No 12. 18th Cross, S.R.Nagar, BANGALORE-560027 Published by: G.N.NAGARAJ, No 12. 18th Cross, S.R.Nagar, BANGALORE-560027, Karnataka on behalf of / owned by COMMUNIST PARTY OF INDIA (MARXIST) and Printed at : Kriya Prakashana, 12, 18th Cross, S.R.Nagar, BANGALORE - 560027 Karnataka (State) and Published at BANGALORE No 12.18th Cross, S.R.Nagar, BANGALORE-560027 Editor S.Y.GURURSHANTH, No12. 18th Cross, S.R.Nagar, BANGALORE - 560027
Editor : S.Y.GURUSHANTH